ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ.ಪ್ರಕಾಶ್: (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಮಾನವ ಹಕ್ಕುಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 11–07–2007ರ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 3 ನೇ ಪಟ್ಟಿಯಲ್ಲಿರುವ 69 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಚಿಕ್ಕ ಮಗಳೂರು ಜಿಲ್ಲೆಯಲ್ಲಿ ನಕ್ಸಲಿಯರ ಚಟುವಟಿಕೆ ಕುರಿತು ನಿಲುವಳಿ ಸೂಚನೆ ಮಂಡಿಸಲು ಅವಕಾಶ ಕೋರಿಕೆ.

ಶ್ರೀ ಎನ್ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಈಗ ಚಿಕ್ಕ ಮಗಳೂರು ಜಿಲ್ಲೆಯಲ್ಲಿ.........

ಅಧ್ಯಕ್ಷರು: ತಾವು ಎದ್ದು ನಿಂತುಕೊಂಡ ತಕ್ಷಣ ನನಗೆ ಅರ್ಥವಾಯಿತು. ಈಗ ಎರಡು adjournment notice ಬಂದಿದೆ.

ಶ್ರೀ ಎನ್.ಧರ್ಮಸಿಂಗ್: ಎರಡೂ ಸಹ ಒಂದೇ ವಿಚಾರವಿದೆ.

ಅಧ್ಯಕ್ಷರು: ಇಲ್ಲ ಬೇರೆ ಬೇರೆ ವಿಷಯವಿದೆ. ಮೊದಲು ಅವರಿಂದ notice ಬಂದಿದೆ. ನಾವು ನಿಯಮದ ಪ್ರಕಾರ ದಿವಸಕ್ಕೆ ಎರಡು adjournment motion ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಅವರಿಗೆ ನಾನು ಈಗ ಅವಕಾಶ ಕೊಡುತ್ತೇನೆ. ದಯಮಾಡಿ ನಾನು ಹೇಳುವುದನ್ನು ಕೇಳಿ.

ಶ್ರೀ ಎನ್.ಧರ್ಮಸಿಂಗ್: ರಾಜ್ಯಕ್ಕೆ ಜರೂರಿಯಾದಂಥ ನಕ್ಸಲರಿಂದ ಪೋಲೀಸ್ ಹಲ್ಲೆಯಿಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಮಾಯಕರ ಹತ್ಯೆಯಾಗಿದೆ.

ಅಧ್ಯಕ್ಷರು: ತಾವು ಪ್ರಸ್ತಾಪ ಮಾಡುತ್ತಿರುವ ವಿಷಯವನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಬೇರೆ ರೂಪದಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದರೆ ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎನ್.ಧರ್ಮಸಿಂಗ್: ಅದರ ಬಗ್ಗೆ ಚರ್ಚೆಯಾಗಬೇಕಲ್ಲ. ಅದಕ್ಕೋಸ್ಕರ ಆ ವಿಷಯವನ್ನು ತೆಗೆದುಕೊಳ್ಳಿ. ನಕ್ಸಲೈಟ್ ಚಟುವಟಿಕೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಆದ್ಯತೆ ಕೊಡಬೇಕು. ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಎನ್ ಧರ್ಮಸಿಂಗ್: ಸರ್ಕಾರ ಉತ್ತರ ಕೊಡಬೇಕು. ಸರ್ಕಾರ Sou-motu statement ಕೊಡಮಾಡಲಿ. ಅದನ್ನು ಅವರು ಮೊದಲು ಮಾಡಲಿ. ಪತ್ರಿಕೆಗಳಲ್ಲಿ ಬಂದಿರುವುದನ್ನು ಜನ ಓದುತ್ತಿದ್ದಾರೆ. ಆ ಭಾಗದಲ್ಲಿ ಜನರು ತತ್ತರಿಸಿ ಹೋಗಿದ್ದಾರೆ. ಇವತ್ತು ನಕ್ಸಲರನ್ನು ಹತ್ತಿಕ್ಕಬೇಡಿ ಎಂದೇನೂ ನಾವು ಹೇಳುತ್ತಿಲ್ಲ. ಸರ್ಕಾರ ಈ ಕೆಲಸವನ್ನು ಮಾಡಲಿ. ರಾಮೇಗೌಡರು ಮತ್ತು ಅವರ ಪತ್ನಿ ಕಾವೇರಿ ಹಾಗೂ ಇತರ ಐದು ಜನ ಅಮಾಯಕರ ಹತ್ಯೆಯಾಗಿದೆ. ಇವತ್ತಿನ ದಿವಸ ಸರ್ಕಾರದ ವಿರುದ್ಧ ಜನತೆ ಬಹಳಷ್ಟು ಆಕ್ರೋಷ ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಮಾಡುತ್ತಿದೆ? ಅದರ ಬಗ್ಗೆ ಮೊದಲು ಚರ್ಚೆಯಾಗಲಿ. ಅದಾದ ಮೇಲೆ ಮಾನ್ಯ ಮಾಧುಸ್ವಾಮಿಯವರ adjournment motion ನಾಳೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು: ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅಲ್ಲಿ ಅಮಾಯಕರನ್ನು ಕೊಂದಿದ್ದಾರೆ.ಅದರ ಬಗ್ಗೆ ಅವರೂ ಕೊಟ್ಟಿದ್ದಾರೆ. ನಾವೂ ಕೊಟ್ಟಿದ್ದೇವೆ.

ಇದರ ಬಗ್ಗೆ ಸಮಗ್ರವಾದಂಥಹ ಚರ್ಚೆಯಾಗಬೇಕು. ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಸರ್ಕಾರವೇ ಹೇಳಿಕೆಯೊಂದನ್ನು ಈಗಾಗಲೇ ಕೊಡಬೇಕಾಗಿತ್ತು. ಆದರೆ ಸರ್ಕಾರದವರು ಯಾವುದೇ ಹೇಳಿಕೆ ಕೊಟ್ಟಿಲ್ಲ. ಅದರ ಬಗ್ಗೆ ಕನಿಷ್ಠ ನಾವಾದರೂ ಚರ್ಚೆ ಮಾಡಬೇಕಾಗಿದೆ. ಆದ್ದರಿಂದ ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ನಾವೇನೂ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿಲ್ಲ. ಸರ್ಕಾರದ ಕಾರ್ಯತಂತ್ರವೇನು? ಅಲ್ಲಿ ಏನಾಗಿದೆ? ಎಂಬ ಬಗ್ಗೆ ರಾಜ್ಯದ ಜನತೆಗೆ ಗೊತ್ತಾಗಬೇಕು. ಮಾನ್ಯ ಗೃಹ ಸಚಿವರು ಇಲ್ಲೇ ಇದ್ದಾರೆ. ಅವರು Sou-motu statement ಮಾಡಲಿ. ಅವರು statement ಮಾಡಿದಮೇಲೆ ಅದರ ಬಗ್ಗೆ ವಿವರ ವಾದಂಥ ಚರ್ಚೆಯಾಗಲೇಬೇಕು.........

ಅಧ್ಯಕ್ಷರು: ಮೊದಲು ಅವರಿಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್: ಏನೊಂದು ಕಾರ್ಯಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ? ಪೋಲೀಸ್ ಇಲಾಖೆ ತೆಗೆದುಕೊಂಡಿದೆ? ಎಂಬುದರ ಬಗ್ಗೆ ಸದನದಲ್ಲಿ Sou-motu statement ಮಾಡಲಿ. ಅದರ ಮೇಲೆ ಚರ್ಚೆ ಮಾಡೋಣ. ನಂತರ ಮಾನ್ಯ ಮಾಧುಸ್ವಾಮಿಯವರು ತೆಗೆದುಕೊಳ್ಳಿ.

ಅಧ್ಯಕ್ಷರು: ದಯಮಾಡಿ ನಾಮನು ಹೇಳುವುದನ್ನು ಕೇಳಿ. ಈಗ ಮೊದಲು ಅವರದು ತೆಗದುಕೊಂಡು ಬಿಡುತ್ತೇನೆ. ಏಕೆಂದರೆ ಅವರದು ಮೊದಲು ಬಂದಿದೆ.

ಶ್ರೀ ಮಲ್ಲಿಖಾರ್ಜುನ ಖರ್ಗೆ: ಇಲ್ಲಿ ಮೊದಲು ಅಥವಾ ಹಿಮದಿನದು ಎಂಬ ಪ್ರಶ್ನೆ ಇಲ್ಲ. one hour ಒಳಗಾಗಿ ಅವರದ್ದೂ ಬಂದಿದ್ದರೆ ಅಥವಾ one and half hour ಅವರದ್ದು ಮುಂಚೆ ಬಂದಿದ್ದರೆ opposition leader ಗೆ ರೂಲ್ಸ್ ಪ್ರಕಾರ ಮಾನ್ಯತೆ ಕೊಡಬೇಕು. ಆ ಬಗ್ಗೆ precedents ಇದೆ. ಅದನ್ನು ನಾವು ಅಥವಾ ನೀವು ಡಿಸೈಡ್ ಮಾಡಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು: ದಯಮಾಡಿ ನಾನು ಹೇಳುವುದನ್ನು ಕೇಳಿ

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರದ್ದೂ ಕೇಳಿ. ಮೊದಲು ನಮಗೆ ಅವಕಾಶ ಕೊಡಿ.

ಅಧ್ಯಕ್ಷರು: ಮೊದಲು ಐದು ನಿಮಿಷ ಅವರದ್ದು ಕೇಳೋಣ. ಆನಂತರ ಬೇರೆ ರೂಪದಲ್ಲಿ ಚರ್ಚೆ ಮಾಡಲಿಕ್ಕೆ ನಾನು ಅವಕಾಶವನ್ನು ಮಾಡಿ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಹಾಗೆಯೇ ಮಾಡಿ. ಇನ್ನು ಮೇಲೆ ನೀವು ಬೇರೆಯವರದ್ದು ಕೇಳಲಿಕ್ಕೆ ಹೋಗಬೇಡಿ.

ಅಧ್ಯಕ್ಷರು: ವಿಷಯ ಬೇರೆ ಬೇರೆ ಆಗಿರುವುದರಿಂದ ಮೊದಲು ಅವರಿಗೆ ಪ್ರಸ್ತಾಪಿಸಲು ಅವಕಾಶ ಕೊಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆಯಿತು, ಅವರೇ ಮೊದಲು ಪ್ರಸ್ತಾಪ ಮಾಡಲಿ.

(ಗೊಂದಲ)

ಅಧ್ಯಕ್ಷರು: ನಾನು ನಿಮಗೂ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ: ಮಾನ್ಯ ಗೃಹ ಸಚಿವರು ಇದರ ಬಗ್ಗೆ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದರೆ, ಇದು ಮುಗಿದೇ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು: ಮೊದಲು ಅವರು ಕೊಟ್ಟಿದ್ದಾರೆ. ಆದ್ದರಿಂದ ಮೊದಲು ಐದು ನಿಮಿಷ ಅವರದ್ದು ಕೇಳುತ್ತೇನೆ ಆನಂತರ...........

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಒಂದು ನಿಮಿಷ, ನಾನು ಒಂದು ಮಾತು ಹೇಳಿಬಿಡುತ್ತೇನೆ.

(ಗೊಂದಲ)

ಶ್ರೀ ಧರ್ಮಸಿಂಗ್: ಯಾರು ಏನು ಕೊಟ್ಟಿದ್ದಾರೆ? ಅದರಲ್ಲಿ ಯಾರ ವಿಷಯಕ್ಕೆ ಪ್ರಾಮುಖ್ಯತೆ ಕೊಡಬೇಕು? ಎಂಬುದು ಇಲ್ಲಿಲ್ಲ. ನಮಗಿಂತಲೂ ಅವರದು ಜರೂರಾಗಿರುವ ವಿಷಯವೇ?

ಅಧ್ಯಕ್ಷರು: ಮೊದಲು ಅವರು ಕೊಟ್ಟಿದ್ದಾರೆ. ನಿಯಮಾವಳಿಗಳ ಪ್ರಕಾರ ಮೊದಲು ಮಾತನಡಲು ನಾನು ಅವರಿಗೆ ಅನುಮತಿ ಕೊಡ ಬೇಕಾಗುತ್ತದೆ.

(ಗೊಂದಲ)

ಶ್ರೀ ಧರ್ಮಸಿಂಗ್: I am the leader of the opposition. ನೀವು ನನಗೆ ಮಾತನಾಡಲು allow ಮಾಡಬೇಕು. ಚರ್ಚೆಗೆ ಅವಕಾಶ ಮಾಡಿಕೊಡಲೇಬೇಕು.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಅವರದ್ದು ಆದ ಮೇಲೆ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ನಾನು ಹೇಳಲಿಕ್ಕೂ ಕೂಡ ಅವಕಾಶ ಮಾಡಿಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಮಾನ್ಯ ಮಾಧುಸ್ವಾಮಿಯವರು ಏನು ಹೇಳುತ್ತಾರೋ ಕೇಳೋಣ. ನಿಯಮಾವಳಿಗಳನ್ನು ನಾವು ಫಾಲೋ ಮಾಡೋಣ

(ಗೊಂದಲ)

ಶ್ರೀ ಧರ್ಮಸಿಂಗ್: ತಾವು ಏನು ಹೌಸ್ ನಡೆಸುತ್ತಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ತಾವು ಅಧ್ಯಕ್ಷರಾಗಿ ಸದನವನ್ನು ನಡೆಸಬೇಕಾಗಿದೆ.

ಅಧ್ಯಕ್ಷರು: ನಾನು ಅದನ್ನು ನಡೆಸುತ್ತಿದ್ದೇನೆ. ಚರ್ಚೆಗೆ ನಿಮಗೆ ಅವಕಾಶ ಕೊಡುತ್ತೇನೆಂದರೂ ನೀವು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್: ಮಾನ್ಯ ಗೃಹ ಸಚಿವರೆ, ನೀವು Sou-motu statement ಮಾಡಿ. ಘಟನೆಯಲ್ಲಿ ಏನಾಗಿದೆ ಎಂದು ಸದನಕ್ಕೆ ತಿಳಿಸಿ. ಇದರಿಂದ ರಾಜ್ಯದ ಜನತೆಗೂ ಕೂಡ ಅದರ ಬಗ್ಗೆ ಗೊತ್ತಾಗುತ್ತದೆ. ತಾವು ಏತಕ್ಕಾಗಿ ಸುಮ್ಮನೆ ಕುಳಿತಿದ್ದೀರಿ? ಈಗಾಗಲೇ ತಾವು ಹೇಳಿಕೆ ಕೊಡಬೇಕಾಗಿತ್ತು. ಇನ್ನೂ ಏಕೆ ಮಾಡಿಲ್ಲ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಒಂದು ನಿಮಿಷ ಸಾರ್. ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ. ನಾನು ಹೇಳುವುದನ್ನು ಕೇಳುವುದಕ್ಕೇ ನಿವು ತಯಾರಿಲ್ಲ.

(ಗೊಂದಲ)

ಶ್ರೀ ಧರ್ಮಸಿಂಗ್: ಇದರಲ್ಲಿ ಪ್ರತಿಷ್ಠೆ ವಿಚಾರವಿಲ್ಲ. ನಾನು ಜರೂರು ಸಮಸ್ಯೆ ಬಗ್ಗೆ ಪ್ರಸ್ತಾಪಿಸಲು ಇಲ್ಲಿ ಕೇಳಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ದಯಮಾಡಿ ಒಂದುನಿಮಿಷ ಯೀಲ್ಡ್ ಆಗಿ.

(ಗೊಂದಲ)

ಶ್ರೀ ಧರ್ಮಸಿಂಗ್: ಮಾನ್ಯ ಗೃಹ ಸಚಿವರೇ, ತಾವು ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅರ್ಧಯಕ್ಷರೆ, ನಾನು ಅವರ ಬಗ್ಗೆ ಬಹಳ ಗೌರವ ಇಟ್ಟುಕೊಂಡು ಹೇಳುತ್ತಿದ್ದೇನೆ. ನಾನು ಈ ನಿಯಮದ ಕೆಳಗೆ ಪ್ರಸ್ತಾಪಿಸಲು ಕೊಟ್ಟಾಗ ಅವರು ಬೇರೆ ವಿಚಾರವನ್ನು ಇದೇ ನಿಯಮದ ಅಡಿಯಲ್ಲಿ ಮೂವ್ ಮಾಡುತ್ತಿರುವುದು ನನಗೆ ಗೊತ್ತಿರಲಿಲ್ಲ. Opposition Leader ಅನ್ನು over look ಮಾಡಿ ನನಗೆ ಮಾತನಾಡಲು ಅವಕಾಶ ಕೊಡಿ ಎಂದು ನಾನು ಹೇಳುತ್ತಿಲ್ಲ. ಅವರದಾದ ಮೇಲೆಯೇ ನನಗೆ ಮಾತನಡಲಿಕ್ಕೆ ಅವಕಾಶ ಕೊಡಿ ಎಂದು ನಾನು ಹೇಳುವುದಕ್ಕೂ ಸಹ ಅವರು ಬಿಡಲಿಲ್ಲವೆಂದರೆ, ನಾವು ಈ ಸಭೆಯಲ್ಲಿ ಏನು ಮಾಡಲಿಕ್ಕಾಗುತ್ತದೆ? ಅವರ ಬಗ್ಗೆ ನಾವು ಅಷ್ಟೊಂದು ಗೌರವ ಕೊಟ್ಟಿದ್ದೇ ನಮ್ಮ ಅಪರಾಧವೇ? ನಾನೊಂದು adjournment motion ಅನ್ನು ತರಬಾರದೆಂದಿದೆಯೇ? ಅವರದ್ದು ಮುಗಿದ ಮೇಲೆಯೇ ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ,...............

ಶ್ರೀ ಸಿದ್ದರಾಮಯ್ಯ: are you goint to make a statement?

(ಗೊಂದಲ)

ಅಧ್ಯಕ್ಷರು: ಮಾನ್ಯ ಮಾದುಸ್ವಾಮಿಯವರು ತಮಗೆ ಅವರದ್ದು ಆದ ಮೇಲೆಯೇ ನನಗೆ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿದ್ದಾರೆ. ನಾನು ಅವರಿಗೂ ಅವಕಾಶ ಕೊಡುತ್ತೇನೆ, ನಿಮಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ನಾನು privilage motion notice ಕೊಟ್ಟು 3–4 ದಿವಸಗಳಾಯಿತು. ತಾವು ನನಗೆ ಅದನ್ನು ಪ್ರಸ್ತಾಪಿಸಲು ಅವಕಾಶ ಕೊಡಲೇ ಇಲ್ಲ.

ಅಧ್ಯಕ್ಷರು: ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ನಿಮ್ಮ leader of opposition ಎಷ್ಟು ಗಲಾಟೆ ಮಾಡಿಬಿಟ್ಟರು. ಎಂಬುದನ್ನು ನೀವೇ ನೋಡಿದಿರಿ. ಅವರು ಈಗ ಘರ್ಜನೆ ಮಾಡುತ್ತಿದ್ದಾರೆ. ಅವರ ಮುಂದೆ ಬೇರೇನೂ ನಡೆಯುವುದಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ಈ ವಿಚಾರ ತಕ್ಷಣವೇ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ನಿಮ್ಮ ವಿಚಾರ ಕೇಳುವುದಕ್ಕೆ ನಾವು ಅವಕಾಶ ಕೊಡುತ್ತೇವೆ. ಈಗ ಕುಳಿತುಕೊಳ್ಳಿ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಮ್ಮ ರೂಲ್ಸ್ ಪ್ರಕಾರ ನಿಯಮ 191 ರಲ್ಲಿ privilage Notice ಕೊಟ್ಟರೆ, You have to hear him . ಬೇರೆ ಬೇರೆ ಸಬ್ಜೆಕ್ಟ್ಸ್ ಇಲ್ಲಿ ಪ್ರಸ್ತಾಪವಾಗುತ್ತಿರುವುದರಿಂದ ಪ್ರಸ್ತಾಪ ಮಾಡಲಿಕ್ಕಾಗುತ್ತಿಲ್ಲ. at least, ಯಾವಾಗ ಪ್ರಸ್ತಾಪಿಸಲು ನಿಗದಿ ಮಾಡಿದ್ದೀರಿ, ಎಂಬುದನ್ನಾದರೂ ಅವರಿಗೆ ತಾವು ಹೇಳಬೇಕು. as per rules ಅವರು ಕೊಟ್ಟಾಗ ಅವರಿಗೆ ಅವಕಾಶ ಕೊಡಲೇಬಾಕಾಗುತ್ತದೆ.

ಅಧ್ಯಕ್ಷರು: ಇವತ್ತೇ ಅವರಿಗೆ ಪ್ರಸ್ತಾಪಿಸಲು ಅವಕಾಶ ಕೊಡುತ್ತೇನೆ. I will alllow him

ಶ್ರೀ ಜೆ.ಸಿ.ಮಾಧುಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ಬೆಸ್ಕಾಂ ಸಂಸ್ಥೆಯವರು ಜನವರಿ ಫೆಬ್ರುವರಿಯಲ್ಲಿ ಏನು ತೀರ್ಮಾನ ತೆಗೆದುಕೊಂಡು ಇಡೀ ತಿಪಟೂರು ಡಿವಿಷನ್‌ದ್ದು...............

ಶ್ರೀ ಧರ್ಮಸಿಂಗ್: ಮಾನ್ಯ ಮಾಧುಸ್ವಾಮಿಯವರೆ, ಒಂದು ನಿಮಿಷ ನಾವೇನೂ ನಿಮಗೆ ಅಡ್ಡಿಪಡಿಸುತ್ತಿಲ್ಲ. ಇವತ್ತು ಮಾನ್ಯ ಗೃಹ ಸಚಿವರು statement ಮಾಡಿದ ಮೇಲೆ ನೀವು ಅದನ್ನು ಪ್ರಾರಂಭಿಸಿ. ಮಾನ್ಯ ಗೃಹ ಸಚಿವರೇ ಈಗಲೇ statement ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಆದ್ಯಕ್ಷರೆ, ಮಾನ್ಯ ಮಾಧುಸ್ವಾಮಿ ಯವರದ್ದು emergency ಇದೆ. ಅದನ್ನೇ ಮೊದಲು ತಗೆದುಕೊಂಡಿ ಬಿಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ರೇವಣ್ಣ, ನಿಮಗಿಂತ ಮೊದಲು ವಿದ್ಯೆ ಕಲಿತುಕೊಂಡು ಬಂದಿರುವವನು ನಾನು. ಇದು emergency ಇದೆಯೋ ಇಲ್ಲವೋ ಎಂದು ಮಾನ್ಯ ಅಧ್ಯಕ್ಷರಿಗೆ convince ಮಾಡಲಿಕ್ಕೆ ಯೋಗ್ಯತೆ ಇರುವುದರಿಂದಲೇ ನಾನಿಲ್ಲಿ ಮಾತನಾಡಲಿಕ್ಕೆ ನಿಂತಿದ್ದೇನೆ. ಈ ಆಟವನ್ನೆಲ್ಲಾ ನೀವು ಆಚೆ ಇಟ್ಟುಕೊಳ್ಳಿ. ಇದು ಶಾಸನ ಸಭೆ. ನನಗೆ convince ಮಾಡಲಿಕ್ಕೆ ಯೋಗ್ಯತೆ ಇದ್ದರೆ ಮಾತ್ರ ನಾನು ಅದನ್ನು ಪ್ರಸ್ತಾಪ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ: ನಿಮೆ convince ಮಾಡಲಿಕ್ಕೆ ಯೋಗ್ಯತೆ ಇಲ್ಲವೆಂದು ನಾನು ಹೇಳುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಾನಿಲ್ಲಿ ದಂದೆ ಮಾಡಲಿಕ್ಕೆ ಬಂದಿಲ್ಲ. ವ್ಯಂಗ್ಯ ಆಡುವುದಕ್ಕೂ ಒಂದು ಮಿತಿ ಇಲ್ಲವೆ? we re not here to hear all these things.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಮಾದುಸ್ವಾಮಿಯವರು ಹಿರಿಯ ರಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ಅವರ ವಿಚಾರವನ್ನೇ ಚರ್ಚೆಗೆ ತೆಗೆದುಕೊಳ್ಳಿ ಎಂದು ನಾನು ಹೇಳಿದ್ದು ತಪ್ಪೇ? ಎಂಬುದನ್ನು ನೀವೇ ಹೇಳು. ಅವರ ವಿಚಾರವನ್ನೇ ಚರ್ಚೆಗೆ ತೆಗೆದುಕೊಳ್ಳಿ. ನಾನು ಅದಕ್ಕೆ ಉತ್ತರ ಕೊಡಲಿಕ್ಕೆ ತಯಾರಾಗಿದ್ದೇನೆ ಎಂದು ನಾನು ಹೇಳಿದೆ. ಮಾನ್ಯ ಅಧ್ಯಕ್ಷರೆ, ಅವರು ಪ್ರಸ್ತಾಪ ಮಾಡಲು ಎದ್ದು ನಿಂತಾಗ, ತಾವು ರೇವಣ್ಣನವರೆ, ತಮ್ಮ ವಿಚಾರ

ಚರ್ಚೆಗೆ ಬರುತ್ತಿದೆ ಎಂದು ಹೇಳಿದಿರಿ. ಆಗ ನಾನು ಅದನ್ನೇ ಚರ್ಚೆಗೆ ತೆಗೆದುಕೊಳ್ಳಿ ಸಾರ್, ನಾನು ಉತ್ತರ ಕೊಡಲಿಕ್ಕೆ ಸಿದ್ದನಿದ್ದೇನೆ ಎಂದು ಹೇಳಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇಲ್ಲಿ ನಾವು ದರ್ಬಾರ್ ನಡೆಸಲಿಕ್ಕಾಗಿ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನಾವು ಇಲ್ಲಿ ದರ್ಬಾರ್ ನಡೆಸುತ್ತಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನು ಅಧ್ಯಕ್ಷರೆ, ಏನು ಸಾರ್ ಅವರು ಈ ರಿತಿ ವ್ಯಂಗ್ಯವಾಗಿ ಮಾತನಾಡುವುದೇ? ನನಗೆ emergency ಇದೆ ಎಂದು ಮನವರಿಕೆ ಮಾಡಿಕೊಡಲು ಆಗದಿದ್ದರೆ, ನೀವು ಅದನ್ನು ರಿಜೆಕ್ಟ್ ಮಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಮಾಧುಸ್ವಾಮಿಯವರು ಪ್ರಸ್ತಾಪ ಮಾಡುವುದಕ್ಕೆ ಉತ್ತರ ಹೇಳಲು ನಾನು ರೆಡಿ ಇದ್ದೇನೆ. ಅದನ್ನು ತೆಗೆದುಕೊಳ್ಳಿ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ ಎಂದಷ್ಟೇ ನಾನು ಹೇಳಿದೆ.ಯಾವ ತಮಾಷೆ ಮಾಡಲಿಕ್ಕಾಗಿ ಅಥವಾ ಮಾನ್ಯ ಸದಸ್ಯರಿಗೆ ಅವಮಾನ ಮಾಡಲಿಕ್ಕಾಗಿ ನಾನು ಇಲ್ಲಿಗೆ ಬಂದಿಲ್ಲ. ಯಾವುದೇ ಉತ್ತರ ಹೇಳುವುದಕ್ಕೂ ನಾನು ರೆಡಿ ಇದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್: ದಯವಿಟ್ಟು ಮಾನ್ಯ ಪ್ರತಿಪಕ್ಷದ ನಾಯಕರು ತಪ್ಪು ಭಾವಿಸಬಾರದು. ತಾವೇ ಇದರ ಬಗ್ಗೆ ಸಲಹೆಯೊಂದನ್ನು ಕೊಟ್ಟಿದ್ದೀರಿ. ಮೊದಲನೆಯದಾಗಿ, ಇದರ ಬಗ್ಗೆ suo moto stament ಒಂದನ್ನು ನಾವು ಕೊಡಬಹದು. ಆದರೆ, adjournment Motion ಆಗಿ ಕೊಟ್ಟಿರತಕ್ಕದ್ದರ ಬಗ್ಗೆ ದಾಖಲೆಗೆ ಸರಿಯಾಗಿ ಹೋಗಲಿ ಎಂಬ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ adjournment Motion ಅನ್ನು ಈಗ ತಾವು ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲ. ಏಕೆಂದರೆ, ಕಾನೂನಿನ ವಿವಾದಗಳಿಗೆ ಸಂಬಂಧಪಟ್ಟಂತೆ ವಿಚಾರ law and order ಗೆ ಸಂಬಂಧ ಪಟ್ಟಂಥ ವಿಚಾರ, ಲಾಠಿ ಚಾರ್ಜ್ ಟಥವಾ ಫೈರಿಂಗ್

ಆಗಿರುವಂಥಹ ವಿಚಾರಗಳು ಈ ನಿಲುವಳಿ ಸೂಚನೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂಬ ಬಗ್ಗೆ ಅನೇಕ ಸಾರಿ ಇಲ್ಲಿ ನಿರ್ಣಯ ಆಗಿರತಕ್ಕಂಥದ್ದು ಇದೆ.

> There is along line of rulings not only in the old mysore state, but in every legislature in India and elesewhere on this question. Where the subject matter of an adjournment motion involves the ordinary administration of law and the maintenance of law and order, such a motion would be in admissible. Whether it is a lathi charge or police firing, so long as it was undertaken in the maintenance of law and order, it cannot form the subject of an adjournment motion. As an adjournment motion therefore the matters raised in the several notices are inadmissible and I have, therefore, to hold that all these notices are not in order.

ಈ ತರಹದ ರೂಲಿಂಗ್‌ಗಳು ನೀಡಲಾಗಿರುವ ಹಿನ್ನೆಲೆಯಲ್ಲಿ ಇದು adjournment motion ವ್ಯಾಪ್ತಿಗೆ ಬರುವುದಿಲ್ಲ. ಪ್ರತಿ ಪಕ್ಷದ ನಾಯಕರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯುವರು ಇದು ಬಹಳ ಮಹತ್ವವಾದುದು, ಆದ್ದರಿಂದ ಈ ಬಗ್ಗೆ ನೀವೇ suo moto stament ಮಾಡಿ ಎಂದು ಹೇಳಿರುವುದರಿಂದ, ಈ adjournment motion ಅನ್ನು inadmissible ಎಂದು ಮಾನ್ಯ ಅಧ್ಯಕ್ಷರು reject ಮಾಡ ಬೇಕಾಗುತ್ತದೆ. ಯಾವುದೇ ಮಂತ್ರಿ ಹೇಳಿಕೆಯೊಂದನ್ನು ಕೊಟ್ಟಂತಹ ಸಂದರ್ಭದಲ್ಲಿ ಅದರ ಬಗ್ಗೆ ಚರ್ಚೆಗೆ ಅವಕಾಶ ಇರುತ್ತದೆ. ಇದು ಎಲ್ಲರಿಗೂ ಕೂಡ ಗೊತ್ತಿರುವ ವಿಚಾರವೇ ಆಗಿದೆ. ಹಿಂದೆ ಮಾನ್ಯ ರಮೇಶ್ ಕುಮಾರ್ ರವರೂ ಸಹ ಇಂತಹ ಸಂದರ್ಭಗಳು ಬಂದಾಗ ಚರ್ಚೆಗೆ ಅವಕಾಶವನ್ನು

ಕಲ್ಪಿಸಿಕೊಟ್ಟಿದ್ದಾರೆ. ಇದರ ಬಗ್ಗೆ ಚರ್ಚೆ ಆಗಬೇಕೆಂಬುದೇ ಅವರ ಉದ್ದೇಶವಾಗಿರುವುದರಿಂದ, ತಾವು ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ. ಅವರೇ ಕೊಟ್ಟಂಥಹ ಸಲಹೆ ಮೇರೆಗೆ, ಇದು ಬಹಳ ಮಹತ್ವವಾದಂಥಹ ವಿಚಾರವಾಗಿರುವುದರಿಂದ, ಈ ಬಗ್ಗೆ ನಾನೇ ಒಂದು ಸ್ವಯಂಪ್ರೇರಿತ ಹೇಳಿಕೆಯನ್ನು ಸದನಕ್ಕೆ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಖಾರ್ಜುನ ಖರ್ಗೆ: ಸರ್, ಈಗ ನೀವು ತೆಗೆದು ಕೊಂಡು ಚರ್ಚೆಗೆ ಈಗಲೇ ಅವಕಾಶ ಮಾಡಿಕೊಡಿ ಎಂದು ನಾವು ಒತ್ತಾಯ ಮಾಡಲಿಲ್ಲ. ನಮ್ಮ ಅನಿಸಿಕೆ ಏನೆಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ, ನೆನ್ನೆಯಾದ ಒಂದು ಎನ್‌ಕೌಂಟರ್, ಬಗ್ಗೆ ಸಂಶಯ ಮೂಡಿದೆ. ಅದೇನು ಫಾಲ್ಸ್ ಎನ್‌ಕೌಂಟರೋ, ನಿಜವಾದಂಥದ್ದೋ ಎನ್ನುವ ಒಂದು ಸಂಶಯ ಮೂಡಿದ ಮೇಲೆ, ಇದನ್ನು ನಾವು ಹೆಚ್ಚಿನ ರೀತಿಯಲ್ಲಿ ಬೆಳೆಸುವುದು ಬೇಡ. ಸತ್ಯಾಂಶ ಬೆಳಕಿಗೆ ಬಂದು ಸಾರ್ವಜನಿಕರಿಗೆ ಗೊತ್ತಾಗಲಿ. ಇಡೀ ದೇಶಕ್ಕೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ನಾವು suo moto ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳಿದ್ದೇವೆ. ಅದನ್ನೇ ಅದನ್ನೇ ವಿರೋಧ ಪಕ್ಷದ ನಾಯಕರು ಕೂಡ ಹೇಳುತ್ತಿದ್ದಾರೆ. ಅದನ್ನು ಬಿಟ್ಟು ನೀವು ಕಾನೂನನ್ನು ತೆಗೆದುಕೊಂಡು ಇರು ಫೈರಿಂಗ್ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ, ಇದು ಎನ್‌ಕೌಂಟರ್, ಅದರಲ್ಲಿ ಎನ್‌ಕೌಂಟರ್ ಎಂದು ಇದೆಯಾ?, ಇಲ್ಲ, ಹಾಗಾದರೆ ನೀವು ಒಂದೊಂದು ಶಬ್ದಕ್ಕೂ ಸರ್, ಇದು ಎನ್‌ಕೌಂಟರ್ ಇದೆ, ಇನೊಸೆಂಟ್ ಎಂದ ಮೇಲೆ ಎನ್‌ಕೌಂಟರ್ ಅದಕ್ಕಾಗಿ ಇದು ನಿಲುವಳಿ ಸೂಚನೆಯಲ್ಲಿ ಬರುತ್ತದೆ ತೆಗೆದುಕೊಳ್ಳಿ ಎಂದು ನಾವು ಹೇಳುತ್ತಿದ್ದೇವೆ. ನೀವು ಇಲ್ಲವೆಂದು ಹೇಳಿ, ಅದು ಫೈರಿಂಗಿದ್ದರೆ, ಪೋಲೀಸ್‌ನವರು ಯಾವುದೇ ಲಾಟಿ ಚಾರ್ಜ್ ಮಾಡಿದರೆ ಬರುವುದಿಲ್ಲವೆಂದು ಹೇಳುತ್ತಿರಿ. ಪೋಲೀಸ್ ಲಾಠಿಚಾರ್ಜ್ ಮಾಡಿದರೆ ಬರುವುದಿಲ್ಲ, ಫೈರಿಂಗ್ ಮಾಡಿದರೂ ಬರುವುದಿಲ್ಲ, ಎನ್‌ಕೌಂಟರ್ ಮಾಡಿದರೆ ಬರುತ್ತದೆ ಚರ್ಚೆಗೆ ತೆಗೆದುಕೊಳ್ಳುತ್ತೀರಾ? ಅದಕ್ಕೆ ಈ ಬಗ್ಗೆ ತಕರಾರು ಬೇಡ, ನಾವು ಒಪ್ಪಿಕೊಂಡಿದ್ದೇವಲ್ಲಾ, ನೀವು suo moto ಸ್ಟೇಟ್‌ಮೆಂಟ್ ಮಾಡಿ, ನಮಗೇನೂ ಸಂಶಯಗಳಿವೆ ಅವನ್ನು ನಾವು ಸೇರಿದಂತೆ ಎಲ್ಲಾ ಸದಸ್ಯರು ಕೇಳುತ್ತಾರೆ, ಕ್ಲಾರಿಫೈ ಆಗಲಿ.

ಶ್ರೀ ವಾಟಾಳ್ ನಾಗರಾಜ್: ಸರ್ಕಾರ ಸದನ ನಡೆಯುತ್ತಿರುವಾಗ, ಇಂಥ ವಿಚಾರ ಬಂದಾಗ ತಕ್ಷಣ ನೆನ್ನೆಯೇ ತಾವು ಸದನದಲ್ಲಿ ಹೇಳಿಕೆ ಮಾಡಬೇಕಾಗಿತ್ತು. ಮಧ್ಯೆ ಮಾತನಾಡುವಾಗ ತಾವು ಅರ್ಧಬಂರ್ಧ ಹೇಳಿದಿರಿ. ಹಾಗೆ ಹೇಲಿ ನಂತರ ಸಂಜೆ ಮುಖ್ಯಮಂತ್ರಿಗಳ ಸಬೆ ಇದೆ, ಅದಾದ ನಂತರ ಸದನದಲ್ಲಿ ಹೇಳಿಕೆ ಕೊಡುತ್ತೇವೆಂದು ತಾವು ಹೇಳಿದಿರಿ. ನಾವು ಇಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟು ನಿಮ್ಮನ್ನು ಕೇಳುವ ಬದಲು, ಗೃಹ ಸಚಿವರಾದವರು ನೆನ್ನೆ, ಈ ಪರಿಸ್ಥಿತಿ ನಡೆದಿದೆ ಎಂದು ಹೇಳಿಕೆ ಕೊಡಬೇಕಾಗಿತ್ತು. ಅದು ನಿಜಕ್ಕೂ ನಿಮ್ಮ ಜವಾಬ್ದಾರಿ, ಕರ್ತವ್ಯ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅಡ್ಮಿಸಿಬಿಲಿಟಿ ಇಲ್ಲವೆಂದು ಹೇಳಿದಿರಿ. kindly go through the notice that we have given. ತಮಗೆ ಸ್ಪಷ್ಟವಾಗಿ ಅರ್ಥ ಬರುವಂತೆ ನೋಟೀಸ್‌ನಲ್ಲಿ ನಾವು ಹೇಳಿದ್ದೇವೆ. ಹ್ಯುಮನ್ ರೈಟ್ಸ್ ವಯೊಲೇಷನ್ ಅಡ್ಜರ್ನಮೆಂಟ್ ಮೋಷನ್‌ನಲ್ಲಿ ತರಬಾರದೆಂದು ಯಾವ ರೂಲಿಂಗ್ ಇಲ್ಲ. ಈ ಸದನದಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಂ ಬಂದಾಗ ನೋಟೀಸ್ ಕೊಡುವುದು ಚರ್ಚೆಯಾಗುವುದು, ಪ್ರಿಲಿಮಿನರಿ ಸಬ್‌ಮಿಷನ್ ಆಗುವುದು, ಲಾಸ್ಟ್‌ಗೆ ಅಧ್ಯಕ್ಷರು ತಮ್ಮ ಡಿಸ್ಕ್ರಿಷನ್ ಉಪಯೋಗಿಸುವುದು ನಡೆದುಕೊಂಡು ಬಮದಿರುವ ಪದ್ಧತಿ. ಇಲ್ಲಿ ನಿಮ್ಮವರು ಏಕೆ ಹೋದರು, ಎಷ್ಟು ಹೊಡೆದರು ಎಂದು ನಾವು ಕೇಳುತ್ತಿಲ್ಲ. ಪತ್ರಿಕೆಗಳಲ್ಲಿ ಬಂದಿರುವ ವರ್ತಮಾನ ಮತ್ತು ನಮಗೆ ಬಂದಿರುವ ಇತರೆ ಎಲ್ಲ ಮಾಹಿತಿಗಳನ್ನಿಟ್ಟುಕೊಂಡು ಹ್ಯುಮನ್ ರೈಟ್ಸ್ ವೈಲೇಷನ್ ಆಗಿದೆ ಎಂಬುದನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. Understanding the sensitivity ofthe situation, ತಾವು ಮಾಡುವ suomoto statement ನಲ್ಲಿ ನಮಗೆ ತೃಪ್ತಿಯಾಗುವುದಾದರೆ, we will stop there ಅಥವಾ if we have to seek some clarification, ಅಗತ್ಯವಿದ್ದರೆ ನಾವು ಕೇಳಿತ್ತೇವೆ. But it is already 1'O clock. ನಿಮ್ಮ ಇಲಾಖೆಯವರು ಮೃತರಾಗಿರುವ ಪೈಕಿ ಇಬ್ಬರನ್ನು, ವಾರಸುದಾರರಿಲ್ಲವೆಂದು ಹಾಗೆ ಜಬರ್ದಸ್ತಿಯಿಂದ ದಫನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. which is a very serious thing. ಮೃತರಾಗಿರುವವವರ ಪೈಕಿ ವಾರಸುದಾರರು ಒಬ್ಬರು ಇಲ್ಲ. post mortem should be held in the presence of judicial

officers. These are two important things. Kindly bear this in mind and make a statement.

ಅಧ್ಯಕ್ಷರು: ಈಗ ಇದು ಅಡ್ಜರ್ನಮೆಂಟ್ ಮೋಷನ್‌ಗೆ ಬರುವುದಿಲ್ಲ. suomoto statement ಮಾಡುತ್ತಾರೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ನಾವಿನ್ನೂ ಸಬ್‌ಮಿಷನ್ನೇ ಮಾಡಿಲ್ಲ. In the absence of material before you how can you pass the judgement? if we have made out submission and if you have heard us and pronounced the judgement, then it becomes a fair judgement. Even before we could start making out submission judgement pronounce ಮಾಡಿದರೆ, it is fair? it is very unfortunate. Please sir, kindly hold restraint.

ಶ್ರೀ ಆರ್ ರೋಷನ್ ಬೇಗ್: as per the Human rights commissions recommendation post - mortem should be videographed and photographed.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ಈ ನಿಲುವಳಿ ಸೂಚನೆಯಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪ ಮಾಡದಂತೆ ಎನ್‌ಕೌಂಟರ್ ಎನ್ನುವ ಶಬ್ದವಿದೆ. ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂಬುದನ್ನು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಎನ್‌ಕೌಂಟರ್ ಆಗಬೇಕಾಗಿದ್ದರೂ ಕೂಡ in order to maintain ಫೈರಿಂಗ್ ಆಗಬೇಕಾಗುತ್ತದೆ. ಒಬ್ಬೊಬ್ಬರು ಒಂದೊಂದು ದೃಷ್ಟಿಕೋನದಿಂದ ಹೇಳಬಹುದು, ನೀವು ಉದ್ದೇಶ ಪೂರ್ವಕವಾಗಿ ಎನ್ಕೌಂಟರ್ ಎಂದು ಮಾಡಿದ್ದರೆಂದು ಹೇಳಬಹುದು. ಅದೇನಾದರೂ ಇರಲಿ, ತಾವೇ ನಾಯಕರಾಗಿ ನನಗೆ ಒಂದು ಸಲಹೆಯನ್ನು ಕೊಟ್ಟಿದ್ದಿರಿ. ಏಕೆಂದರೆ ಮತ್ತೆ ಇದು ವಿವಾದಗಳಾಗುತ್ತದೆ. ಅನೇಕ ನಮ್ಮ ಸದನದಲ್ಲಿ ಕೊಟ್ಟಿರುವುದರಲ್ಲಿ ಅದೊಂದು ಪರಂಪರೆಯಾಗಬಾರದೆನ್ನುವ ಕಾರಣಕ್ಕಾಗಿಯೇ 60 ರ ಕೆಳಗಡೆ ನಿಲುವಳಿ ಸೂಚನೆ ರೂಪದಲ್ಲಿ ಲಾ

ಅಂಡ್ ಆರ್ಡರ್ ಮೆಂಟೇನೆನ್ಸ್ ಆಗಿರುವುದನ್ನು ತೆಗೆದುಕೊಳ್ಳಬಾರದು. ಆದರೆ suo-moto statement ಅನ್ನು ಮಾಡಲೇಬೇಕಾಗುತ್ತದೆಂದು ನಾನು ಹೇಳಿದದು, suomoto statement ಮಾಡಿದ ಸಂದರ್ಭದಲ್ಲು ಕೂಡ ಎಲ್ಲರಿಗೂ ಚರ್ಚೆಗೆ ಅವಕಾಶವಿದೆ. ಉದ್ದೇಶ ನೆರವೇರುತ್ತದೆನ್ನುವ ಕಾರಣಕ್ಕಾಗಿಯೇ ತಾವು ಅದನ್ನು ತಿರಸ್ಕರಿಸಿ ಎನ್ನುವ ಅರಿಕೆಯನ್ನು ನಾನು ಮಾಡಿಕೊಂಡಿದ್ದೇನೆ. ನಾನು ಈ ಸಂದರ್ಭದಲ್ಲಿ ಏನು ನಡೆಯಿತೆನ್ನುವ ಬಗ್ಗೆ ಹೇಳಿಕೆಯನ್ನು ಕೊಡುತ್ತೇನೆ. ಅದರ ಜೊತೆಗೆ ಇಲ್ಲಿ ತಾವೇನು ಹ್ಯುಮನ್ ರೈಟ್ಸ್ ಬಗ್ಗೆ ಹೇಳಿದಿರಿ, ಮ್ಯಾಜಿಸ್ಟ್ರೇಟ್ ಇರುತ್ತಾರೆ, ವಿಡಿಯೋಗ್ರಾಫ್ ಇರುತ್ತದೆ, ಇದುವರೆವಿಗೆ ಬಂದಿರುವ ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ತಾವು ಕೂಡ ಗೃಹ ಮಂತ್ರಿಗಳಾಗಿದ್ದವರು, ಆ ಕಾರಣಕ್ಕೆ ಇದೆಲ್ಲವೂ ಆ ತರಹದಲ್ಲಿ ಆಗುತ್ತದೆ. ಏಕೆಂದರೆ ಬರಿ ನಾವೆಂದಲ್ಲ, ನಡೆದಿರತಕ್ಕಂಥ ಹೋರಾಟವು ಕೂಡ ನಿಷ್ಪಕ್ಷಪಾತವಾಗಿರಬೇಕೆನ್ನುವ ಕಾರಣಕ್ಕಾಗಿ ಇವತ್ತು ಆಸ್ಪತ್ರೆಗೆ ಕಳುಹಿಸಿಕೊಟ್ಟಿರುವಲ್ಲಿ autopsy ಆಗುವಾಗ ವಿಡಿಯೋಗ್ರಫಿ ಆಗುತ್ತದೆ ಮತ್ತೆ ಮಾಜಿಸ್ಟ್ರೇಟ್ ಅವರು ಪಕ್ಕದಲ್ಲಿರುತ್ತಾರೆ. ಆ ಕಾರಣಕ್ಕಾಗಿ ಆ ಬಗ್ಗೆ ಯಾವುದೇ ಸಂಶಯವನ್ನಿಟ್ಟುಕೊಳ್ಳುವ ಅಗತ್ಯವಿಲ್ಲವೆಂದು ತಮ್ಮ ಮೂಲಕ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ.

ಈ ಸದನದಲ್ಲಿ ಈ ರೀತಿಯ ಹೇಳಿಕೆ ಕೊಡಲು ಬಯಸುತ್ತೇನೆ.

1. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜ ಪೋಲೀಸ್ ಠಾಣೆ ವ್ಯಾಪ್ತಿಯ ಮೆಣಸಿನಹಾಡ್ಯದ ವೊಡೆಯರ ಮಠ ಎಂಬಲ್ಲಿ ತಲೆ ಮರೆಸಿ ಕೊಂಡಿದ್ದ ನಕ್ಸಲೀಯರ ಪತ್ತೆ ಮತ್ತು ಬಂಧನಕ್ಕೆ ಹೋದಾಗ ನಕ್ಸಲರು ನಕ್ಸಲ್ ನಿಗ್ರಹ ದಳದ ಪೋಲೀಸರ ಮೇಲೆ ಗುಂಡು ಹಾರಿಸಿರುತ್ತಾರೆ. ನಕ್ಸಲ್ ನಿಗ್ರಹ ದಳವು ಪ್ರತಿಯಾಗಿ ಗುಂಡು ಹಾರಿಸಿದಾಗ ಎನ್‌ಕೌಂಟರ್ನಲ್ಲಿ ಐದು ನಕ್ಸಲರು ಸಾವನ್ನಪ್ಪಿದ್ದು, ಸ್ಥಳದಲ್ಲಿ ಒಂದು 9.ಎಂ.ಎಂ ಸ್ಟೆನ್ ಗನ್ 12, ಜೀವಂತ ಗುಂಡುಗಳು ಮತ್ತು 5 ಖಾಲಿ ಕಾರ್ತೂಸ್‌ಗಳು, ಎಕೆ 47, ಖಾಲಿ ಗುಂಡುಗಳು, ಎಸ್.ಎಲ್.ಆರ್ ಮತ್ತು ಒಂದುದೇಶೀಯ ಪಿಸ್ತೂಲು (ತಪಂಚ), ಹ್ಯಾಂಡ್ ಗ್ರೆನೇಡ್ ಹಾಗೂ ಕಾಂಪಾಸ್, ಮ್ಯಾಪ್, ಕರಪತ್ರಗಳು, ಮಾವೋ ಪುಸ್ತಕಗಳು ಹಾಗೂ ತರಬೇತಿ ಪುಸ್ತಕಗಳು ಇವುಗಳನ್ನು ಸ್ಥಳದಿಂದ

ವಶಪಡಿಸಿಕೊಳ್ಳಲಾಗಿದೆ. ಈ ಎನ್‌ಕೌಂಟರ್ ದಿನಾಂಕ 10.07.2007 ಬೆಳಿಗ್ಗೆ 8.00 ರಿಂದ 10.45 ರ ಒಳಗೆ ನಡೆದಿರುತ್ತದೆ.

2. ಈ ಎನ್‌ಕೌಂಟರಿನಲ್ಲಿ ಸಾವಿಗೀಡಾದ ನಕ್ಸಲರ ಗುರುತು ಈ ಕೆಳಕಂಡಂತಿದೆ:

1. ಗೌತಮ್: ವಯಸ್ಸು 30 ವರ್ಷ. ರಾಜ್ಯ ಸಿ.ಪಿ.ಐ ಮಾವೋ ಸಂಘಟನೆಯ ಸದಸ್ಯ. ಈ ಸಂಘಟನೆಯ ಕಾನೂನು ಬಾಹಿರ ಸಂಘಟನೆ ಯೆಂದು ಘೋಷಿಸಲಾಗಿದೆ.

ಇವನು ಆಲ್ದೂರು ಪೋಲೀಸ್ ಠಾಣೆ ಅಪರಾಧ ಸಂ 187/2006, ಕಲಂ 143, 144, 147, 148, 342, 506, 457 395 ರೆಡ್ ವಿತ್ 149 ಐಪಿಸಿ, 25 ಮತ್ತು 27 ಆರ್ಮ್ಸ್ ಆಕ್ಟ್ ರಲ್ಲಿ ಬಾಗಿಯಾಗಿರುತ್ತಾನೆ

2. ಪರಮೇಶ್: ವಯಸ್ಸು 30 ವರ್ಷ. ಇವರು ಎರಡು ಪ್ರಕರಣಗಳಲ್ಲಿ ಅಪರಾಧಿಯಾಗಿರುತ್ತಾನೆ.

1. ಬಾಳೆ ಹೊನ್ನೂರು ಪೋಲೀಸ್ ಠಾಣೆಯ ಅಪರಾಧ ಸಂ. 175/2006 ಕಲಂ 143, 144, 113, 338 (2) ರೆಡ್ ವಿತ್ 149 ಐಪಿಸಿ ಮತ್ತು ಕಲಂ 3 ಮತ್ತು 25 ಆರ್ಮ್ಸ್ ಆಕ್ಟ್.

2. ಬಾಳೆ ಹೊನ್ನೂರು ಪೋಲೀಸ್ ಠಾಣೆಯ ಅಪರಾಧ ಸಂ. 4/2004 ಕಲಂ 124 (ಎ) ರೆಡ್ ವಿತ್ 34 ಐಪಿಸಿ. ಇವನು ನಕ್ಸಲರು ಕಳದ ನಾಲ್ಕು ವರ್ಷಗಳಲ್ಲಿ ನಡೆಸಿದ ಘೋರ ಅಪರಾಧಗಳಲ್ಲಿ ಭಾಗಿಯಾಗಿರುತ್ತಾನೆ.

3. ಸುಬ್ರಮಣ್ಯ ವಯಸ್ಸು: 25 ವರ್ಷ

4. ರಾಮೇಗೌಡ ವಯಸ್ಸು: 50 ವರ್ಷ

5. ಕಾವೇರಿ: ವಯಸ್ಸು: 40 ವರ್ಷ

ಈ ಎನ್‌ಕೌಂಟರ್‌ನಲ್ಲಿ ಸಾವನ್ನಪ್ಪಿದ್ದ ವ್ಯಕ್ತಿಗಳ ಪೂರ್ಣ ವಿವರಗಳನ್ನು ಪರಿಶೀಲಿಸಲಾಗುತ್ತಿದೆ. ಈ ಎನ್‌ಕೌಂಟರಿನಲ್ಲಿ ಗಾಯಗೊಂಡ ಶ್ರೀ ರಾಘವ್, ಪಿ.ಸಿ. ರವರನ್ನು ಉಡುಪಿ ಜಿಲ್ಲೆಯ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಗಿದೆ. ಇವರು ಅಪಾಯದಿಂದ ಪಾರಾಗಿದ್ದು ಚೇತರಿಸಿಕೊಳ್ಳುತ್ತಿದ್ದಾರೆ.

3. ವೊಡೆಯರ್ ಮಠ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಕ್ಸಲ್ ನಿಗ್ರಹ ದಳದವರು ನಕ್ಸಲರಿಗಾಗಿ ಹುಡುಕಾಟವನ್ನು ಮುಂದುವರೆಸಿದ್ದಾರೆ. ಈ ಎನ್‌ಕೌಂಟರ್ ಸಂದರ್ಭದಲ್ಲಿ ಇಬ್ಬರು ನಕ್ಸಲರು ತಪ್ಪಿಸಿಕೊಂಡಿದ್ದು ಅವರನ್ನು ಹುಡುಕಲು ಮತ್ತು ಬಂಧಿಸಲು ಕ್ರಮ ಪ್ರಗತಿಯಲ್ಲಿರುತ್ತದೆ.

ಈ ಘಟನೆಯ ಬಗ್ಗೆ ವಿಚಾರಣೆ ನಡೆಯುತ್ತಿದೆ. ಹೆಚ್ಚಿನ ಮಾಹಿತಿ ನನಗೆ ಬಂದ ತಕ್ಷಣ ಸದನಕ್ಕೆ ಅದನ್ನು ತಿಳಿಸುತ್ತೇನೆ.

ತಾವು ಈಗ ಆ ಪ್ರಶ್ನೆ ಎತ್ತಿದ್ದರಿಂದ ಹೇಳುತ್ತಿದ್ದೇನೆ. ಈ ಘಟನೆ ಬಗ್ಗೆ SDM ಚಿಕ್ಕಮಗಳೂರು ಇವರು ನಿಯಮಾನುಸಾರ ವಿಚಾರಣೆ ಮಡುತ್ತಿದ್ದಾರೆ. SDM ರವರೇ ಸ್ಥಳ ಪರೀಕ್ಷೆ ಮತ್ತು ಮಹಜರು ಮಾಡಿರುತ್ತಾರೆ. ಈ ಬಗ್ಗೆ ಮಾನವ ಹಕ್ಕುಗಳ ಆಯೋಗದ ನಿಯೋಗದ ಪ್ರಕಾರ ಸಂಪೂರ್ಣ ತನಿಖೆ ಮತ್ತು ವೊಚಾರಣಾ ಕ್ರಮವನ್ನು ಮುಂದುವರೆಸಿದ್ದೇವೆ. ಇಗ ತಾವು ಹೇಳಿದಂತೆ ಗೌತಮ್‌ರವರು ಏನು ಮಾಡಿದ್ದಾರೆ. ಹೊಸದಾಗಿ ಬಂದ ವಿವರಗಳಂತೆ ಆತನ ಸಹೋದರ ಪೋಲೀಸ್ ಪೇದೆ ಆಗಿ ನೇಮಕಾತಿ ಅಗಿದ್ದಾನೆ. ಆತ ಈಗ ಖಾನಾಪುರದ ಪೋಲೀಸ್ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದಾನೆ. ಆತನನ್ನು ಕರೆಸಿಕೊಂಡು ಚಿಕ್ಕಮಗಳೂರಿಗೆ ಕಳುಹಿಸಿಕೊಡುತ್ತೇವೆ. ಏಕೆಂದರೆ ತಾವು ಏನು ಹೇಳಿದ್ದೀರಿ, ಶವಸಂಸ್ಕಾರ ಆಗತಕ್ಕಂಥಾದ್ದು ಗುರುತಿಸಬೇಕೆಂದು ಹೇಳಿದ್ದೀರಿ. ಆ ವಿಚಾರದಲ್ಲಿ ನಮಗೆ ಹೆಚ್ಚಿನ ಮಾಹಿತಿ ಸಿಕ್ಕಿದೆ. ಆ ಮಾಹಿತಿ ಪ್ರಕಾರ ಖಾನಾಪುರದಿಂದ ಆತನನ್ನು ಕರೆಸಿಕೊಂಡು ಚಿಕ್ಕಮಗಳೂರಿಗೆ ಇದು ಇಲ್ಲಿಯವರೆಗೆ ಆಗಿರತಕ್ಕಂತಹ ಘಟನೆ. ಬಹಳ ಸೂಕ್ಷ್ಮವಾದ ವಿಷಯವಾಗಿರುವುದರಿಂದ ಅದರ ಗಾಂಭಿರ್ಯತೆಗೆ ಅನುಗುಣವಾಗಿ ತಾವು ಯಾವುದೇ ಚರ್ಚೆ ಮಾಡಿದರೂ ನಮ್ಮ ಸ್ವಾಗತವಿದೆ.

ಶ್ರೀ ಎನ್ ಧರ್ಮ ಸಿಂಗ್: ಮಾನ್ಯ ಅಧ್ಯಕ್ಷರೆ, ಈ ಘಟನೆ ಮೊನ್ನೆ ನಡೆದಿದೆ. ಇಲ್ಲಿಯವರೆಗೆ Sou-motu statement ಮಾನ್ಯ ಗೃಹ ಸಚಿವರು ಕೊಡಬೇಕಾಗಿತ್ತು.

ಇವತ್ತು ಕೊಟ್ಟಿದ್ದೀರಿ. ಇಂತಹ ಮಹತ್ವವಾದ ಘಟನೆ ಬಗ್ಗೆ ನಿಲುವಳಿ ಸೂಚನೆಯನ್ನು ಮಂಡಿಸಿದಾಗ ಅದರ ಶಬ್ದಗಳು interpretation ಅಲ್ಲ, ಇದು ಭವನಾತ್ಮಕವದ ವಿಚಾರ. ರಾಜ್ಯದಲ್ಲಿ ನಕ್ಸಲೈಟ್ ಚಟುವಟಿಕೆ ಬೆಳೆಯುತ್ತಿದೆ. ಇದು curb ಮಾಡತಕ್ಕಂತಹ ರೀತಿಯಲ್ಲಿ ಕೆಲವು ವಿಚಾರ ಗಳನ್ನು ಪ್ರಸ್ತಾಪ ಮಡುತ್ತೇವೆ. ಅದಕ್ಕೆ ತಾವು ಪ್ರಸ್ಟೀಜ್‌ನಲ್ಲಿ ಇರಲಾರದೆ ಇವತ್ತು ರಾಜ್ಯದ ಗೃಹ ಸಚಿವರಾಗಿ ವಾಸ್ತವಾಂಶಗಳನ್ನು ಪ್ರಸ್ತಾಪ ಮಡುತ್ತೇವೆ. ಅದಕ್ಕೆ ತಾವು ಪ್ರಸ್ಟೀಜ್‌ನಲ್ಲಿ ಇರಲಾರದೆ, ಇವತ್ತು ರಾಜ್ಯದ ಗೃಹ ಸಚಿವರಾಗಿ ವಾಸ್ತವಾಂಶಗಳನ್ನು ಹೇಳಬೇಕು. ಮೊನ್ನೆ ತಾವು ಒಂದು ಸಭೆ ಮಾಡಿದಿರಿ. ನಕ್ಸಲೈಟ್ Activities ಬಗ್ಗೆ. It is a socio- economic problem. ಸಾಕೇತ್ ರಾಜನ್ ಸತ್ತರೂ Saket rajan has written 14 books. you must be knowing. ದೊಡ್ಡ intellectual ಆಗಿದ್ದ ಆತ ಕೂಡ ಆಪರೇಷನ್ ಮಾಡತಕ್ಕಂತಹ ಮಾತನ್ನು ಹೇಳಿದ್ದೀರಿ. because you have got socialist background, philosophy ಎಂದು ನಾವು ತಿಳಿದುಕೊಂಡಿದ್ದೇವೆ. ಈಗ ತಾವು ರಾಜ್ಯದ ಗೃಹ ಸಚಿವರಾದ ಮೇಲೆ ಮುಖ್ಯಮಂತ್ರಿಗಳು ಬಂದ ಮೇಲೆ ಈ ಸೂಕ್ಷ್ಮವಾದ ವಿಚಾರಗಳ ಬಗ್ಗೆ ಒಬ್ಬರನ್ನು ಸಭೆಗೆ ಕರೆದಿಲ್ಲ. you have not taken the opposition into confidence apart from the legislature. ಬೇರೆ ಬೇರೆ ಜನರು ನೀವು ಎಲ್ಲ ಮುಖಂಡರನ್ನು ವಿಚಾರವಾದಿಗಳನ್ನು ಕರೆಸಿ ಮಾತನಾಡಬೇಕಿತ್ತು. ಏಕೆಂದರೆ ಕುದುರೆ ಮುಖದಲ್ಲಿ ಇರತಕ್ಕಂತಹ ಸಮಸ್ಯೆಗಳು ಬೇರೆ, ಇಲ್ಲಿ ಇರತಕ್ಕಂತಾದ್ದು ಏನೆಂದರೆ, ನಕಲಿ enocounter ಆಗಿದೆ. ರೈತರನ್ನು ಕೊಂದು ಹಾಕಿದ್ದಿರಿ. ಅಲ್ಲಿ ಬಹಳ ಕರುಣಾಜನಕವಾದ ವಾತಾವರಣ ನಿರ್ಮಾಣವಾಗಿದೆ. ಅದರ ಬಗ್ಗೆ ನಾವು ಇವತ್ತು ಕೇಳುತ್ತಿದ್ದೇವೆ. ಒಳಗಡೆ ಹೋಗಿ ನಿವು ಕೂಡ ಇದ್ದೀರಿ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ. ಯಾರು ನಕ್ಸಲರು ಇದ್ದಾರೆ ಅವರನ್ನು ಹತ್ತಿಕ್ಕತಕ್ಕಂತಹ ಪ್ರಯತ್ನ ಮಾಡಿ, ಅದರ ಬಗ್ಗೆ ಬೇರೆ ವಿಚಾರ ಇಲ್ಲ. ಛತ್ತೀಸ್‌ಘಡದಲ್ಲಿ ನಡೆಯುತ್ತಿದೆ. ಆಂದ್ರ ಪ್ರದೇಶದಲ್ಲಿ ಕೂಡ ಬಹಳ ದೊಡ್ಡ ಪ್ರಮಾಣದಲ್ಲಿ

ಇಂತಹ activities ನಡೆಯುತ್ತಿದೆ. ಅಲ್ಲಿರತಕ್ಕಂತಹ ಮುಖ್ಯಮಂತ್ರಿಗಳು ಫತೆ ಮೈದಾನ ಎಂದು ಎಂದು ಒಂದು ಮೈದಾನ ಇದೆ. ಈ ಮೈದಾನದಲ್ಲಿ ನಕ್ಸಲೈಟರನ್ನು ಕರೆಸಿ ಗದ್ದಾರ್ ಎಂದು ಪ್ರತಿಪಾದನೆ ಮಾಡತಕ್ಕಂತಹ ವ್ಯಕ್ತಿಗಳನ್ನು ಕರೆಸಿ ಸಮಾಲೋಚನೆ ಮಾಡಿದ್ದಾರೆ. ಅದು ಕೂಡ ಬಗೆಹರಿದಿಲ್ಲ. ದೇಶದಲ್ಲಿ ನಾವು socio economic problem ಎಂದು ಏನು ಹೇಳುತ್ತೇವೆ, ಆ ಭಾಗದಲ್ಲಿ ಇರತಕ್ಕಂತಹ ಸಮಸ್ಯೆಗಳು. ವಿಠಲ್ ಎಂದು ಹೋರಾಟಗಾರರಿದ್ದಾರೆ, ನಮ್ಮ ಶ್ರೀ ರಾಮ ರೆಡ್ಡಿಯವರಿಗೆ ಗೊತ್ತಿರಬಹುದು, ಅವರನ್ನು ಕರೆಸಿ ಮಾತನಾಡಿದ್ದೇನೆ. ನೀವು ಮಾತನಾಡ ಬೇಕಾಗುತ್ತದೆ. ಚರ್ಚೆ ಮಾಡಬೇಕಾಗುತ್ತದೆ, ಸಮಸ್ಯೆಗಳು ಬಗೆ ಹರಿಸಬೇಕೆಂದು ಹೇಳ ಬೇಕಾಗುತ್ತದೆ. ಅವರು ಬಂದರೂ ಪೋಲೀಸ್‌ನವರು ಗುಂಡು ಹೊಡೆದರು. that is not the solution. you cannot, bullet ನಿಂದ violence silence ಮಾಡುವುದಕ್ಕಾಗುವುದಿಲ್ಲ. ಆ background ನನಗೆ ಗೊತ್ತಿದೆ, ಆ background ನನಗೆ ಗೊತ್ತಿದೆ. ಆ background ನಿಂದ ನಾನು ಬಂದಿದ್ದೇನೆ. ನೋಡಿದ್ದೇನೆ. ಆ ಜನರ ಜೊತೆಯಲ್ಲಿ ಮತನಡಿದ್ದೇನೆ. ಇವತ್ತು ಸಾಕೇತ್‌ರಾಜನ್ ಸತ್ತಾಗ ಗದ್ದಾರ್ ಕೃಷ್ಣದಲ್ಲಿ ಬುದಿ ಹಿಡಿದುಕೊಂಡು ಬಂದಿದ್ದ. ಅದನ್ನು ನೋಡಿದರೆ ನಮಗೇ ಅಳು ಬರುತ್ತದೆ. ಇಂತಹ ಎಲ್ಲ ಘಟನೆಗಳೂ ಇವೆ. ರಾಷ್ಟ್ರಮಟ್ಟದಲ್ಲಿ ಕೂಡ ಬಹಳಷ್ಟು ವಿಚಾರ ನಡೆಯುತ್ತಿದೆ. ನೀವು ಮಾಡಿದ್ದು ಏನು? ನೀವೇನಾದರೂ ನಮಗೆ ಕರೆಸಿದ್ದಿರಾ? ಇಂತಹ ವಿಚಾರಗಳನ್ನು ಕೇಳತಕ್ಕಂತಹ ಪ್ರಯತ್ನ ಮಾಡಿದ್ದೀರಾ? ಗಡಿ ಭಾಗದಲ್ಲಿರ ತಕ್ಕಂತಹ ಅರಣ್ಯದ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಿದ್ಧೀರಾ? ಮಾನ್ಯ ಶಿವರಾಜ್ ಪಾಟೀಲ್‌ರವರು ಕೂಡ ಈ ರಾಜ್ಯಕ್ಕೆ ಬಂದು ತಮ್ಮ ಸಮಸ್ಯೆಗಳನ್ನು ತಿಳಿದುಕೊಂಡು ಹೋಗಿದ್ಧರೆ. ಇವತ್ತು ಏನೂ ಕೆಲಸವಾಗಿಲ್ಲ. ಸುಮ್ಮನೆ ಅಲ್ಲಿ ಬಂದರು, ಪೋಲೀಸ್‌ನವರು ಹೇಳಿದರು, ಒಳ್ಳೆಯ ಕೆಲಸ ಮಾಡತಕ್ಕಂತಹ, Sri Madhukar Shetty one of the efficient SP's, we had posted and you have removed him now for political reasons. ಇವತ್ತು ಇವೆಲ್ಲಾ ಆಗಲೇಬಾರದು. ಇದರ ಬಗ್ಗೆ ನಿಗಾವಹಿಸಿ ಸರಿಯಾಗಿ ಕೆಲಸ ಮಡಬೇಕು. ಮತ್ತು ವಿಚಾರಗಳನ್ನು ತಿಳಿಯತಕ್ಕಂತಹ ಪ್ರಯತ್ನದಲ್ಲಿ ಮೆತಾಡಿಕಲ್ ಆಗಿ ವ್ಯವಸ್ಥಿತ ರೀತಿಯಿಂದ ಈಗಿನ ಸರ್ಕಾರ ಸಮಸ್ಯೆಯನ್ನು ಬಗೆಹರಿಸಬೇಕು. ಈಗಿನ ಸರ್ಕಾರಕ್ಕೆ philosophy ಇಲ್ಲ.

ನೀವು ಬಿ.ಜೆ.ಪಿ ಜೊತೆಯಲ್ಲಿ ಹೋಗುತ್ತಿದ್ದೀರಿ. ಬಿ.ಜೆ.ಪಿ.ಯವರು ಇದಕ್ಕೆ ಒಪ್ಪುತ್ತಿಲ್ಲ. ನೀವು ಏನೇ ಮಾಡಬೇಕೆಂದರೂ ಬೇರೆಯವರು ಮಾಡುವುದಕ್ಕೆ ಬಿಡುವುದಿಲ್ಲ. ಪ್ರಗತಿಪರ ವಿಚಾರಧಾರೆ ಜನರನ್ನು ಕೂಡ you have to take into confidence, ಇವತ್ತು ಮುಂದೆ ಬೆಳೆಯ ತಕ್ಕಂತಹ ರಿತಿಯಲ್ಲಿ ಮಾಡಬೇಕು. ಮಾನವತೆ ದೃಷ್ಟಿಯಿಂದ ಅಲ್ಲಿ ಏನು ಘಟನೆ ನಡೆದಿದೆ. ಸರ್ಕಾರ ಅದಕ್ಕೆ ಸರಿಯಾದ ರೀತಿಯಲ್ಲಿ ಇಲ್ಲಿ ಸರ್ಕಾರ ಇದೆ, they have come to our rescue ಎನ್ನತಕ್ಕಂತಹ ರಿತಿಯಲ್ಲಿ you have to create confidence. ಅದು ಮಾಡಲೇ ಬೇಕು. ಇದರಲ್ಲಿ ಕೂಡ ತಾವು ಬಿಗಿಯಾಗಿ ವರ್ತನೆ ಮಾಡಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಗಳ ಹೇಳಿಕೆ ನಮ್ಮ ಕೈಯಲ್ಲಿ ಇದೆ. ನಮ್ಮ ಅನುಮಾನ ನಾವು ಏನು ವ್ಯಕ್ತಪಡಿಸಿದ್ದೇವೆ. ಅದು ಇದರಲ್ಲಿ ಪ್ರತಿಬಿಂಬವಾಗಿದೆ. ಸಾವನ್ನಪ್ಪಿದವರು ಐದು ಜನ. ನೀವು ನಿಮ್ಮ statement ಪ್ರಕಾರ ವಶಪಡಿಸಿ ಕೊಂಡಿರ ತಕ್ಕಂಥಾದ್ದು ಒಂದೇ ಆಯುಧ. ಉಳಿದವೆಲ್ಲ ಸಣ್ಣಪುಟ್ಟವು. that means so say, ಅದರಲ್ಲಿ ಇದ್ದವರ ಪೈಕಿ armed persons ಒಬ್ಬನೇ. anti-naxal squad ನವರು ಎಷ್ಟು ಜನ ಇದ್ದರು ಇವರ ಹತ್ತಿರ ಏನೇನು weapons ಇತ್ತು ಎಂಬ ಬಗ್ಗೆ ನಮಗೆ ಮಾಹಿತಿ ಇಲ್ಲ. relation ಆಗಿ encounter ಆಗಿ, ಈ ಕಡೆಗೆ ಆಗಿರ ತಕ್ಕಂತಹ ಡ್ಯಾಮೇಜ್ ಏನು, one constable is injured. ನಾವು ಈ ರಾಜ್ಯದ ಪೋಲೀಸ್ ಇಲಾಖೆಯಲ್ಲಿರತಕ್ಕಂತಹ ಪ್ರತಿಯೊಬ್ಬ constable ನ ಜೀವನವನ್ನು ಕೂಡ ಅತ್ಯಮೂಲ್ಯವೆಂದು ಭಾವಿಸತಕ್ಕಂಥಾದ್ದು. ಇವರ ಪರ ವಕಾಲತ್ತು ವಹಿಸುತ್ತಿದ್ದೇವೆ. ಪೋಲೀಸ್‌ನವರು ಸತ್ತರೂ ಪರವಾಗಿಲ್ಲವೆಂದು ನಾವು ಹೇಳುವುದಿಲ್ಲ. ನಮಗಾಗಿ ಯೂನಿಫಾರಂ ಹಾಕಿಕೊಂಡು ಸರ್ವಿಸ್ ಮಾಡತಕ್ಕಂತಹವರ ಬಗ್ಗೆ ಅಷ್ಟೇ ಗೌರವ ಇದೆ. ಅವರ ಜೀವನವೇನು ಸುಲಭಕ್ಕೆ ಸಿಗುತ್ತದೆ ಎಂದು ಹೇಳುವುದಿಲ್ಲ. ಈ statement ಗೆ ಏನಾದರೂ ಗಾಂಭೀರ್ಯತೆ ಇದೆಯಾ? ಒಂದು ದನ ಸತ್ತಿದೆ. ರಾತ್ರಿ ಟೀವಿಯಲ್ಲಿ ತೋರಿಸಿದರು. ಆ ಮನೆ ಏನಿದೆ, it is not a concrete house. ಮಾಮೂಲು ಮಣ್ಣಿನ ಮನೆ. ಪಂಜಾಬಿನಲ್ಲಿ golden temple ಗೆ ಹೊಡೆದಿದ್ದರಲ್ಲಾ, ಆ ರೀತಿ ಹೊಡೆದಿದ್ದಾರೆ. it is all visible.

ಬಚ್ಚಿಡುವುದಕ್ಕಾಗುವುದಿಲ್ಲ. ಎಲ್ಲಾ ತೋರಿಸುತ್ತಿತ್ತು. ಅಷ್ಟು ಗುಂಡು ಹಾರಿಸುವ ಅಗತ್ಯವಿತ್ತಾ? ದನ ಯಾವ ನಕ್ಸಲೈಟ್ activity ಮಾಡುತ್ತಿತ್ತು? ಯಾವ ರೇಂಜ್ ನಿಂದ ಇವರು ಫೈರ್ ಓಪನ್ ಮಾಡಿದ್ಧಾರೆ. ಆ ಮನೆ ಸುತ್ತುವರೆದು ಅವರನ್ನು ಹಾಗೆಯೇ ಹಿಡಿದುಕೊಳ್ಳವುದಕ್ಕೆ ಸಾದ್ಯವಿರಲಿಲ್ಲವಾ? ಇಷ್ಟಲ್ಲಾ ಮಾಡಿ ಇವರು ಹಿಡಿದಿದ್ದು ಏನು? ಒಬ್ಬ avtivist ಅನ್ನು ಹಿಡಿದಿದ್ದಾರೆ. ಉಳಿದವರು ನಿಮ್ಮ ಪ್ರಕಾರವೇ ನಿರಪರಾದಿಗಳು. they are not accused. ಈ ಇಬ್ಬರ ಮೇಲೆ ನಂ. 1, ಮತ್ತು ನಂ.2 paramesh and Goutam ಮೇಲೆ ಕೂಡ ಪೋಲೀಸ್‌ನವರೇ ರಿಜಿಸ್ಟರ್ ಮಾಡಿರತಕ್ಕಂತಹ ಕ್ರೈಮ್ಸ್, IPC ಪ್ರಕಾರ, hypothetically speaking they would hve been convicted. ಯಾವ ಕಲಂ ಕೂಡ does'nt atract even life sentence. Capital punishment ಅಲ್ಲ. ಗಲ್ಲಿಗೇರಿಸುವುದು ಅಲ್ಲ. life sentence ಕೊಡಿ ಎಂದು demand ಮಾಡುವುದಿಲ್ಲ. what is that you have done? IPC ಯಲ್ಲಿ ನೀವೇ ಅವರ ಮೇಲೆ ಹಾಕಿರತಕ್ಕಂತಹ ಕಲಂಗಳ ಪ್ರಕಾರ ಒಂದು ವೇಳೆ ಅಪರಾಧ ರುಜುವಾತಾಗಿ ಶಿಕ್ಷೆ ಆಗಿದ್ದಿದ್ದರೂ ಅವರಿಗೆ ಜಿವಾವಧಿ ಶಿಕ್ಷೆ ಕೂಡ ಆಗುತ್ತಿರಲಿಲ್ಲ. ಅಂಥದ್ದರಲ್ಲಿ ಅವರನ್ನು ಸ್ವರ್ಗಲೋಕಕ್ಕೆ ಕಳುಹಿಸಿಬಿಟ್ಟಿದ್ದೀರಿ. ಅದನ್ನು ಎನ್‌ಕೌಂಟರ್ ಎಂದು ಕರೆಯುತ್ತೀರಿ. ನಾವೇನು ಭಾಷೆ, ಇನ್ನೆಷ್ಟು ನಿಗ್ರಹವನ್ನು ವಹಿಸಬೇಕು ಎಂದು ನೀವೇ ಹೇಳಿ. ನಮಗೆ ಇಲಾಖೆಯ ಮೊರೇಲ್ ಅನ್ನು ಕಳೆಯತಕ್ಕಂತಹ ಆಸೆ ಇಲ್ಲವೇ ಇಲ್ಲ. ಬೇಜವಾಬ್ದಾರಿಯಿಂದ ನಿಮ್ಮ ಇಲಾಖೆಯವರ ಮೇಕೆ ಆಪಾದನೆಗಳನ್ನು ಮಾಡತಕ್ಕಂಥದ್ದು ನಮಗೆ ಖುಷಿಯಲ್ಲ. ಆದರೆ ಈ ರೀತಿಯ ಹೇಳಿಕೆಯನ್ನು ತಮ್ಮಂತವರ ಕೈಯಿಂದ ಓದಿಸುವ ಪ್ರಯತ್ನವನ್ನು ಮಾಡುತ್ತಾರಲ್ಲಾ, ಇದಕ್ಕೇನೆಂದು ನಾವು ಹೇಳಬೇಕು ಹೇಳಿ. ತಮ್ಮನ್ನು 'ಹೇಗೆ ಬೇಕಾದರೂ ಉಪಯೋಗಿಸಿ ಕೊಳ್ಳಬಹುದು ಎನ್ನತಕ್ಕಂಥ ಅಭಪ್ರಾಯವೇ ಅಥವಾ ನಮಗೆ ಇಲ್ಲಿರತಕ್ಕಂಥವರಿಗೆ ತೆಲೆಯೊಳಗೆ ಏನೂ ಸಾಮಾನಿಲ್ಲ. ನಮಗೇನೂ ಜವಾಬ್ದಾರಿಯೇ ಇಲ್ಲ ಎಂದು ತಿಳಿದುಕೊಂಡಿದ್ದಾರೆಯೇ, ಅಥವಾ ಈ ರಾಜ್ಯದ ಜನರ ಜೊತೆಗೆ ಹೇಗೆ ಬೇಕಾದರೂ ಇವರು ಚೆಲ್ಲಾಟವಾಡಬಹುದು ಎಂದು ತಿಳಿದು ಕೊಂಡಿದ್ದಾರೆಯೇ? what is work in thier mind. ಇವರು ದನವನ್ನು ಕೊಲ್ಲುತ್ತಾರಲ್ಲಾ, why don't they reveal it? Let the magistrate speak about it. ಆ ಅನಿಮಲ್ ಏನು ಬಿದ್ದಿತ್ತು, ಅದಕ್ಕೆ ಬುಲೆಟ್

ಇಂಜೂರಿಸ್ ಆಗಿತ್ತೆ ಅಥವಾ ಇಲ್ಲವೆ, ಆ ಮನಗೆ ಅಷ್ಟೊಂದು ಬುಲೆಟ್ ಹೊಡೆಯಬೇಕಾಗಿತ್ತೆ, ಎಷ್ಟು ಬುಲೆಟ್‌ಗಳನ್ನು ಹೊಡೆದಿದ್ದಾರೆ ಎಂಬುದನ್ನು ಹೇಳಲಿ. I have got highest respect for you. ನಾನು ಇದನ್ನು aggrevate ಮಾಡುವುದಕ್ಕೆ ಇಷ್ಟಪಡುವುದಿಲ್ಲ. You have been under lot of pressure since yestereday evening to hold restrain, to go slow. ಏಕೆಂದರೆ ಈ ರೀತಿ ಎಲ್ಲ ಕಡೆಗೂ ಈ ಸಮಸ್ಯೆ ಇದೆ. ನಾವು cheap popularity ಗೋಸ್ಕರ ಇದರ ಬಗ್ಗೆ ಭಾಷಣವನ್ನು ಮಾಡಿ ಎಲ್ಲೋ ಹೋಗಿ ನಮ್ಮನ್ನು ನಾವೇ ಇನ್ನೊಂದು ದಿವಸ irretrievable position ಗೆ land ಮಾಡಿ ಕೊಳ್ಳುವುದಕ್ಕೂ ನಾವು ಇಷ್ಟಪಡುತ್ತಿಲ್ಲ. ಆದರೆ ಈ ರೀತಿಯ blatant violation of human rights ಆದಾಗ ನಾವು ಜನಪ್ರತಿನಿಧಿಗಳಾಗಿ ಸಭೆಯೊಳಗೆ ಅದರ ಪ್ರಸ್ತಾಪವನ್ನೂ ಮಾಡದೇ ಹೋದರೆ ಎಲ್ಲೋ ಒಂದು ಕಡೆಗೆ ಅತಿರೇಕ ಎಂದು prima facie ನೋಡಿದರೆ ತಮಗೆ ಅನ್ನಿಸುವುದಿಲ್ಲವೇ? Leave upon all other things ಪ್ರಕಾಶ್ ಸಾಹೇಬರೆ, prima facie ತಮಗೆ ಏನನಿಸುತ್ತದೆ ಎಂಬುದನ್ನು ಹೇಳಿ. You have been able to sieze only one weapon. if all of them were on, if all of then had resorted to open fire to indulge in encounter what would have been the magnitude of casuality this side? ಕಾಮನ್‌ಸೆನ್ಸ್ ಬೇಡವೆ? sir i don't want to aggrevate the situation. i m not goint to score a point. my very humble appel to you is ಇವೆಲ್ಲಾ ಅತ್ಯುತ್ಸಾಹಿಗಳು ಮಾಡತಕ್ಕಂಥ ಕೆಲಸ. ಆಮೇಲೆ ಪ್ರಕಾಶ್‌ರವರೆ, ನಮಗೊಂದು ಕ್ಲಾರಿಟಿ ಇರಬೇಕಾಗುತ್ತದೆ. ವೀರಪ್ಪನ್‌ನನ್ನು ಹಿಡಿಯುವುದಕ್ಕೆ ನಾವು ಮಾಡತಕ್ಕಂಥ ಆಪರೇಷನ್ಸ್ ಬೇರೆ, ಇವರನ್ನು ಡೀಲ್ ಮಾಡುವುದಕ್ಕೆ ನಾವು ಬಳಸಬೇಕಾದಂಥ ಮೆತಡ್‌ಗಳೇ ಬೇರೆ. ತಾವು ಸೈದ್ಧಾಂತಿಕ ಹಿನ್ನೆಲೆಯಲ್ಲಿ ರಾಜಕಾರಣ ಮಡಿಕೊಂಡು ಬಂದಂಥ ಒಬ್ಬ ವ್ಯಕ್ತಿ. ರಾಜಕಾರಣದಲ್ಲಿ ಎಲ್ಲಾ ರೀತಿಯ ವ್ಯಕ್ತಿಗಳೂ ಬರುತ್ತಾರೆ. ನಮ್ಮಲ್ಲೇನೂ ಈ ಬಗ್ಗೆ ಸಿಲಬಸ್ ಏನೂ ಇಲ್ಲ. ಅದಿದದ್ದವರೇ ಬರಬೇಕು ಎಂದು. ನಾವು ಇಷ್ಟನ್ನು ತಮ್ಮಿಂದ ಬಯಸುತ್ತೇವೆ. ವೀರಪ್ಪನ್ ಮತ್ತು ನಕ್ಸಲೈಟ್ ಮಧ್ಯೆ ನಮಗೇನೂ ವ್ಯತ್ಯಾಸವಿಲ್ಲ. Terorists, Extremists, Dacoits, Naxalites ಇವರೆಲ್ಲರೂ ನಮಗೆ ಒಂದೇ

ಇವರೆಲ್ಲರನ್ನೂ ನಾವು anti social ಎಂದೇ ನಾವು ಟ್ರೀಟ್ ಮಾಡುವುದು. annihilation is the only answer ಎಂದರೆ you please let this be. then we will reveal to you as to what is our stand. but I am certain that you will not say that. ಪ್ರಜಾವಾಣಿ ಪೇಪರ್‌ನಲ್ಲಿ ಬರೆದಿದ್ದಾರೆ ನೋಡಿ. ದನ ಕಾಯುವವರು ಅಲ್ಲೊಗೆ ಹೋಗಿ ಬಂದು ನೋಡುತ್ತಾರೆ. ಏ ರಾಮೇಗೌಡ ಸತ್ತು ಹೋಗಿದ್ದಾನೆ. ಕಾವೇರಕ್ಕೆ ಸತ್ತು ಹೋಗಿದ್ದಾರೆ. ನಮ್ಮವರೆಲ್ಲರನ್ನೂ ಕೊಂದುಹಾಕಿಬಿಟ್ಟಿದ್ದಾರೆ. ಬನ್ರೋ, ಬನ್ರೋ, ಎಂದು ದನ ಕಾಯುವವರು ಬೆರೆಯವರನ್ನು ಕರೆಯುತ್ತಾರೆ. ಅವರು ನಕ್ಸಲೈಟ್ ಆಗಿದ್ದಿದ್ದರೆ ಊರು ಜನರು ದನ ಕಾಯುವವರು ಬಂದು ಆ ರಿತಿ ಗೋಳಾಡುತ್ತಿರಲಿಲ್ಲ. why people become just brutal ? is it fair. ನಾವು ಹೀಗೆ ಮಾಡುವುದರಿಂದ ಏನು ಮಾಡುತ್ತೇವೆಂದರೆ ಮತ್ತಷ್ಟು ಜನ ಅವರ ಪರವಾಗಿ ವಾಲುವ ಹಾಗೆ ಇನ್ನೂ ಒಂದಷ್ಟು ಜನ ಇದರೊಳಕ್ಕೆ ಪ್ರವೇಶ ಮಡುವ ಹಾಗೆ ಮಡುತ್ತೇವೆಯೇ ವಿನಃ ನಾವು by showing our mignt ಹೆದರಿಸಿ ಬಿಡುತ್ತೇವೆ, we are sending a warning, ಯಾರಾದರೂ sympathisers ಇದ್ದರೆ, ಅವರಿಗೆ ನೀರು ಕೊಟ್ಟರೆ ಜಾಗ ಕೊಟ್ಟರೆ, ರೇಶನ್ ಕೊಟ್ಟರೆ ಮುಗಿಸಿಬಿಡುತ್ತೇವೆ ಎನ್ನತಕ್ಕಂಥ ಮೆಸೇಜನ್ನು ಕಳುಹಿಸುತ್ತಿದ್ದೇವೆ. whole thing will be controlled ಎನ್ನತಕ್ಕಂಥ illusion ನಲ್ಲಿದ್ದರೆ I am sorry, sir, we are marching towards a very dangerous situation. We have not tried to test the patience of the chair. How did this movement airse in India? After serious differences with the Marxists party it is late charu majumdar who started this. ಆ ಹಿಮಾಲಯನ್ ಸ್ಟ್ರೋಕ್ಸ್‌ಗೆ ಹೋಗಿ ಸಿಲಗುರಿ ಡಿಸ್ಟ್ರಿಕ್ಟ್‌ನಲ್ಲಿ ನಕ್ಸಲ್‌ಬರಿಯಲ್ಲಿ ಇದನ್ನು ಸ್ಟಾರ್ಟ್ ಮಾಡುತ್ತಾರೆ. why they have choose only malnad? ಅವರು ಶ್ರೀನಿವಾಸ ಪುರಕ್ಕೆ ಬಳ್ಳಾರಿಗೆ ಏಕೆ ಬರಲಿಲ್ಲ.? ಅವರು camflage ಮಾಡಬೇಕು, underground movement ಅನ್ನು ಅವರು ಮಾಡಬೇಕು. under ground movement ಗೆ ಅವರಿಗೆ ನಾರ್ತ್ ಕೆನರಾ ಪೊಟೆನ್ಶಿಯಲ್ ಆಗಿದೆ. ನಾನು ಹೇಳುತ್ತಿದ್ದೆ, ನಾಳೆ ಅವರು, they will move to chmarajnagar. B R HIlls ಗೆ ಬರುತ್ತಾರೆ. ಸೋಲಿಗರ

ಜೊತೆ ಅವರು ಸೇರಿಕೊಳ್ಳುತ್ತಾರೆ. You are inviting them. ಅವರ ಪ್ರಾಬ್ಲಮ್‌ಗಳು ಏನಿವೆ? ಏಕೆ ಅವರು ಈ ಮಟ್ಟಕ್ಕೆ ಹೋಗಿದ್ದಾರೆ. ಹೇಗೆ ಅವರನ್ನು ಇದರಿಂದ ಬಿಡುಗಡೆ ಮಾಡಿಸಬಹುದು, ಅವರ ಮನ ಗೆದ್ದು ಅವರನ್ನೂ ಕೂಡ ಮುಖ್ಯ ವಾಹಿನಿಗೆ ತರಬಹುದು ಎನ್ನತಕ್ಕಂಥದ್ದರ ಬಗ್ಗೆ ಒಂದು ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕಾಗುತ್ತದೆ, ಇದರಲ್ಲಿ ಯಾರನ್ನೂ ಯಾರೂ ಡಿಫೆಂಡ್ ಮಾಡುವುದು, accuse ಮಾಡತಕ್ಕಂಥದ್ದು ಇಲ್ಲಿ ಪ್ರಶ್ನೆಯಲ್ಲ. ಈ ತರಹದ ಆ್ಯಕ್ಷನ್‌ನಿಂದ ಸರ್ಕಾರಕ್ಕೆ ನೆಮ್ಮದಿ ಇರುವುದಿಲ್ಲ. ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಗೌರವ ಬರುವುದಿಲ್ಲ. ಈ ಪ್ರಯೋಗದಕಲ್ಲಿ ಈ ಎಳೆ ವಯಸ್ಸಿನವರು ಯಾರಿದ್ದಾರೆ. ಅಂಥ ಮನಸ್ಸಿನವರು ಯಾರಿದ್ದಾರೆ, ಅವರ ಮನಸ್ಸು ತೀರ ಒಂದು ರೀತಿಯ ರೆಸ್ಟ್‌ಲೆಸ್ ಕಂಡೀಷನ್‌ನಲ್ಲಿರತಕ್ಕಂಥವರನ್ನು ಹೆಚ್ಚು ಹೆಚ್ಚು ಆ ಪ್ರವಾಹಕ್ಕೆ ನಾವಾಗಿ ನಾವೇ ತಳ್ಳಿದಂತಾಗುತ್ತದೆ. sir, I want to know from you, ನೀವೇ ಒಪ್ಪಿಕೊಂಡಿರುವ ಹಾಗೆ, ಇವರ ಮೇಲೆ ಯಾವ ಛಾರ್ಜ್‌ಸ್ ಗಳೂ ಇಲ್ಲ. ಯಾರೆಂದರೆ ಸುಬ್ರಹ್ಮಣ್ಯ, ರಾಮೇಗೌಡ ಮತ್ತು ಕಾವೇರಮ್ಮನವರ ಮೇಲೆ ಯಾವ ಛಾರ್ಜ್‌ಸ್‌ಗಳೂ ಇಲ್ಲ. ಅವರು ಹೇಗೆ ಬಲಿಯಾದರು? ಮೇಲುಗಡೆ ನಿಮ್ಮ ಫಸ್ಟ್ ಸೆಂಟೆನ್ಸ್ ಹೇಳಿದ ಹಾಗೆ ಇವರೂ ಐದೂಜನ ನಕ್ಸಲೈಟ್ ಆಗಿದ್ದರೆ obviously, common sense, ಐದೂ ಜನರ ಹತ್ತಿರ ವೆಪನ್ಸ್ ಇರಬೇಕಾಗಿತ್ತು. ನೀವು ಸೀಸ್ ಮಾಡಿರುವುದು ಒಂದೇ ಒಂದನ್ನು. ಯಾವ ಯಾವ ತರಹದ ಗುರುತರವಾದಂಥ ಅಪರಾಧಿ ಚಟುವಟಿಕೆಗಳಲ್ಲಿ ಅವರು ತೊಡಗಿದ್ದರು. ಎನ್ನುವುದಕ್ಕೆ ನೀವೇ ರೆಜಿಸ್ಟರ್ಡ್ ಮಾಡಿರತಕ್ಕಂಥ ಕೇಸಸ್, ಈ ಎಲ್ಲವುಗಳ ಮದ್ಯೆ ನೆನ್ನೆ ಇವರ‍್ಯಾರೋ ನಾವು ಭಹಳ ದೊಡ್ಡ ಸಾಧನೆ ಮಾಡಿಬಿಟ್ಟಿದ್ದೇವೆ ಎನ್ನುವಂಥ ಭ್ರಮೆಯಲ್ಲಿ ದ್ದಾರೆ. ಅವರು ಆತುರ ಪಟ್ಟಿದ್ದಾರೋ ಅಥವಾ ಇಲ್ಲವೋ, ಅಗತ್ಯ ಇದ್ದು ಫೈರಿಂಗ್ ಮಾಡಿದ್ದಾರೋ ಅಥವಾ ಅಗತ್ಯಕ್ಕಿಂತ ಹೆಚ್ಚು ದೂರ ಅವರು ಹೋಗಿದ್ದಾರೆಯೇ? ಇದರಿಂದ ನಮಗೇನಾದರೂ ಒಳ್ಳೆಯದಾಗುತ್ತದೆಯೇ? ಎಂಬ ಬಗ್ಗೆ ತಾವೇ ಹೇಳಬೇಕು. ಇದು ತಮ್ಮ ವಿವೇಚನೆಗೆ ಬಿಟ್ಟಿದ್ದು.

ಶ್ರೀ ಆರ್ ರೋಷನ್ ಬೇಗ್: (ಜಯಮಹಲ್); ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ರಮೇಶ್‌ಕುಮಾರ್‌ರವರು ಇದರ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾನು ಮನ್ಯ ಮುಖ್ಯ ಮಂತ್ರಿಗಳಿಗೆ ಹಾಗೂ ಗೃಹ ಮಂತ್ರಿಗಳಿಗೆ

ಎರಡೇ ಎರಡು ವಿಷಯಗಳನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ದಯವಿಟ್ಟು ಈ ನಕ್ಸಲೈಟ್ ರವರುಗಳನ್ನು ಟೆರರಿಸ್ಟ್ ಎಂದು ಟ್ರೀಟ್ ಮಾಡಬೇಡಿ. ಅವರು ದೇಶದ್ರೋಹಿಗಳಲ್ಲ. Naxalites are not anti- nationals. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಗೃಹ ಸಚಿವರಲ್ಲಿ ಮನವಿ ಮಾಡುವುದೇನೆಂದರೆ ಇನ್ನೊಂದು ಬಾರಿ ಅವರನ್ನು ಕರೆದು ಅವರ ಜೊತೆ ಮಾತನಾಡಿ. ಸುಮ್ಮನೇ ಇದ್ದಕ್ಕಿದ್ದ ಹಾಗೆ ಅವರು ಎಲ್ಲಿ ಹೋದರು, ಅಲ್ಲಿಯೇ ಅವರನ್ನು ಹಿಡಿದು ಅರೆಸ್ಟ್ ಮಾಡುವುದು, ಶೂಟ್ ಮಾಡುವುದು ಸರಿಯಲ್ಲ. ಕಳೆದ ಸಲ ಸಾಕೇತ್ ರಾಜನ್ ಮರ್ಡರ್ ಆದಾಗ ಆ ಡೆಡ್ ಬಾಡಿ ಯಾವ ತರಹ ಹ್ಯಾಂಡಲ್ ಮಾಡಿದ್ದೀರಿ. ಆ ಡೆಡ್ ಬಾಡಿಯನ್ನು ಯಾರೂ ತೆಗೆದುಕೊಳ್ಳುವುದಕ್ಕೆ ಮುಂದಾಗಲಿಲ್ಲ. ನಾನು ಹೋಗಿದ್ದೆ, ನಾನು ಡೆಡ್ ಬಾಡಿಯನ್ನು ಕಲೆಕ್ಟ್ ಮಾಡುತ್ತೇನೆಂದು, ಅಲ್ಲಿ ನನ್ನನ್ನು ಕೇಳಿದರು. ಏಕೆ ಬಂದಿರಿ, ನೀವು ಎಂದು. ನಾನು ಹೇಳಿದೆ. ಇವನೇನು ವೀರಪ್ಪನ್ ಏನ್ರಿ ಎಂದು. ಐಡಿಯಾಲಾಜಿಕಲ್ ಡಿಫರೆನ್ಸ್ಸ್ ಏನದರೂ ಇರಬಹುದು. ದಯವಿಟ್ಟು ನಾನು ಸರ್ಕಾರಕ್ಕೆ ಏಕೆ ವಾರ್ನ್ ಮಾಡುತ್ತಿದ್ದೇನೆಂದರೆ ನೀವೇನಾದರೂ ಇದೇ ರಿತಿ ನಕ್ಸಲೈಟ್ ಮೇಲೆ ಎಲ್ಲಿ ಹೋದರೂ ಬೀದಿ ಬೀದಿಯಲ್ಲಿ ನೀವು ಅವರನ್ನು ಹೊಡೆಯುವುದಕ್ಕೆ ಹೋದರೆ, ಪೋಲೀಸ್‌ನವರು ಅವರಾಗಿ ಅವರೇ trumpet grow ಮಾಡಿಕೊಂಡು ನಾವು ಬಹಳ ಜೋರಾಗಿ ಕೆಲಸವನ್ನು ಮಾಡಿದ್ದೇವೆ ಎಂದು ಏನಾದರೂ ಹೇಳಿಕೊಂಡು ಹೋದರೆ ಇದೇ ಪಕ್ಕದ ಆಂಧ್ರ ಪ್ರದೇಶದಲ್ಲಿ ಒಬ್ಬ ಎಂ ಎಲ್.ಎ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ. ಒಪ್ಪ ಎಕ್ಸ್ ಎಂ ಎಲ್.ಎ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ. ಒಬ್ಬ ಎಕ್ಸ್ ಮಿನಿಸ್ಟರ್ ಓಪನ್ ಆಗಿ ಓಡಾಡುವುದಕ್ಕೆ ಆಗುತ್ತಿಲ್ಲ. ಹೈದ್ರಾಬಾದ್ ಸಿಟಿಯಿಂದ ಆಚೆ ಹೋಗಬೇಕಾದರೆ ಸಾಯಂಕಾಲದ ಹೊತ್ತು ಯಾರೋ ಒಬ್ಬ ಅಧಿಕಾರಿ ಕೂಡ ಅಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಆ ಪರಿಸ್ಥಿತಿ ಇವೊತ್ತು ಆಂಧ್ರಪ್ರದೇಶದಲ್ಲಿದೆ. Even when Mr. Narasimha Rao was the Prime Minister of this country, ಅವರ ಕ್ಷೇತ್ರದಲ್ಲಿ parallel Government ನಡೆಯುತ್ತಿತ್ತು. ಈಗಲೂ ಕೂಡ ಕೆಲವು ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ parallel government ನಡೆಯುತ್ತಿದೆ. ಅದಕ್ಕೆ ನಾನು ಈ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ದಯವಿಟ್ಟು handle this situation differently. ಇದರ ಬಗ್ಗೆ ಸ್ವಲ್ಪ tactic ಆಗಿ handle

ಮಾಡಿ. ನಕ್ಸಲೈಟ್ ನ senior leader ಅವರ ಜೊತೆಗೆ ನೀವು, some situations have to be handle with tactics. ಕೆಲವು police officers ಒಳ್ಳೆಯವರಿದ್ದಾರೆ. ಆದರೆ ಕೆಲವು police officers ಗೆ common sense ಇಲ್ಲ. I am sutre that common sense is not very common among these burocrats. ದಯವಿಟ್ಟು ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಪ್ರಕಾಶ್‌ರಾವ್‌ರವರು ಗೃಹ ಮಂತ್ರಿಗಳಿದ್ದಾರೆ. please handle this issue differently. ಎಂದು ನನ್ನ ಮನವಿ.

ಶ್ರೀ ಸುನಿಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾವು ಆ ಬಾಗದಿಂದ ಬಂದಂತಹವರು ಮತ್ತು ಹೋರಾಟಗಳಲ್ಲಿ ಪಾಲ್ಗೊಂಡಂತಹವರು. ದಯಮಾಡಿ ನಮಗೆ ಮಾತನಾಡುವುದ್ಕಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ನೀವು ನರಸಿಂಹರಾಜಪುರದವರಾ? ಮಾತನಾಡಿ ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:(ಚಾಮರಾಜನಗರ) ಮಾನ್ಯ ಅಧ್ಯಕ್ಷರೆ, ಇದನ್ನು ನಿಲುವಳಿ ಸೂಚನೆ ಮೂಲಕ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿದಾಗ ಬೇರೆ ರೂಪದಲ್ಲಿ ಇದು ಚರ್ಚೆಗೆ ಬಂದಿದೆ. ಮಾನ್ಯ ಗೃಹಮಂತ್ರಿಗಳು ಒಂದು ಹೇಳಿಕೆಯನ್ನು ನೀಡಿದ್ದಾರೆ. ಪತ್ರಿಕೆಗಳಲ್ಲಿ ಕೂಡ ನಾವು ವರದಿಗಳನ್ನು ನೋಡಿದ್ದೇವೆ. ಪತ್ರಿಕೆಯಲ್ಲಿ ಬಂದಿರುವಂತಹ ವರಿದಿ ಏನೆಂದರೆ ಆ ಸ್ಥಳದಲ್ಲೇ ಪತ್ರಕರ್ತರು ಇದ್ದು ಪರಿಸ್ಥಿತಿಯನ್ನು ಅವಲೋಕಿಸಿ ಬಂದಿರತಕ್ಕಂತಹ ಚಿತ್ರ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಒಂದು ವಿಚಾರ ನಕ್ಸಲೈಟರು ಎಂದರೆ ಯರು? ಭಯೋತ್ಪಾದಕರು ಯಾರು? ಮತ್ತು ದರೋಡೆ ಕೋರರು ಯಾರು? ಒಂದರಿಂದ ಒಂದಕ್ಕೊಂದು ಸಂಭಂಧವಾಗುತ್ತೆ. ನಕ್ಸಲೈಟರದ್ದು ಅವರದ್ದೇ ಆದಂತಹ ಇತಿಹಾಸ, ಅವರದ್ದೇ ಆದಂಥಹ ಚರಿತ್ರೆ, ಅವರದ್ದೇ ಆದಂತಹ ಹೋರಾಟಗಳು ಇರುವಂಥಾದ್ದು. ಕಾಡುಗಳ್ಳ ನರಹಂತಕ ವೀರಪ್ಪನ್ ವಿಚಾರವೇ ಬೇರೆ. ಅದಕ್ಕೂ ಕೂಡ ಒಂದು ಸಮಗ್ರ ಇತಿಹಾಸ ಇದೆ. ಅದು ಏನಾಯಿತು? ಯಾವ ರೀತಿಯಾಯಿತು? ಎಂದು ಮತ್ತೆ ಚರ್ಚೆ ಮಾಡುವುದರಿಂದ ಪ್ರಯೋಜನವಿಲ್ಲ. ಅದರಲ್ಲೂ

ಕೂಡ ಅನೇಕ ಅಮಾಯಕರು ಸತ್ತಿದ್ದಾರೆ. ದನ ಕಾಯುವವವರು ಸತ್ತಿದ್ದಾರೆ. ರಸ್ತೆಯಲ್ಲಿ ಓಡಾಡುತ್ತಿದ್ದವರು ಸತ್ತಿದ್ದಾರೆ. ಕೆರೆ ಕಾಯುತ್ತಿದ್ದವರು ಸತ್ತಿದ್ದಾರೆ. ಅದನ್ನು ಈಗ ಚರ್ಚೆ ಮಾಡಿ ಪ್ರಯೋಜನವಿಲ್ಲ ಮತ್ತು ಅವನು ಯಾವ ರೀತಿ ಸತ್ತನು ಎಂದು ಚರ್ಚೆ ಮಾಡಿ ಕೂಡ ಪ್ರಯೋಜನವಿಲ್ಲ. ಆದರೆ ಮಾನ್ಯ ಗೃಹ ಸಚಿವರಾದ ಪ್ರಕಾಶ್‌ರವರು ಒಂದು ಹೇಳಿಕೆ ಕೊಟ್ಟರು. ಸಾಮಾನ್ಯವಾಗಿ ಸದನದಲ್ಲಿ ಹೇಳಿಕೆ ಕೊಡುವುದು ಹೇಗೆಂದರೆ ಅದಿಕಾರಿಗಳು ಕೊಟ್ಟಂತಹ ವರದಿಯನ್ನು ಸದನದಲ್ಲಿ ಓದುವುದು ಮೊದಲಿನಿಂದಲೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಡೆದು ಬಂದಿದೆ. ಅದಿಕಾರಿಗಳೇ ಇಲ್ಲಿ ಬಂದು ಹೇಳುವುದಕ್ಕಾಗುವುದಿಲ್ಲ. ಈ ಒಂದು ಹೇಳಿಕೆ ಸಾಮಾನ್ಯ Police Constable ಕೊಡುವುದಕ್ಕಿಂತಲೂ ಕಡೆಯದಾಗಿದೆ. ತಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ. ನಮ್ಮ ರಾಜ್ಯದ ಅತ್ಯಂತ ಮುತ್ಸದ್ದಿ ಮತ್ತು ಈ ಬಗ್ಗೆ ತಿಳುವಳಿಕೆ ಇರುವವರು. ಮೊನ್ನೆ ಪೋಲೀಸ್‌ನವರು ಕೊಟ್ಟಂತಹ ಒಂದು ನಕ್ಸಲರ ಪಟ್ಟಿಯನ್ನು ಪ್ರಕಟಣೆ ಮಾಡಿದರು. ಆ ಪಟ್ಟಿಯನ್ನು ಪ್ರಕಟಣೆ ಮಾಡಿದಾಗ ಇಡೀ ರಾಜ್ಯದಲ್ಲೇ ಪ್ರಗತಿವಾದಿಗಳು, ಚಿಂತನಾಶೀಲರು, ಹೀಗೆ ಅನೇಕರು ಈ ಪಟ್ಟಿಯನ್ನು ವಿರೋಧ ಮಾಡಿದರು. ಏಕೆಂದರೆ ಈ ಪಟ್ಟಿಯಲ್ಲಿ ಕಡಿದಾಳ್ ಶಾಮಣ್ಣನಂತಹವರು ಹೆಸರು ಸೇರಿದೆ. ಅದಕ್ಕೆ ಇದನ್ನು ಬದಲಾವಣೆ ಮಾಡಬೇಕೆಂದು ವಿರೋಧ ಮಾಡಿದರು. ಅದರ ಬಗ್ಗೆ ತಮಗೆ ಮನವರಿಕೆ ಯಾಯಿತು, ಬದಲಾವಣೆ ಮಾಡಿದಿರಿ ಹಾಗೂ ಅದರ ಪಟ್ಟಿಯಲ್ಲಿ ಸೇರಿಸುವಾಗ ಯಾರಿದ್ದಾರೆ, ಅವರ ಹಿನ್ನೆಲೆ ಏನು ಎಂದು ನೋಡಿ ಮಾಡಬೇಕಾಗಿರುವಂಥಾದ್ದು ಬಹಳ ಪ್ರಾಮುಖ್ಯವಾಗಿ ರುವಂಥಾದ್ದು. ಆದರೆ ನಿಮಗೆ ಅರ್ಥವಾಯಿತು, ಅನೇಕರು ಈ ಒಂದು ವಿಚಾರದಲ್ಲಿ ಸೇರಿಲ್ಲ. ಎಲ್ಲೋ ಒಂದು ಕಡೆ ಅದರ ಬಗ್ಗೆ ಚಚೆ ಮಾಡಬಹುದು, ಚಿಂತನೆ ಮಾಡಿರಬಹುದು, ಅವರೆಲ್ಲರನ್ನೂ ನಕ್ಸಲಿಸ್ಟ್ ಎಂದು ಹೇಳಿ ಪಟ್ಟಿಯಲ್ಲಿ ಸೇರಿಸುವುದು ಸರಿಯಲ್ಲ ಎಂದು ಪಟ್ಟಿಯಿಂದ ತೆಗೆದಿದ್ದೀರಿ. ನಾವು ಅದನ್ನು ಒಪ್ಪುತ್ತೇವೆ. ಇವತ್ತು ಹೇಳಿಕೆ ಪ್ರಕಾರ ಅಲ್ಲಿ ಅದೊಂದು ಸಣ್ಣ ಮನೆ. ಅದೇನು ದೊಡ್ಡ ಗಡಿ ಪ್ರದೇಶವಲ್ಲ ಅಥವಾ ಬಾರೀ ಊರಲ್ಲ. ಒಂದು ದೊಡ್ಡ ಭಾರಿಮನೆಯಲ್ಲಿ ನೂರಾರು ಜನ ಒಳಗಡೆ ಸೇರಿದ್ದಾರೆ, ನಾವು ಅವರನ್ನು ಕೊಲ್ಲಬೇಕಾಗಿದೆ, ಎಂದು ನಕ್ಸಲ್ ನಿಗ್ರಹ ದಳದವರು ಸುತ್ತ ಸುತ್ತುವರೆದಿದ್ದೇವೆ. ಆದರೆ ಅವರಿಂದ ಪ್ರತಿರೋಧ ಏನು? ನಾವು ಪ್ರಾಮಾಣಿಕವಾಗಿ ಮಾತನಾಡೋಣ. ನೀವು ಹೇಳಿರು

ವಂಥಹ ವಿಚಾರದಲ್ಲಿ ಪ್ರತಿರೋಧ ಏನು? ಇದರ ಬಗ್ಗೆ ನಿಮಗೆ ಮಾಹಿತಿ ಇರಬೇಕಲ್ಲ. ಇಲ್ಲಿ ಸುಸುರು ಬತ್ತಿ ಅಥವಾ ಪಟಾಕಿ ಇದ್ದ ಹಾಗೆ ಒಂದೆರಡು ಮೂರು ಗುಂಡು ಒಳಗಡೆ ಇತ್ತೆಂದು ನೀವೇ ಹೇಳುತ್ತಿದ್ದೀರಿ. ಆದರೆ ಆ ಊರಿನ ಹಳ್ಳಿಯ ಜನ ಏನು ಹೇಳುತ್ತಾರೆ? ಮಾನ್ಯ ಅಧ್ಯಕ್ಷರೆಮ ಇದು ಬಹಳ ಪ್ರಾಮುಖ್ಯವಾದುದು, ತಾವು ಗಮನಿಸಬೇಕು. ಯಾವುದೇ ದೇಶದ್ರೋಹಿಗಳಾಗಲಿ, ರಾಜ್ಯ ದ್ರೋಹಿಗಳಾಲಿ, ಪೋಲೀಸ್‌ನವರು ಹೊಡೆಯುವುದಕ್ಕೆ ಬಂದಾಗ ಅವರನ್ನು ಬಿಡಿಸುವುದಕ್ಕೆ ಯಾರೂ ಹೋಗುವುದಿಲ್ಲ. ಇದು ಸ್ಪಷ್ಟ. ಆದರೆ ಇಲ್ಲಿ ಜನ ನಮ್ಮ ಎದೆಗೆ ಹೊಡೆಯಿರಿ, ನಮ್ಮ ಎದೆಗೆ ಗುಂಡನ್ನು ಹಾರಿಸಿ ಎಂದು ಹೇಳಿದ್ದಾರೆ. ಅಲ್ಲಿರುವಂತಹ ಅಮಾಯಕ ರೈತರು ಬರುವುದೊರಳೊಗಾಗಿ ಹೊಡೆದು ಅವರನ್ನು ಉರುಳಿಸಿದರು. ಬೇರೆ ಮಾತಿಲ್ಲ. ಪೋಲೀಸ್ ಗುಂಡು ಹೊಡಿ ಎಂದು ಯಾರೂ ಹೇಳಲಿಲ್ಲ. ವಿವೇಚನೆ ಇಲ್ಲ, ಯಾರೂ ಇವರಿಗೆ ಹೊಡಿಯಿರಿ ಎಂದು ಹೇಳಿದರು? ಒಳಗಡೆಯಿಂದ ಎಷ್ಟು ಗುಂಡು ಬಂತು? ಮನೆಯನ್ನು ಪೋಲೀಸರು ಬಂದು ಸುತ್ತುವರೆದ ತಕ್ಷಣ ಮನೆಯಿಂದ ಗುಂಡು ಹೊರ ಬರಬೇಕಲ್ಲ. ರಾಮೇಗೌಡ, ಸುಬ್ರಹ್ಮಣ್ಯ ಮತ್ತು ಕಾವೇರಿ ಇವರು ಎಷ್ಟು ಗುಂಡು ಇಟ್ಟುಕೊಂಡಿದ್ದರು? ಎಷ್ಟು ಬಂದೂಕುಗಳನ್ನು ಇಟ್ಟುಕೊಂಡಿದ್ದರು. ಎಷ್ಟು ಬಾಂಬ್‌ಗಳನ್ನು ಇಟ್ಟುಕೊಂಡಿದ್ರು. ಏನೂ ಇಲ್ಲ. ನಿರಪರಾಧಿಗಳನ್ನು ನಿರಾಯುಧರನ್ನು ಗುಂಡಿಟ್ಟು ಕೊಂದು ಹಾಕಿದಿರಿ. ಪಾಪ ಅದು ಏನು ಎಂದು ಅರ್ಥವಾಗುತ್ತಿಲ್ಲ. ಅಲ್ಲಿ ಹಳ್ಳಿ ಜನರು ಹೇಳುವ ಪ್ರಕಾರ ಸ್ವಾಮಿ ಮನೆಯಲ್ಲಿ ಏನೂ ಇರಲಿಲ್ಲ. ಗುಂಡು ಹಾಕಿ ಕೊಂದ ಮೇಲೆ ಹೆಣ ಕೆಳಗುರುಳಿದ ಮೇಲೆ ಪೋಲೀಸ್‌ನವರೆ ಒಳಗೆ ಹೋಗಿ ಬಂದೂಕು ಹಾಗೂ ಗುಂಡುಗಳನ್ನಿಟ್ಟರು ಎಂದು ಅಲ್ಲಿರುವಂತಹ ಪ್ರತ್ಯಕ್ಷದರ್ಶಿ ಜನರು ಸ್ಪಷ್ಟವಾಗಿ ಹೇಳುವಂತಹ ಮಾತು. ಇದು ಅತ್ಯಂತ ಗಂಭೀರವಾದಂಥಹ ಪರಿಸ್ಥಿತಿ. ಬೇರೆ ಯಾವುದೇ ರಾಜ್ಯ ಅಥವಾ ದೇಶದಲ್ಲಿ ಆಗಿದ್ದರೆ ಇವರು ಮಾಡಿರುವಂತಹ ಕೃತ್ಯಕ್ಕೆ ಸರ್ಕಾರಗಳು ರಾಜೀನಾಮೆಯನ್ನು ಕೊಡಬೇಕಾಗಿತ್ತು. ನನಗೆ ಪೋಲೀಸರ ಬಗ್ಗೆ ಗೌರವ ಮತ್ತು ವಿಶ್ವಾಸ ಇದೆ. ಆದರೆ ನಿರಾಯುಧರ ವಿಚಾರದಲ್ಲಿ ತೆಗೆದುಕೊಂಡಿರುವಂಥಹ ಪೋಲೀಸ್ ನಿರ್ಧಾರ ಏನಿದೆ, ಇದು ಅತ್ಯಂತ ಅಪಾಯಕಾರಿ ಕೃತ್ಯ. ಅವರ ಮೇಲೆ ಹಾಕಿರತಕ್ಕಂಥ ಕೇಸುಗಳು ಯಾವುದು? ಮೊಕದ್ದಮೆಗಳು ಇಂತಹ ಅನೇಕ ಮೊಕದ್ದಮೆಗಳನ್ನು ನಮ್ಮ ಮೇಲೆ ಹಾಕಿದ್ದಾರೆ. 60,67

ರಲ್ಲಿ ಮಾನ್ಯ ಸಿದ್ದರಾಮಯ್ಯನವರೆ ನಿಮಗೆ ಹೇಳುವುದಾದರೆ ಅ07 ನೇ ಸೆಕ್ಷನ್ ಪ್ರಕಾರ ಕೇಸ್ ಹಾಕಿದ್ದರು. ಪೋಲೀಸ್ ಕಾಯಿದೆಯಲ್ಲಿ ಯಾವ್ಯಾವ ಮಿಕದ್ದಮೆಯನ್ನು ಹಾಕಬೇಕು ಎಂದು ಇದೆ. ಒಂದು, ಎರಡು, ಮೂರು, ನಾಲ್ಕು ಎಂದು ಒಟ್ಟಿಗೆ ಹಾಕಿಬಿಡಿ. ಆಮೇಲೆ ತಾನೇ ತೀರ್ಮಾನ ವಾಗುವುದು. ನನಗೆ ಅನಿಸುತ್ತಿದೆ, ಇದು ಗುರುತರವಾದ ಅಪ್ಪಾದನೆ, ಅನ್ಯಾಯವಾಗಿ ನೇರವಾಗಿ ನಿರಪರಾದಿಗಳನ್ನು ಕೊಂದು ಹಾಕಿದ್ದಾರೆ. ಇದರ ಬಗ್ಗೆ ಸಮಗ್ರವಾಗಿ ನ್ಯಾಯಾಂಗ ತನಿಖೆ ಯಾಗಲೇ ಬೇಕು. ಹೈಕೋರ್ಟ್‌ನ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ಮಾಡಬೇಕೆಂದು ಆಜ್ಞೆಯನ್ನು ನೀವು ಮಾಡಲೇಬೇಕಾಗುತ್ತದೆ. ತಮ್ಮ ಬಗ್ಗೆ ನನಗೆ ಗೌರವವಿದೆ. ಇಲ್ಲಿ ನೋಡಿ ಒಂದು ಪುಟದಲ್ಲಿ ನಾಲ್ಕು ಲೈನ್ ಏನು ಕಾರಣ ಎಂದು ಬರೆದುಕೊಟ್ಟರು. ಈ ರಿತಿ ಸಿಕ್ಕಸಿಕ್ಕವರೆಲ್ಲಾ ನಕ್ಸಲಿಸ್ಟ್, ನೀವು ಯಾರ್‍ಯಾರನ್ನು ಕೊಲ್ಲುತ್ತೀರಿ. ಹೆನ ಉರುಳಿದವರೆಲ್ಲರ ಮುಂದೆ ನಕ್ಸಲೈಟ್ ಪಟ್ಟಿ ಹಾಕಿಬಿಡಿ. ಮನೆ ಮಾಲೀಕ ರೈತ ರಸ್ತೆಯಲ್ಲಿ ಹೋಗುವವನು, ದನ ಕಾಯುವವನು, ಬೀದಿಯಲ್ಲಿ ಹೋಗುವವನು, ಹೋಟೆಲನಲ್ಲಿ ಕಾಫಿ ಕುಡಿಯುವವನು, ಆ ಪ್ರದೇಶದಲ್ಲಿ ಯಾರ್‍ಯಾರು ಕುಳಿತಿರುತ್ತಾರೆ ಅವರೆಲ್ಲರನ್ನೂ ಹೊಡೆಯಿರಿ. ಪೋಲೀಸ್ ಇಲಾಖೆ ಎಲ್ಲರ ಮೇಲೂ ನಕ್ಸಲಿಸ್ಟ್ ಮುದ್ರಣ ಮಾಡಿ. ರಾಜ್ಯದಲ್ಲಿ ಏನಿದು ಹುಡುಗಾಟ? ನಾನು ಇವತ್ತು ಹೇಳುತ್ತೇನೆ, ಕಾನೂನು ಸುವ್ಯಸ್ಥೆ ಸತ್ತುಹೋಗಿದೆ, ನೆನ್ನೆ ಬೆಂಗಳೂರಿನಲ್ಲಿ ಮಾತುಕತೆಗೆ ಹೋದಂತಹ ಸಂದರ್ಭದಲ್ಲಿ ಒಬ್ಬನನ್ನು ಗುಂಡಿಟ್ಟು ಕೊಂದಿದ್ದಾರೆ. ನಾವು ಇದರ ಬಗ್ಗೆ ಸಹಿಸಿಕೊಂಡು ಇರುವುದಕ್ಕಾಗುವುದಿಲ್ಲ. ಎಷ್ಟು ಜನ ಸಾಯುತ್ತಿದ್ದಾರೆ? ಯಾವ್ಯಾವ ರೀತಿ ಸಾಯುತ್ತಿದ್ದಾರೆ? ಬೆಂಗಳೂರಿನಲ್ಲಿ ಒಂದೇ ಸಮನೆ ಎಷ್ಟು ಜನ ಗುಂಡಿನಿಂದ ಸತ್ತು ಹೋಗಿದ್ದಾರೆ. ಇದರ ಬಗ್ಗೆ ಗೃಹ ಇಲಾಖೆ ವಿಚಾರ ಬಂದಾಗ ಚರ್ಚೆಯನ್ನು ಮಾಡೋಣ, ಮಾನ್ಯ ಗೃಹ ಮಂತ್ರಿಗಳಿಗೆ ಹೇಳುತ್ತೇನೆ, ಈ ಒಂದು ಹೇಳಿಕೆ ಸತ್ಯಕ್ಕೆ ದೂರವಾದಂತಹ ಹೇಳಿಕೆ. ಈ ಹೇಳಿಕೆ ಪ್ರಕಾರವೇ, ನಾವು ಪ್ರಾಮಾಣಿಕವಾಗಿ ಸಂಪೂರ್ಣ ವಿವರಣೆಯನ್ನು ನೀಡಿದರೆ, ನಿರಪರಾದಿಗಳ ಮೇಲೆ ಗುಂಡಿನ ಮಳೆ ಗರೆದಿದ್ದಾರೆ. ಆದುದರಿಂದ ಇದು ಸಂಪೂರ್ಣವಾಗಿ ಸಮಗ್ರವಾಗಿ ಚರ್ಚೆಯಾಗಬೇಕು, ತಾವು ಇದಕ್ಕೆ ಒಂದು ಸದನ ಸಮಿತಿಯುನ್ನು ವಾಡಿ, ಸ್ಥಳಕ್ಕೆ ಕಳುಹಿಸಿಕೊಡಬೇಕು. ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ. ಎರಡೂ ಸದನಗಳ ಸದಸ್ಯರನ್ನೊಳಗೊಂಡ

ಸದನ ಸಮಿತಿಯನ್ನು ಆ ಊರಿನ ಜನರನ್ನು ಭೇಟಿ ಮಾಡುವುದಕ್ಕೆ ಕಳುಹಿಸಬೇಕು. ಇಲ್ಲಿ ಊರಿನ ಜನರೆಲ್ಲಾ ನಕ್ಸಲೀಯರೇ. ಇಲ್ಲಿ ಎದೆಗೆ ಗುಂಡು ಹೊಡೆದಿದ್ದಾರೆಂದು ಇಡೀ ಊರಿನ ಜನ, ಆ ಪ್ರದೇಶದಲ್ಲಿರುವಂಥಾ ಜನ, ಆ ಮನೆಯ ಸುತ್ತಾ ಇರುವಂಥಾ ಜನ, ಆ ರೈತರು, ರೈತರು ಯಾವಾಗ ಬರುತ್ತಾರೆ? ಎಲ್ಲಾ ಗುಂಡು ಹೊಡೆದು, ಹೆಣ ಬಿದ್ದ ಮೇಲೆ ಬರುತ್ತಾರೆ. ಅವರು ಏನು ಹೇಳುತ್ತಾರೆಂದರೆ, ರಾಮೇಗೌಡ ಹೋಗಿಬಿಟ್ಟ, ಕಾವೇರಿ ಹೋಗಿಬಿಟ್ಟರು, ಇದು ಏನು? ನಮ್ಮ ಪರಿಸ್ಥಿತಿ ಏನು? ಎಂದು ಗೋಳಾಡುತ್ತಾರೆ. ನೋವು ಪಡುತ್ತಾರೆ. ಇದು ಕರುಣೆಯಲ್ಲ. ಇದು ನಿಜಕ್ಕೂ ಕರುಳನ್ನು ಕಿತ್ತು ಹೊರಗೆ ಎಸೆದ ಹಾಗೆ. ಈ ಪರಿಸ್ಥಿತಿಯಾಗಿದೆ. ಈ ಸದನದಲ್ಲಿ ನಾನು ತಮಗೆ ಎರಡು ಕೈ ಜೋಡಿಸಿ ಕೇಳುತ್ತೇನೆ. ಇದರ ಬಗ್ಗೆ ಸಮಗ್ರ ತನಿಖೆ ಮಾಡಿ, ಇದರ ಬಗ್ಗೆ ನಿಷ್ಪಕ್ಷ ಪಾತವಾದ ನ್ಯಾಯಾಂಗ ತನಿಖೆ ನಡೆಯಲಿ, ಹೊರಗಡೆ ಯಾರು ಬರುತ್ತಾರೆ. ಅವರಿಗೆ ಶಿಕ್ಷೆಯಾಗಲಿ ಎಂಬ ಮಾತನ್ನು ಹೇಳುತ್ತೇನೆ. ಇಲ್ಲಿ ನಿರಪರಾಧಿಗಳನ್ನು ಕೊಂದಿರು ವಂಥಾದ್ದು ಇಷ್ಟು ಆದಮೇಲೆ ನಕ್ಸಲರನ್ನು ಹುಡುಕುತ್ತಿದ್ದಾರಂತೆ, ಇಲ್ಲಿ ಯಾರು ನಕ್ಸಲೀಯರುಎಂಬುದನ್ನು ಹೇಳಬೇಕು. ರಾಜ್ಯದಲ್ಲಿ ಎಷ್ಟು ಜನ ಇದ್ದಾರೆ? ಯಾವ ರೀತಿ ಇದ್ದಾರೆ? ಯಾವ ಪರಿಸ್ಥಿತಿ ಎನ್ನುವಂಥಾದ್ದು ಸ್ಪಷ್ಟಪಡಿಸಬೇಕು. ಇಲ್ಲಿ ಸಿಕ್ಕ ಸಿಕ್ಕವರನ್ನೆಲ್ಲಾ ನಕ್ಸಲೀಯರೆನ್ನುವುದಲ್ಲ. ನಕ್ಸಲೀಯರದು ಒಂದು ಇತಿಹಾಸವಿದೆ. ಚರಿತ್ರೆ ಇದೆ. ಅದರ ಬಗ್ಗೆ ತಾವು ಸ್ಪಷ್ಟವಾದ ನಿರ್ಧಾರವನ್ನು ಕೈಗೊಳ್ಳಬೇಕು. ತಾವು ಸಮಾಜವಾದಿ ಸಿದ್ಧಾಂತದಿಂದ ಬಂದಿರುವಂಥವರು. ಇತಿಹಾಸವಿರುವಂಥವರು. ಹೋರಾಟ ಬಗ್ಗೆ ಚಿಂತನೆ ಇರುವಂಥವರು. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕಳಕಳಿಯಿಂದ ಮನವಿಯನ್ನು ಮಾಡುತ್ತೇನೆ. ನಿಮಗೂ ಇದರಿಂದ ಕೆಟ್ಟ ಹೆಸರು ಬರುವುದು ಬೇಡ. ನೀವೆಲ್ಲರೂ ಕುಳಿತು ಮಾತನಾಡಿ. ತನಿಖೆಗೆ ನೆರವಾಗಿ ಸಾಮಾಜಿಕ ನ್ಯಾಯವಾದಂಥ ನ್ಯಾಯಾಂಗ ತನಿಖೆ ಇದು ಆಗಬೇಕು. ಇದು ಬೇಗೆ ಆಗಬೇಕು. ಇದರ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆ ಕೈಗೊಳ್ಳಬೇಕು. ತಮ್ಮ ಕಾಲದಲ್ಲಿ ಈ ರೀತಿ ಗುಂಡಿನ ಮಳೆಯಾಗುವುದು ಬೇಡ. ಈ ರೀತಿ ನಿರಪರಾದಿಗಳನ್ನು ಕೊಲ್ಲುವುದು ಬೇಡ. ಇದು ಒಳ್ಳೆಯ ಸೂಚನೆಯಲ್ಲವೆಂಬ ಮಾತನ್ನು ಸ್ಪಷ್ಟವಾಗಿ ಹೇಳಿ. ನ್ಯಾಯಾಂಗ ತನಿಖೆಗೆ ಒತ್ತಾಯ ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸಮಯ ಮಧ್ಯಾಹ್ನ 1.30 ಗಂಟೆಯಾಗಿದೆ. ಇನ್ನು ಈ ವಿಷಯದ ಬಗ್ಗೆ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ತಮಗೆ ಒಂದು ಪತ್ರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ಈಗ ಆ ಭಾಗದಲ್ಲಿರುವ ಶಾಸಕರು ಮಾತನಾಡಬೇಕೆಂದು ಕೇಳುತ್ತಿದ್ದಾರೆ. ಬೇರೆ ಬೇರೆ ಸದಸ್ಯರು ಕೇಳುತ್ತಾರೆ. ಇದಕ್ಕೆ ಸಹಿ ಮಾಡಿರುವ ಸದಸ್ಯರು ಇದ್ದಾರೆ.

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಆ ಬಾಗದಿಂದ ಬಂದಿರುವ ಶಾಸಕರುಗಳಿಗೆ ಮಾತನಾಡಲು ಅವಕಾಶವನ್ನು ಕೊಡಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಆ ಬಾಗದ ಶಾಸಕರಿಗೂ ಮಾತನಾಡಲು ಅವಕಾಶ ಕೊಡಿ, ಬೇಡವೆಂದು ಹೇಳುವುದಿಲ್ಲ.

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ನಕ್ಸಲರ ಸಮಸ್ಯೆಯಿಂದ ನೊವು ಅನುಭವಿಸುತ್ತಿರುವವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ಪತ್ರವನ್ನು ಕೊಟ್ಟಿದ್ದೇನೆ, ತಾವು ಈ ರೀತಿ ಮಾಡಿಬಿಟ್ಟರೆ ಹೇಗೆ?

ಅಧ್ಯಕ್ಷರು: ಆ ಬಾಗದಿಂದ ಬಂದಿರುವ ಶಾಸಕರು ಕೇಳುತ್ತಿದ್ದಾರೆ, ಸಹಿ ಮಾಡಿರುವವರು ಕೇಳಿತ್ತಿದ್ದಾರೆ. ಅದಕ್ಕೆ ಈಗ 1.30 ಗಂಟೆಯಾಗಿದೆ. ಊಟಕ್ಕೆ ಸಭೆಯನ್ನು ಮುಂದೂಡಿ ಮತ್ತೆ ಸಭೆ ಸೇರಿ ಈ ವಿಷಯವನ್ನು ಮತ್ತೆ ತೆಗೆದುಕೊಳ್ಳೋಣ.

ಶ್ರೀ ಸುನಿಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಕ್ಸಲ್ ಭಾಗದಿಂದ ಬಂದಿರುವವರು ನಾವು ಇದ್ದೇವೆ. ನಮಗೆ ಈ ವಿಷಯದ ಬಗ್ಗೆ ಮನ್ನಣೆ

ಕೊಡಿ. ಸತ್ಯಾಂಶ ಹೊರಗಡೆ ಬರಬೇಕಾಗಿದೆ. ಒಂದೇ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ವಾಸ್ತವಿಕ ಏನೆಂಬುದು ಹೊರಗೆ ಬರಬೇಕಾಗುತ್ತದೆ. ನಾವು ನಕ್ಸಲ್ ಭಾಗದಿಂದ ಬಂದಿರುವವರು.

ಅಧ್ಯಕ್ಷರು: ಈಗ 1.30 ಗಂಟೆಯಾಗಿದೆ.

(ಗೊಂದಲ)

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸುನಿಲ್ ಕುಮಾರ್‌ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಈಗ ಸಭೆಯಲ್ಲಿ ಹೆಚ್ಚಿಗೆ ಸದಸ್ಯರು ಇದ್ದಾರೆ. ಮದ್ಯಾಹ್ನವೆಂದರೆ ಯಾರು ಇರುವುದಿಲ್ಲ.

ಅಧ್ಯಕ್ಷರು: ಏಕೆ ಇರುವುದಿಲ್ಲ.? ಇಲ್ಲಿ ಮಾತನಾಡುವವರೆಲ್ಲ ಇರಲೇ ಬೇಕು. ಈಗ 1.30 ಗಂಟೆಯಾಗಿದೆ. ಸಬೆಯನ್ನು ಮುಂದೂಡಿ ಊಟದ ನಂತರ ಮತ್ತೆ 2.30 ಗಂಟೆಗೆ ಸೇರೋಣ.

(ಗೊಂದಲ)

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸುನಿಲ್ ಕುಮಾರ್‌ಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಮಗೂ ಹೇಳುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಈಗ ಊಟಕ್ಕೆ ಹೋಗೋಣ, 2.30 ಗಂಟೆಗೆ ಬನ್ನಿ, ಆಗ ಮಾತನಾಡಿ. ನಾನು ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಡಿ.ಎನ್ ಜೀವರಾಜ್: ಮಾನ್ಯ ಅಧ್ಯಕ್ಷರೆ, ಊಟ ಆದಮೇಲೆ ಯಾರೂ ಇರುವುದಿಲ್ಲ.

ಅಧ್ಯಕ್ಷರು: ಎಲ್ಲ ಇರುತ್ತಾರೆ. ಈಗ ಆ ಬಾಗದಿಂದ ಬಂದಿರುವಂಥಾ ಶಾಸಕರು ಮುಂದಿನ ಬೆಂಚ್‌ನಲ್ಲಿರುವಂಥವರು ಏನೋ ಮಾತನಾಡಿ ಹೊರಟು ಹೋಗುತ್ತಾರೆ. ನಮ್ಮ ನೋವುಗಳನ್ನು ಹೇಳುವಾಗ ಅವರು ಇರುವುದಿಲ್ಲವೆಂದು ಹೇಳುತ್ತಾರೆ. ಆದುದರಿಂದ 2.30 ಗಂಟೆಗೆ ತಾವುಗಳು ಸಭೆಯಲ್ಲಿ ಇರಬೇಕು. ಈಗ ಸಭೆಯನ್ನು ಮುಂದೂಡೋಣ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಪತ್ರವನ್ನು ಕೊಟ್ಟಿರುವವರು ನಮ್ಮ ಗತಿ ಏನು?

ಅಧ್ಯಕ್ಷರು: ಈ ವಿಷಯ ಬಹಳ ಗಂಭೀರವಾಗಿ ಇರುವುದರಿಂದ ಮದ್ಯಾಹ್ನ ಚರ್ಚೆ ಮಾಡೋಣವೆಂದರೆ.......

ಶ್ರೀ ಸುನೀಲ್ ಕುಮಾರ್: ಮಾನ್ಯ ಅಧ್ಯಕ್ಷರೆ, ಅವರು ಆ ಕ್ಷೇತ್ರದ ಶಾಸಕರು. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನಾವು ಪ್ರತಿ ದಿವಸವೂ ಬಹಳ ಗಂಭೀರವಾಗಿ ಅನುಭವಿಸುತ್ತಿದ್ದೇವೆ. ಇದು ನಮ್ಮ ನೋವಿನ ಪ್ರಶ್ನೆ. ಇದನ್ನು ಯಾರೂ ಕೇಳುವುದಿಲ್ಲ.

ಅಧ್ಯಕ್ಷರು: ಆಯಿತು, ಒಬ್ಬರು ಮಾತನಾಡಿ, ಮಾನ್ಯ ಸುನಿಲ್ ಕುಮಾರ್‌ರವರೆ ತಾವು ಮಾತನಾಡಿ.

ಶ್ರೀ ಸುನಿಲ್ ಕುಮಾರ್(ಕಾರ್ಕಳ): ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ನಮ್ಮ ಮಲೆನಾಡಿನ ಭಾಗಗಳಲ್ಲಿ ನಡೆಯುತ್ತಿರುವಂಥಾ ನಕ್ಸಲ್ ಚಟುವಟಿಕೆಗಳ ಕುರಿತಂತೆ, ಹತ್ತಾರು ರೀತಿಯಾದಂಥಹ ಅಭಿಪ್ರಾಯಗಳನ್ನು ನಾವೆಲ್ಲರೂ ಕೇಳುತ್ತಿದ್ದೇವೆ. ವಾಸ್ತವಿಕವಾಗಿ ಆ ಮಲೆನಾಡಿನ ಬಾಗದ ನಮ್ಮ ನಾಲ್ಕೈದು ಶಾಸಕರುಗಳ ಕ್ಷೇತ್ರಗಳಲ್ಲಿ, ಯಾವ ರೀತಿಯ ಭಯದ ವಾತಾವರಣವಿದೆಯೆನ್ನುವಂಥಾದ್ದು ಸಾಕಷ್ಟು ಜನರಿಗೆ ಗೊತ್ತಿಲ್ಲ. ಯಾವುದೋ

ಪತ್ರಿಕಾ ವರದಿಯನ್ನು, ಟಿ.ವಿ. ಮಾಧ್ಯಮಗಳಲ್ಲಿ ಬಂದಂಥಾ ಸುದ್ದಿಗಳನ್ನು ನಿಜವೆಂದು ನಂಬಿಕೊಂಡು ಅದರ ಪರವಾಗಿ, ವಿರೋಧವಾಗಿ ಮಾತನಾಡುವವರ ಸಂಖ್ಯೆ ಜಾಸ್ತಿ ಇದೆ. ನಾನು ಇಲ್ಲಿರುವಂಥಾ ಎಲ್ಲಾ ಶಾಸಕ ಮಿತ್ರರುಗಳಲ್ಲಿ ವಿನಂತಿ ಮಾಡುತ್ತೇನೆ. ಅಲ್ಲಿರುವಂಥಾ ವಾಸ್ತವಿಕ ಸಂಗತಿಗಳನ್ನು ತಿಳಿಯಬೇಕೆಂದರೆ, ನೀವು ದಯಮಾಡಿ ಒಂದೊಂದು ದಿವಸ ನಮ್ಮ ಕ್ಷೇತ್ರಗಳಿಗೆ ಬರಬೇಕು. ಯಾವ ರೀತಿಯಾದಂಥಾ ಭಯದ ವಾತಾವರಣದಲ್ಲಿ ಶಾಸಕರಾಗಿ ಇದ್ದುಕೊಂಡು ಜನ ಸಾಮಾನ್ಯರು ಬದುಕುತ್ತಿದ್ಧೇವೆಂದು ಗೊತ್ತಾಗಬೇಕು. ಪತ್ರಿಕೆಗಳಲ್ಲಿ ಸುಮ್ಮನೆ ಯಾವುದೋ ವರದಿ ಬಂದಿದೆಯೆಂದರೆ, ಟಿ.ವಿಯಲ್ಲಿ ಯಾವುದೋ ಸುದ್ದಿ ಬಂದಿದೆ ಎನ್ನು ಕಾರಣಕ್ಕೋಸ್ಕರ ಅವರೆಲ್ಲರೂ ಸಾಮಾಜಿಕ ಹೋರಾಟಗಾರರು ಎಂದು ಬಿಂಬಿಸುತ್ತಿರುವಂಥಾದ್ದು. ಇದು ಬಹಳ ದುರಂತದ ಸಂಗತಿ. ಏಕೆಂದರೆ ನಮ್ಮ ಪಶ್ಚಿಮ ಭಾಗದ ಏಳೆಂಟು ಪಂಚಾಯತ್‌ಗಳು ಇದ್ದು, ನಾನು ಕಾರ್ಕಳ ಕ್ಷೇತ್ರದ ಶಾಸಕನಾಗಿದ್ದೇನೆ. ನನ್ನ ಕ್ಷೇತ್ರದ ಆ ಭಾಗದಲ್ಲಿ ಒಂದೆರಡು ಪಂಚಾಯತ್‌ಗಳಿಗೆ ನಾನು ಹೋಗಡೆ ಒಂದು ವರ್ಷ ವಾಯಿತು. ಕಾರಣವೇನೆಂದರೆ ಅಲ್ಲಿ ಹೋಗುವ ಸ್ಥಿತಿ ಇಲ್ಲ. ಪಕ್ಕದ ಕ್ಷೇತ್ರ ತೀರ್ಥಹಳ್ಳಿ ಕ್ಷೇತ್ರವಿರಬಹುದು, ಶೃಂಗೇರಿ ಕ್ಷೇತ್ರವಿರಬಹುದು, ಕುಂದಾಪುರ ಕ್ಷೇತ್ರವಿರಬಹುದು, ಆ ಬಾಗದ ಕೆಲವೊಂದು ಕ್ಷೇತ್ರಗಳಲ್ಲಿ ಶಾಸಕರಾಗಿ ಇದ್ದುಕೊಂಡು 6-7 ತಿಂಗಳುಗಳ ಕಾಲ ಕೆಲವೊಂದು ಪಂಚಾಯತ್‌ಗಳಿಗೆ ಇವತ್ತು ಹೋಗದೆ ಇರುವಂಥಾ ಪರಿಸ್ಥಿತಿ ನಿರ್ಮಾಣ ವಾಗಿದೆ. ಇದಕ್ಕೆ ಕಾರಣವೆಂದರೆ, ಯಾವುದೋ ಗಿರಿಜನರ ಪರವಾದ ಹೋರಾಟವೆಂದು ಹೇಳಿಕೊಂಡು ಕರ್ನಾಟಕ, ವಿಮೋಚನರಂಗವೆನ್ನು ವಂಥ ಸಂಘಟನೆಯ ಹೆಸರನ್ನು ಹೇಳಿಕೊಂಡು ಕುದುರೆ ಮುಖ ರಾಷ್ಟ್ರೀಯ ಉದ್ಯಾನ ವಿರೋದಿ ಒಕ್ಕೂಟ ಎಂಬ ಹೆಸರನ್ನು ಹೇಳಿಕೊಂಡು ಸಾಮಾಜಿಕವಾದಂಥ ಹೋರಾಟವೆನ್ನುವ ಹೆಸರಿನಡಿಯಲ್ಲಿ ಇವತ್ತು ಹಿಂಸೆಯ ಚಟುವಟಿಕೆಗಳನ್ನು ಆ ಭಾಗಗಳಲ್ಲಿ ಕಳೆದ ಐದಾರು ವರ್ಷಗಳಿಂದ ಮಾಡುತ್ತಿದ್ದಾರೆ. ನಾವು ಇದನ್ನು ಈ ಹಿಂದೆ ಐದು ವರ್ಷಗಳ ಹಿಂದೆಯೇ ಹೇಳಿದ್ದೇವೆ. ಕುದುರೆ ಮುಖ ರಾಷ್ಟ್ರೀಯ ಉಧ್ಯಾನ ವಿರೋಧಿ ಒಕ್ಕೂಟ, ಅದು ನಕ್ಸಲೀಯ ಚಟುವಟಿಕೆಯನ್ನು ಬೆಂಬಲಿಸುತ್ತಿದೆ. ಅದನ್ನು ಅವತ್ತೇ ಹತ್ತಿಕ್ಕಬೇಕೆನ್ನುವ ಒತ್ತಾಯುವನ್ನು ಅವತ್ತಿನ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ಮುಖ್ಯಾದಿಕಾರಿಗಳಿಗೆ ಹೇಳಿದ್ದೆವು.

ಅವತ್ತು ಪೋಲೀಸ್ ಎಚ್ಚರಿಕೆಯನ್ನು ವಹಿಸಿದ್ದರೆ, ಅವತ್ತು ಸರ್ಕಾರ ಜಾಗ್ರತೆ ವಹಿಸಿದ್ದರೆ, ಬಹುಶಃ ಈ ರೀತಿಯ ಹಂತಕ್ಕೆ ಇವತ್ತು ಸರ್ಕಾರ ತಲುಪುತ್ತಾ ಇರಲಿಲ್ಲ. ಇವತ್ತು ಅಲ್ಲೊರುವಂಥಾ ಜನರು ಏನು ಭಯದ ವಾತಾವರಣದಲ್ಲಿ ಕಳೆಯುತ್ತಿದ್ದಾರೆ, ಆ ಸ್ಥಿತಿಗೆ ಬರುತ್ತಾ ಇರಲಿಲ್ಲ. ಇವತ್ತು ಎನ್‌ಕೌಂಟರ್ ಆಗಿರುವಂಥಾ ಹಿನ್ನಲೆಯಲ್ಲಿ ಸಾಕಷ್ಟು ಜನ ನಿರಪರಾಧಿಗಳನ್ನು ಎನ್ ಕೌಂಟರ್ ಆಗಿದೆಯೆನ್ನುವಂಥಾ ವಾದವನ್ನು ಮುಂದಿಡುತ್ತಿದ್ದಾರೆ. ನಾನು ಕೇಳುವುದೇನೆಂದರೆ ಕಳೆದ 2,3, ವರ್ಷಗಳಿಂದ ಅಲ್ಲಿ ಸಾಮಾನ್ಯ ಕೂಲಿಕಾರನಾದ ಚಂದ್ರಕಾಂತ ಎನ್ನುವವರನ್ನು ನಕ್ಸಲರು ಮನೆಗೆ ಹೋಗಿ, ಅವರ ತಾಯಿಯ ಮೇಲೆ ಅವರನ್ನು ಕಲ್ಲಿನ ಮೇಲೆ ಹಾಕಿ ಅವರ ಎರಡೂ ಕಾಲುಗಳನ್ನು ಪುಡಿ ಮಾಡಿದ್ದು, ಇವತ್ತು ಅವನಿಗೆ ಎರಡೂ ಕಾಲುಗಳು ಇಲ್ಲ. ಅವನು ಕೂಲಿ ಮಾಡಿಕೊಂಡು ಬದುಕುತ್ತಿದ್ದವನು. ಅವನ ಆ ಕಾಲುಗಳನ್ನು ಯಾವ ರೀತಿಯಾಗಿ ಪುಡಿ ಮಾಡಿದ್ದಾರೆಂದರೆ ಯಾವುದೇ ಆಪರೇಷನ್ ಅನ್ನು ಆ ಕಾಲುಗಳಿಗೆ ಮಾಡುವುದಕ್ಕೆ ಆಗುವುದಿಲ್ಲ. ಕಾಲಿನ ಮೂಳೆಗಳು ಪುಡುಪುಡಿಯಾಗಿ ಇವತ್ತು ಅವನ ಎರಡೂ ಕಾಲುಗಳು ಸ್ವಾಧಿನವಿಲ್ಲದೆ, ಚಂದ್ರಕಾಂತ ಬದುಕುತ್ತಿದ್ದಾನೆ. ಇವರ ಬಗ್ಗೆ ಯಾರು ಸಿಂಪತಿಯನ್ನು ವ್ಯಕ್ತಪಡಿಸಿದ್ದಾರೆ? ಪೋಲಿಸ್‌ನವರಿಗೆ ಮಾಹಿತಿಯ್ನು ಕೊಟ್ಟನೆಂಬ ಕಾರಣಕ್ಕೆ ಶೇಷಗೌಡ ಎನ್ನುವವರನ್ನು ಹತ್ಯೆ ಮಾಡಿದ್ದಾರೆ. ಇವರ ಹತ್ಯೆ ಯಾವ ರೀತಿಯಾಗಿ ಮಾಡಿದರೆಂದರೆ, ರಾತ್ರಿ ಊಟ ಮಾಡುತ್ತಿರುವಂಥಾ ಸಂದರ್ಭದಲ್ಲಿ ತಟ್ಟೆಯನ್ನು ಇಟ್ಟುಕೊಂಡಿದ್ದ ಶೇಷೇಗೌಡನನ್ನು ನಕ್ಸಲೀಯರು ಆ ಊಟದ ತಟ್ಟೆಯನ್ನು ಎಲೆದುಕೊಂಡು, ಆತನ ಸಣ್ಣ ಮಗು ಮತ್ತು ಆತನ ಹೆಂಡತಿಯನ್ನು ಬೇರ್ಪಡಿಸಿ ಕರೆದುಕೊಮಡು ಬರುತ್ತಾರೆ. ಅವನಿಗೆ ಯಾವ ರೀತಿಯಾಗಿ ಹಿಂಸೆಯನ್ನು ಕೊಟ್ಟಿದ್ದರೆಂಬುದು ಶಿವರಾಂರವರಿಗೆ ಗೊತ್ತಿದೆ. ಅವತ್ತಿಗೆ ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಅವರ ಎರಡೂ ಕಾಲುಗಳನ್ನು ಪುಡಿಮಾಡಿ, ಕಾಲುಗಳನ್ನು ಕಂಬಕ್ಕೆ ಸುತ್ತಿದರು. ಕಾಲುಗಳನ್ನು ಕಂಬಕ್ಕೆ ಸುತ್ತುತ್ತಾರೆಂದರೆ, ಯಾವ ರೀತಿಯಾಗಿ ಕಾಲುಗಳು ಪುಡಿಯಾಗಿತ್ತವೆಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕಲ್ಲಾ? ಎರಡೂ ಕಾಲುಗಳನ್ನು ಕಂಬಕ್ಕೆ ಸುತ್ತಿ ನಂತರ, ತಲೆಗೆ ಗುಂಡಿಟ್ಟು ಶೇಷೇಗೌಡನ ಹತ್ಯೆ ಮಾಡಿ ನಕ್ಸಲಿಯರು ಹೊರಟು ಹೋದರು. ಮೊನ್ನೆ ಮೊನ್ನೆ ನಡೆದಂತಹ ವೆಂಕಟೇಶನ ಹತ್ಯೆ, ಇದು ಯಾವ ರೀತಿಯಾಗಿ ಆಯಿತೆಂಬುದು

ನಮಗೆ ಗೊತ್ತು. ಇಲ್ಲಿ ಸಾಕಷ್ಟು ಜನರಿಗೆ ಗೊತ್ತಿಲ್ಲ. ಕಳೆದ ಒಂದು, ಒಂದೂವರೆ ತಿಂಗಳ ಕೆಳಗೆ ಮಾವೋವಾದಿ ನಕ್ಸಲಿಯರ ಕೇಂದ್ರೀಯ ಸಮಿತಿಯ ಸದಸ್ಯ ರಮೇಶ್ ಮೊಯಿಲಿಯ ಹತ್ಯೆ ಆಂದ್ರಪ್ರದೇಶದಲ್ಲಿ ಅವತ್ತು ಅಲ್ಲಿರುವ ಸರ್ಕಾರ ಹತ್ಯೆ ಮಾಡಿತು. ಈ ರಮೇಶ್ ಮೊಯಿಲಿಯ ಹತ್ಯೆ ಆಂದ್ರಪ್ರಧೇಶದಲ್ಲಿ ಅವತ್ತು ಅಲ್ಲಿರುವ ಸರ್ಕಾರ ಹತ್ಯೆ ಮಾಡಿತು. ಈ ರಮೇಶ್ ಮೊಯಿಲಿಯನ್ನು ಹತ್ಯೆ ಮಾಡಿದರೆಂಬ ಕಾರಣಕ್ಕೋಸ್ಕರ ಆಗುಂಬೆಯಲ್ಲಿ ಬಸ್ಸನ್ನು ಸುಟ್ಟು ಹಾಕುತ್ತಾರೆ. ರಮೇಶ್ ಮೊಯಿಲಿಗೂ ಆಗುಂಬೆಗೂ ಏನು ಸಂಭಂಧ? ಅಲ್ಲಿ ಕೇಂದ್ರೀಯ ಸಮಿತಿಯ ಸದಸ್ಯನನ್ನು ಹತ್ಯೆ ಮಾಡಿದರೆಂಬ ಆಗುಂಬೆಯಲ್ಲಿರುವ ಪ್ರಯಾಣಿಕರು ಇರುವ ಬಸ್ಸನ್ನು ಸುಟ್ಟುಹಾಕುತ್ತಾರೆ. ಇದರ ಬಗ್ಗೆ ಏಕೆ ಅನುಕಂಪವನ್ನು ತೋರಿಸಬೇಕು? ಅಲ್ಲಿರುವಂಥ ನಾಲ್ಕೈದು ಕ್ಷೇತ್ರಗಳು, ಅದು ತೀರ್ಥಹಳ್ಳಿ ಇರಬಹದು, ಮೂರು ತಾಲ್ಲೂಕುಗಳನ್ನೊಳಗೊಂಡಂಥ ಶೃಂಗೇರಿ ಕ್ಷೇತ್ರವಿರಬಹುದು, ಕಾರ್ಕಳ ಕ್ಷೇತ್ರವಿರಬಹುದು, ಕುಂದಾಪುರ ಕ್ಷೇತ್ರವಿರಬಹುದು ನಕ್ಸಲರ ವಿಚಾರದಲ್ಲಿ ಯಾವುದೇ ರಾಜಕಾರಣವನ್ನು ಅಲ್ಲಿರುವಂಥ ಯಾರೂ ಮಾಡುತ್ತಿಲ್ಲ. ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ, ನಕ್ಸಲರನ್ನು ಹತ್ತಿಕ್ಕಬೇಕು ಎನ್ನುವಂಥ ಹೋರಾಟವನ್ನು ಮಾಡುತ್ತಿದ್ದಾರೆ. ಶೃಂಗೇರಿಯಲ್ಲಿ ವೆಂಕಟೇಶನ ಹತ್ಯೆಯಾದಾಗ ಶೃಂಗೇರಿ ಬಂದ್‌ಗೆ ಕರೆಕೊಟ್ಟರು. ಬಂದ್‌ಗೆ ಕರೆಕೊಟ್ಟಿದ್ದು ಯಾವುದೇ ಒಂದು ಸಂಘಟನೆಯಲ್ಲ. ಎಲ್ಲ ರಾಜಕೀಯ ಪಕ್ಷಗಳು. ಶೃಂಗೇರಿಯಲ್ಲಿರಿವಂಥ ಎಲ್ಲ ಸಂಘಟನೆಗಳೂ ಸೇರಿ ಆ ಹತ್ಯೆಯನ್ನು ಖಂಡಿಸಿ, ನಕ್ಸಲರ ಬಗ್ಗೆ ಪೋಲೀಸರು ಕ್ರಮವನ್ನು ಕೈಗೊಳ್ಳಬೇಕು. ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎನ್ನುವಂಥ ಹೋರಾಟವನ್ನು ಮಡಿದರು. ಅದು ಯಾವುದೇ ಒಂದು ರಾಜಕೀಯ ಪಕ್ಷ ಕೊಟ್ಟಂತ ಕರೆಯಲ್ಲ. ಚಂದ್ರಕಾಂತನ ಎರಡೂ ಕೈಕಾಲುಗಳನ್ನು ಮುರಿದಾಗ ಯಾರೂ ಅನುಕಂಪ ತೋರಲಿಲ್ಲ. ಶೇಷೇಗೌಡನ ಹತ್ಯೆಯಾದಾಗ ಅದು ಇನ್ನೇನೋ ಸಮಸ್ಯೆಯಾಯಿತು, ಎಂದು ಹೇಳಿ ಅವನ ಬಗ್ಗೆ ಸಿಂಪತಿ ತೋರಿಸುವಂಥ ಪ್ರಯತ್ನವನ್ನು ಯಾರೂ ಮಾಡಲಿಲ್ಲ. ವೆಂಕಟೇಶನ ಹತ್ಯೆ ಮಾಡಿದಾಗ ಯಾರಿಗೂ ಏನೂ ಅನ್ನಿಸಲಿಲ್ಲ. ಅದನ್ನು ಸಾಮಾಜಿಕ ಹೋರಾಟ ಎಂದು ಹೇಳುತ್ತಾರೆ. ಯಾವುದು ಸಾಮಾಜಿಕ ಹೋರಾಟ? ಶೇಷೇಗೌಡನ ಹತ್ಯೆ ಮಾಡಿದಂಥ ಸಂದರ್ಭದಲ್ಲಿ ಅವನ ಮನೆಯಿಂದ 50 ಸಾವಿರ ರೂಪಾಯಿಗಳನ್ನು ಹೊತ್ತುಕೊಂಡು ಹೋಗಿದ್ದಾರೆ. ಹಣವನ್ನು ವಸೂಲಿ ಮಾಡುವಂಥಾದ್ದು

ಅಲ್ಲಿರುವಂಥ ಮನೆಗಳಿಗೆ ನುಗ್ಗಿ ಮನೆಯಲ್ಲಿರುವಂಥ ಎಲ್ಲ ಜನರನ್ನು ಹೆದರಿಸಿ ದರೋಡೆಯನ್ನು ಮಾಡುವಂಥಾದ್ದು ಸಾಮಾಜಿಕ ಹೋರಾಟವೆ? ನನ್ನ ಕ್ಷೇತ್ರದ ಕಬ್ಬಿನಾಲೆ ಎನ್ನುವಂಥ ಪ್ರದೇಶದಲ್ಲಿರುವ ಮನೆಗಳಿಗೆ ವಾರಕ್ಕೊಂದು ಸಾರಿ ಬಂದು, ಐದು ಸಾವಿರ, ಹತ್ತು ಸಾವಿರ ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಮನೆಗಳಿಗೆ ಬಂದು ಹಣವನ್ನು ವಸೂಲಿ ಮಾಡುವಂಥಾದ್ದು ಸಾಮಾಜಿಕ ಹೋರಾಟ ಎಂದು ನಮ್ಮೆಲ್ಲ ಹಿರಿಯರು ಹೇಳುವುದಾದರೆ, ಈ ಸಮಾಜ ಎಲ್ಲಿಗೆ ಹೋಗಬೇಕೆನ್ನುವುದು ನನಗೆ ಗೊತ್ತಿಲ್ಲ. ಮನೆಮನೆಗಳಿಗೆ ನುಗ್ಗಿ ಐದು ಸಾವಿರ, ಹತ್ತು ಸಾವಿರ ರುಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ. ಹತ್ಯೆಯಾದಂಥ ಶೇಷೇಗೌಡ ದಲಿತ ಜಾತಿಗೆ ಸೇರಿದ ವ್ಯಕ್ತಿ. ಚಮದ್ರಕಾಂತ ಹಿಂದುಳಿದ ವರ್ಗಕ್ಕೆ ಸೇರಿದಂಥ ವ್ಯಕ್ತಿ. ಯಾವುದೋ ಒಂದು ಹೋರಾಟದ ನೆಪವನ್ನಿಟ್ಟುಕೊಂಡು ಈ ರೀತಿ ಹಿಂಸೆಯ ಮುಖಾಂತರ ನಾವು ಪರಿವರ್ತನೆಯನ್ನು ಮಾಡುತ್ತೇವೆ. ಬಂದೂಕಿನ ಮುಖಾಂತರ ಪರಿವರ್ತನೆಯನ್ನು ಮಾಡುತ್ತೇವೆ ಎಂದು ಹೇಳಿ ಹೊರಟಂಥ ನಕ್ಸಲ ಚಟುವಟಿಕೆಯ ಬಗ್ಗೆ ಪೋಲೀಸರು ನೆನ್ನೆ ಮಾಡಿದಂಥ ಎನ್‌ಕೌಂಟರ್ ಅತ್ಯಂತ ಸಮರ್ಥನೀಯವಾದದ್ದು. ಅದರಲ್ಲಿ ಯಾವುದೇ ರಾಜಿ ಇಲ್ಲ. ಈ ರೀತಿಯ ಎನ್‌ಕೌಂಟ್‌ಗಳನ್ನು ಮಾಡಲೇಬೇಕು. ಅಲ್ಲಿ ಐದು ಜನರನ್ನು ಎನ್‌ಕೌಂಟರ್ ಮಾಡಿದ್ದರಿಂದ ಅಲ್ಲಿರುವಂಥ ಜನರಿಗೆ ವಿಶ್ವಾಸ ಬಂದಿದೆ.

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಧರಂಸಿಂಗ್‌ರವರು ಮಾತನಾಡಲು ಎದ್ದು ನಿಂತರು)

(ಗೊಂದಲ)

ಶ್ರೀ ಎನ್ ಧರ್ಮಸಿಂಗ್: ನಾವು ಇಲ್ಲಿ ನಕ್ಸಲಿಸಂ ಅನ್ನು ಡಿಫೆಂಡ್ ಮಾಡಲು ಬಂದಿಲ್ಲ. Naxal Activity is an ideological battle. ಅದನ್ನು ಅವರು ಸಾಮಾಜಿಕ ಹೋರಾಟ ಎಂದು ಹೇಳುತ್ತಾರೆ. ಮಾನ್ಯ ಸದಸ್ಯರು youngster ಇದ್ದಾರೆ. ಇಲ್ಲಿ ಮೊಟ್ಟ ಮೊದಲ ಬಾರಿಗೆ ಬಂದಿದ್ದಾರೆ. ಸಾಕೇತ್ ರಾಜನ್ ಜವಹರಲಾಲ್ ನೆಹರು ಯೂನಿವರ್ಸಿಟಿಯ ಮೊದಲ ವಿದ್ಯಾರ್ಥಿ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಕೂಡ ವ್ಯಾಸಂಗ

ಮಾಡಿದ್ದಾರೆ. He has written 14 books. ಇದರಲ್ಲಿ ideological ಏನೋ ಇದೆ. ಅದನ್ನು ನೀವು ಅಲ್ಲಗಳೆಯುವಂತಿಲ್ಲ. ಇದರಲ್ಲಿ ಎರಡು ವಿಷಯಗಳಿವೆ. ಆರಗ ಜ್ಞಾನೇಂದ್ರರವರೆ ತಮಗೂ ಕೂಡ ಗೊತ್ತು, ಸಾಕೇತ್ ರಾಜನ್ ಹೋದ ಹಾಗೆ ಕೆಲವು idiological battle ಇವೆ. ಅದನ್ನು ಮಾಡಿದ್ದಾರೆ. ಅದಕ್ಕೆ ಕೆಲವು ಸಿದ್ದಾಂತಗಳಿವೆ. ಅದರ ಬಗ್ಗೆ ನೀವೇನೂ ಹೇಳಬೇಡಿ. ನಾವೇನು ಹೇಳುತ್ತಿದ್ದೇವೆಂದರೆ, ನಾವು ನಕ್ಸಲ್ ಚಟುವಟಿಕೆ ಗಳನ್ನು ಡಿಫೆಂಡ್ ಮಾಡುತ್ತಿಲ್ಲ.

ಶ್ರೀ ಡಿ.ಎನ್ ದೇವರಾಜ್: ಅವರು ವೆಂಕಟೇಶನನ್ನು ಹೊಡೆದು ಹಾಕಿದರು. ಶೇಷೇಗೌಡನನ್ನು ಹೊಡೆದು ಹಾಕಿದುದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿ. ವೆಂಕಟೇಶನನ್ನು, ಶೇಷೇಗೌಡನನ್ನು ಹೊಡೆದು ಹಾಕಿದಾಗ ನಿಮ್ಮದೇ ಸರ್ಕಾರವಿತ್ತು. ಅದರ ಬಗ್ಗೆ ನಿಮ್ಮ ಅಭಿಪ್ರಾಯವೇನು.

ಶ್ರೀ ಧರ್ಮಸಿಂಗ್: ನಾನು ಮುಖ್ಯ ಮಂತ್ರಿಯಾಗಿದ್ದಾಗ ಎಲ್ಲ ಕಡೆಗೆ ನಿಮ್ಮನ್ನು ಕರೆದುಕೊಂಡು ಹೋಗಿದ್ದೆ. ಆಗ ಭಯದ ವಾತಾವರಣ ವಿರಲಿಲ್ಲ.

ಶ್ರೀ ಡಿ.ಎನ್ ದೇವರಾಜ್: ಈಗ ವೆಂಕಟೇಶನ ಹೆಂಡತಿಗೆ ಗಂಡ ಇಲ್ಲವಲ್ಲ. ಮಗನಿಗೆ ಅಪ್ಪ ಇಲ್ಲವಲ್ಲ. ಅದನ್ನು ಕೊಡುವವರು ಯಾರು? ನೀವು ತಂದು ಕೊಡುವಿರಾ?

ಶ್ರೀ ಧರ್ಮಸಿಂಗ್: it is a socially apparent problem. ನಾವು ಹೇಳತಕ್ಕಂಥದ್ದು ಇಷ್ಟೇ. ಇದು ideological batle. for this you can;t curb the ..... ಬುಲೆಟ್‌ನಿಂದ ವಾಯ್‌ಲೆನ್ಸ್ ಅನ್ನು ಸೈಲೆನ್ಸ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಇದಕ್ಕೆ methodically devel-opment works ಮಾಡಿ. ಚಿರಂಜೀವಿ ಕಮಿಟಿ ಇದೆ. ಅದರಂತೆ ಸರ್ಕಾರದಿಂದ ಅವರಿಗೆ ರಿಯಾಯಿತಿ ಕೊಡಿ. ಆ ರೀತಿ ಕೊಡುವುದನ್ನು ಬಿಟ್ಟು ಡಿ.ಜಿ.ಶ್ರೀನಿವಾಸ್‌ನ್ ಗೆ ಹೇಳಿ, ಬಂದೂಕು ತೆಗೆದುಕೊಂಡು ಹೋಗಿ ಹೊಡೆಯಿರಿ ಎಂದರೆ ಆಗುವುದಿಲ್ಲ. I was also Home Minister 17 years back. I know about it.

ಶ್ರೀ ಸುನಿಲ್ ಕುಮಾರ್: ಅಧ್ಯಕ್ಷರೇ, ನಾನು ಕಂಪ್ಲೀಟ್ ಮಾಡುತ್ತೇನೆ.

ಶ್ರೀ ಧರ್ಮಸಿಂಗ್: Our police are very efficient, ರಾಜೀವ್ ಗಾಂಧಿಯವರನ್ನು ಹತ್ಯೆ ಮಾಡಿದಂಥ ಶಿವರಸನ್ ಅನ್ನು ಕರ್ನಾಟಕ ರಾಜ್ಯದಲ್ಲಿ ನಾವು ಹಿಡಿದಿದ್ದೇವೆ. ಈಗ ನಾವು ಹೇಳುತ್ತಿರುವುದೇನೆಂದರೆ ಅವರು idiological fight ಮಾಡುತ್ತಿದ್ದಾರೆ. ಬಿ.ಜೆ.ಪಿ.ಯವರು ಒಂದೇ ರೀತಿ ನೋಡುತ್ತೀರಿ.

ಅಧ್ಯಕ್ಷರು: you have got a different idiology sir.

ಶ್ರೀ ಆರಗ ಜ್ಞಾನೇಂದ್ರ: ಈ ಸದನದಲ್ಲಿ ನಿಂತುಕೊಂಡು ಏಕೆ ಈ ರೀತಿ ವೈಭವಿಕರಣ ಮಾಡುತ್ತೀರಿ.

(ಗೊಂದಲ)

ಶ್ರೀ ಧರ್ಮ ಸಿಂಗ್: ಬಿ.ಜೆ.ಪಿ. ಫಿಲಾಸಫಿ ಬೇರೆ. ಛತ್ತೀಸ್ ಘಡದಲ್ಲಿ ಸಾವಿರಾರು ಅಮಾಯಕರು ಸತ್ತು ಹೋಗುತ್ತಿದ್ದಾರೆ. ಅಲ್ಲಿ ರಮಣಸಿಂಗ್ ರವರು ಮುಖ್ಯಮಂತ್ರಿಯಾಗಿದ್ದು ಸಾವಿರಾರು ಮಂದಿಯ ಕೊಲೆಯಾಗುತ್ತಿದೆ.

ಶ್ರೀ ಸುನಿಲ್ ಕುಮಾರ್: ಅವರು ನಕ್ಸಲ್ ಚಟುವಟಿಕೆಯನ್ನು ಸಾಮಾಜಿಕ ಹೋರಾಟ ಎಂದು ಹೇಳುತ್ತಿರುವ ಬಗ್ಗೆ ನನ್ನದೇನೂ ಆಕ್ಷೇಪವಿಲ್ಲ. ಹೇಳಿಕೊಳ್ಳಲಿ, ಸಾಕೇತ್ ರಾಜನ್ ಹತ್ಯೆಯಾದಾಗ ಅದಕ್ಕೆ ಪ್ರತೀಕಕರವಾಗಿ ವೆಂಕಟಮ್ಮನ ಹಳ್ಳಿಯಲ್ಲಿ ಏಳು ಜನ ಪೋಲೀಸರ ಹತ್ಯೆಯಾಯಿತು. ಅದು ಸಾಮಾಜಿಕ ಹೋರಾಟವೇ? ರಮೇಶ್ ಮೊಯ್ಲಿಯ ಹತ್ಯೆಯಾದಾಗ ಆಗುಂಬೆಯಲ್ಲಿ ಬಸ್ ಸುಟ್ಟಿದ್ದು ಸಾಮಾಜಿಕ ಹೋರಾಟವೇ? ಏಳು ಜನ ಪೋಲೀಸರು ಹತ್ಯೆಯಾದಾಗ ಅವರ ಬಗ್ಗೆ ಸಿಂಪಥಿ ಬರಲಿಲ್ಲ. ಆದರೆ ಸಾಕೇತ್ ರಾಜನ್ ಭಸ್ಮವನ್ನು ಹಿಡಿದುಕೊಂಡು ಓಡಾಡಿದುರ ಬಗ್ಗೆ ಬಹಳ ಪ್ರಚಾರವಾಯಿತು. ನಾವು ಯಾವುದಕ್ಕೆ ಈ ಸಮಾಜದಲ್ಲಿ ಆದ್ಯತೆಯನ್ನು ಕೊಡಬೇಕು ಎನ್ನುವ ಬಗ್ಗೆ ಯೋಚನೆಯನ್ನು ಮಾಡಬೇಕು. ಅವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಂಬಿಕೆಯೇ ಇಲ್ಲ. ಅವರು ಎಲ್ಲೆಲ್ಲಿ ಹತ್ಯೆಗಳನ್ನು

ಮಾಡಿದ್ದಾರೆ ಎಲ್ಲೆಲ್ಲಿ ದಾಳಿಗಳನ್ನು ಮಾಡಿದ್ದಾರೆ, ಯಾರ್ಯಾರ ಮನೆಗಳಿಗೆ ಹೋಗಿದ್ದಾರೆ, ಅಲ್ಲೆಲ್ಲಾ ಅವರು ಬಿಟ್ಟು ಹೋಗಿರುವಂಥಾ ಪಾಂಪ್ಲೆಟ್ ಏನಿದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ನಮಗೆ ನಂಬಿಕೆ ಇಲ್ಲ. ಬಂದೂಕಿನ ಮುಖಾಂತರ ನಾವು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುತ್ತೇವೆ. ಕ್ರಾಂತಿ ಚಿರಾಯುವಾಗಲಿ. ಎಂದು ಇದ್ದು, ಆ ರೀತಿ ಹೇಳಿಕೊಂಡು ಹೋರಾಟವನ್ನು ಮಾಡುತ್ತಾರೆ. ಪ್ರಜಾಪ್ರಭುತ್ವವನ್ನು ನಂಬಿಕೊಂಡು ಬಂದಂಥ ದೇಶ ನಮ್ಮದು. ಪ್ರಜಾಪ್ರಭುತ್ವದಲ್ಲಿ ಅವರು ಯಾವುದೇ ರೀತಿಯಾದಂಥ ಹೋರಾಟಗಳನ್ನು ಮಾಡಲಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಪ್ರಜಾಪ್ರಭುತದ ಬಗ್ಗೆ ನಂಬಿಕೆಯೇ ಇಲ್ಲದಿದ್ದವರು ಮಾಡುವುದು ಸಾಮಾಜಿಕ ಹೋರಾಟ ಎಂದು ಹೇಳುವುದಕ್ಕಾಗುತ್ತದೆಯೇ? ಇದೊಂದು ಸಾಮಾಜಿಕ ಹೋರಾಟ ಎಂದು ನಕ್ಸಲರು ಹೇಳುತ್ತಿಲ್ಲ ಸಾಮಾಜಿಕ ಹೋರಾಟ ಎಂದು ಹೇಳುತ್ತಿರುವುದು ನಾವು. ಪ್ರಜಾಪ್ರಭುತ್ವದ ರೀತಿಯಲ್ಲಿ ಯಾವುದೇ ವಿಷಯವನ್ನು ಹೇಳದೇ, ನಾವು ಪರ್ಯಾಯವಾದಂಥ ಒಂದು ಸರ್ಕಾರವನ್ನು ಮಾಡುತ್ತೇವೆ. ಎಂದು ಹೇಳಿ ನನ್ನ ಕ್ಷೇತ್ರದ 2–3 ಹಳ್ಳಿಗಳಲ್ಲಿ ಸಭೆಗಳನ್ನು ಮಾಡುತ್ತಾರೆ. ಗ್ರಾಮ ಪಂಚಾಯತಿಯ ಗ್ರಾಮ ಸಭೆಗಳಿಗೆ ಹೋಗಬಾರದೆಂದು ಹೇಳಿ ನಕ್ಸಲರು ಅಲ್ಲಿರುವಂಥ ವ್ಯಕ್ತಿಗಳಿಗೆ ತಾಕೀತು ಮಾಡುತ್ತಾರೆ. ನಾವು ಪ್ರತ್ಯೇಕವಾದಂಥ ಸರ್ಕಾರವನ್ನು ಮಾಡಬೇಕು, ನಾವು ಏನು ಹೇಳುತ್ತೇವೆಯೋ ಅದನ್ನು ಕೇಳಬೇಕು ಎಂದು ಹೇಳುತ್ತಾರೆ. ಇವತ್ತು ನಕ್ಸಲರಿಗೆ ಪರೋಕ್ಷವಾಗಿ ಬೆಂಬಲ ಕೊಡುತ್ತಿರುವಂಥವರ್ಯಾರೂ ಕೂಡ ತಮ್ಮ ಮಕ್ಕಳನ್ನು ಬಂದೂಕು ಹಿಡಿದು ಕಳುಹಿಸಿಲ್ಲ. ಅವರ ಮಕ್ಕಳು ಬೇರೆ ಕಡೆಗಳಲ್ಲಿ ಇಂಗ್ಲಿಷ್ ಮೀಡಿಯಮ್ ಶಾಲೆಗಳಲ್ಲಿ ಓದುತ್ತಿದ್ದಾರೆ. ಅಮಾಯಕರನ್ನು ಅವರ ಜೊತೆ ತುರುಕಿ, ಅವರಿಗೆ ಬಂದೂಕಿನ ಅಥವಾ ಇನ್ನಾವುದೋ ಹುಚ್ಚನ್ನು ಹಿಡಿಸಿ, ಅದಕ್ಕೆ ಬೆಂಬಲವನ್ನು ಕೊಡುತ್ತಿರುವಂಥ ವರು ಬುದ್ಧಿಜೀವಿಗಳು. ನಾವು ಈ ಹಿಂದೆಯೇ ಹೇಳಿದ್ದೆವು. ಯಾರು ಬಂದೂಕನ್ನು ಇಟ್ಟುಕೊಂಡು ನಕ್ಸಲ್ ಚಟುವಟಿಕೆಯನ್ನು ಮಾಡುತ್ತಿದ್ದಾರೆ, ಅವರ ಬಗ್ಗೆ ನೇರವಾದಂಥ ಕಾರ್ಯಾಚರಣೆಯಾಗಬೇಕು. ನಕ್ಸಲರಿಗೆ ಪರೋಕ್ಷವಾಗಿ ಬೆಂಬಲ ಕೊಡುತ್ತಿರುವಂಥ ನಕ್ಸಲೀಯರ ಬಗ್ಗೆ ಕಠಿಣ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕು. ಅದು ಆಗದಿದ್ದರೆ ಬಹಳ ಕಷ್ಟವಿದೆ. ನೆನ್ನೆ ಅಲ್ಲಿ ಪ್ರತಿಭಟನೆಗಳಾದವು ಎಂದು ಹೇಳುತ್ತಾರೆ. ಕರ್ನಾಟಕ ವಿಮೋಚನಾರಂಗದ ಕಾರ್ಯಕರ್ತರು ಎನ್‌ಕೌಂಟರ್ ಆದ ನಂತರ

ವಾಹನಗಳನ್ನು ಮಾಡಿಕೊಂಡು ಬೇರೆ ಕಡೆಗಳಿಂದ 60–60 ಜನರನ್ನು ಕರೆದುಕೊಂಡು ಬಂದು ಅಲ್ಲಿ ಪ್ರತಿಭಟನೆ ಮಾಡಿದ್ದಾರೆ. ಸ್ಥಳೀಯರೂ ಯಾರೂ ಕೂಡ ಪ್ರತಿಭಟನೆ ಮಾಡಲಿಲ್ಲ. ನಾವು ಸ್ಥಳೀಯರಾದ್ದರಿಂದ ಏನಾಗಿದೆ ಎಂದು ನಮಗೆ ಗೊತ್ತಿದೆ.

ಶ್ರೀ ಎನ್ ಜೀವರಾಜ್: ಇಲ್ಲಿರುವವರಿಗೆ ಅದರ ಬಗ್ಗೆ ಮಾಹಿತಿ ಇಲ್ಲ. ಅಲ್ಲಿದ್ದವರೆಲ್ಲ ಬಹಳ ಜನರು ಬಂದು ಪ್ರತಿಭಟನೆಗೆ ಸೇರಿಕೊಂಡು ಎಂದು ಇಲ್ಲಿರುವವರು ಹೇಳುತ್ತಿದ್ದೀರಿ. ವಾಟಾಳ್ ನಾಗರಾಜ್‌ರವರು ಬಂದರೆ ಆ ಊರಿಗೆ ಕರೆದುಕೊಂಡು ಹೋಗುತ್ತೇನೆ. ತಾವು ಆ ಊರಿಗೆ ಬರಬೇಕು ಎಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಆ ಊರಿನಲ್ಲಿ ನೀವು ಹೇಳಿದಷ್ಟು ಜನರಿಲ್ಲ. ನಿನ್ನೆಯ ದಿವಸ ಆ ಊರಿಗೆ ಬೇರೆ ಬೇರೆ ಊರುಗಳಿಂದ ಜನರನ್ನು ವೆಹಿಕಲ್‌ಗಳನ್ನು ಮಾಡಿ ಕರೆದುಕೊಂಡು ಬಂದು, ಅಲ್ಲಿ ಪ್ರತಿಭಟನೆ ಮಾಡುವಂಥ ಪ್ರಯತ್ನ ಸನ್ಮಾನ್ಯ ಕಳಕುಳಿ ವಿಠಲ ಹೆಗಡೆಯವರು ಮತ್ತು ಮರಿಯಪ್ಪನವರ ನಾಯಕತ್ವದಲ್ಲಿ ನಡೆದಿದೆ. ಅದು ನನ್ನ ಕ್ಷೇತ್ರ. ಆ ಊರಿನಲ್ಲಿ ನೂರು ಜನ ಎಲ್ಲಿಂದ ಬಂದರು? ಆ ಮಾಹಿತಿಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಅದನ್ನು ತಿಳಿದುಕೊಳ್ಳದೇ ಮಾತನಾಡಿಬಿಡುತ್ತೀರಿ. ಆ ಊರಿನಲ್ಲಿರುವುದು 25 ಜನರು ಮಾತ್ರ ಎನ್ನುವುದು ಸುನಿಲ್‌ರವರ ಮಾಹಿತಿಗಾಗಿ ಹೇಳುತ್ತಿದ್ದೇನೆ.

ಶ್ರೀ ಸುನಿಲ್ ಕುಮಾರ್: ಕುದುರೆ ಮುಖ ನ್ಯಾಷನಲ್ ಪಾರ್ಕಿನ ಆಸುಪಾಸಿನ 8 ಕಿ.ಮೀ. ಒಳಗೆ ಯಾರೂ ಯಾವುದೇ ಬಂದೂಕು ಇಟ್ಟು ಕೊಳ್ಳಬಾರದು ಎಂದು ಸರ್ಕಾರದ ಕಾನೂನು ಇದೆ. ಅಲ್ಲಿ ಯಾವುದೇ ವ್ಯಕ್ತಿ ಬಂದೂಕಿಗೆ ಲೈಸೆನ್ಸ್ ಕೊಡಿ ಎಂದರೆ ಪೋಲೀಸರು ಕೊಡುವುದಿಲ್ಲ. ಆ ರೀತಿಯ ಕಾನೂನನ್ನು ಸಾಮಾನ್ಯರಿಗೆ ಮಾಡಿ, ನಕ್ಸಲರು ಬಂದೂಕು ಗಳನ್ನು ಯಾವ ರೀತಿ ಬೇಕಾದರೂ ಇಟ್ಟುಕೊಳ್ಳಬಹುದು, ಗ್ರೆನೇಡ್‌ಗಳನ್ನು ಯಾವ ರೀತಿ ಬೇಕಾದರೂ ಇಟುಕೊಂಡು ಅಲ್ಲಿ ತಿರುಗಬಹುದು ಎಂದರೆ ಇದು ಸಾಮಾಜಿಕ ಹೋರಾಟವೆ? ಕುದುರೆ ಮುಖ ನ್ಯಾಷನಲ್ ಪಾರ್ಕ್ ಆಗಿದೆ, ಅದಕ್ಕೋಸ್ಕರ ಲೈಸೆನ್ಸ್ ಕೊಡುವುದಿಲ್ಲ ಎಂದು ಹೇಳುತ್ತಾರೆ. ಆದರೆ, 50–60 ಜನ ನಕ್ಸಲರು ಬಾಂಬುಗಳನ್ನು ಎಕೆ–47 ಬಂದೂಕು ಗಳನ್ನು, ಪಿಸ್ತೂಲುಗಳನ್ನು ಇಟ್ಟುಕೊಂಡು ಓಡಾಡುವುದು ರಾಷ್ಟ್ರದ್ರೋಹವಲ್ಲ

ಎಂದು ಇಲ್ಲಿ ವಾದ ಮಾಡುವುದಾದರೆ ಅದು ಪೋಲೀಸರ ಆತ್ಮ ಸ್ಥೈರ್ಯವನ್ನು ಕುಂದಿಸಿದ ಹಾಗೆ ಆಗುತ್ತದೆ. ನೆನ್ನೆ ನಡೆದಂಥ ಕಾರ್ಯಾಚರಣೆ ಯಾವುದೇ ಕಾರಣಕ್ಕೂ ಅಪರಾಧವಾಗಲಿಕ್ಕೆ ಸಾದ್ಯವಿಲ್ಲ. ಇದರ ಬಗ್ಗೆ ಯಾವುದೇ ತನಿಖೆಗಳು ಅಗತ್ಯವಿಲ್ಲ. ಈ ರೀತಿಯ ಕಾರ್ಯಾಚರಣೆಗಳು ಇನ್ನಷ್ಟು ಮುಂದುವರೆಯಬೇಕು. ನೆನ್ನೆ ಕಾರ್ಯಾಚರಣೆಯಾಗಿದೆ ಎನ್ನುವ ಕಾರಣಕ್ಕೋಸ್ಕರ ಸರ್ಕಾರ ಸುಮ್ಮನೆ ಕುಳಿತು ಕೊಳ್ಳುವುದು ಬೇಡ. ಮೂರೂ ಜಿಲ್ಲೆಗಳ ಪೋಲೀಸ್ ಅಧಿಕಾರಿಗಳನ್ನು ಸೇರಿಸಿ, ಮೂರೂ ಜಿಲ್ಲೆಗಳಲ್ಲಿ ವಿಶೇಷವಾದಂಥ ಕಾರ್ಯಾಚರಣೆಯನ್ನು ಮಾಡಬೇಕು. ಮಾನ್ಯ ಗೃಹ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾವು ವಿನಂತಿಯನ್ನು ಮಾಡುವಂಥಾದ್ದು ಏನೆಂದರೆ, ಇದಕ್ಕೆ ಅನುಕಂಪವನ್ನು ತೋರಿಸುವಂಥ ಕೆಲವು ಬುದ್ಧಿ ಜೀವಿಗಳು ಕೆಲವು ಪತ್ರಕರ್ತರು, ಕೆಲವು ಅಧ್ಯಾಪಕರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಅವರ ಬಗ್ಗೆ ಕಠಿಣ ಕ್ರಮವನ್ನು ಕೈಗೊಂಡಾಗ ಮಾತ್ರ ಜಂಟಿ ಕಾರ್ಯಾಚರಣೆಗಳಾದಾಗ ಮಾತ್ರ ಇದಕ್ಕೊಂಡು ಕೊನೆಯನ್ನು ಎಳೆಯಲು ಸಾದ್ಯವಿದೆ. ಆ ನಿಟ್ಟಿನಲ್ಲಿ ಸರ್ಕಾರ ತನ್ನ ಇಚ್ಚಾ ಶಕ್ತಿಯನ್ನು ಪ್ರಕಟಿಸಬೇಕು ಎನ್ನುವಂಥ ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ನನಗೆ 5 ನಿಮಿಷ ಮಾತನಾಡಲು ಅವಕಾಶ ಕೊಡಿ. ನಾನು ಹೆಚ್ಚು ಮಾತನಾಡುವುದಿಲ್ಲ. ನಾನು ಆ ಭಾಗದಿಂದ ಬಂದವನು.

ಅಧ್ಯಕ್ಷರು: ಲಂಚ್ ಆದಮೇಲೆ ಅವಕಾಶ ಕೊಡುತ್ತೇನೆ. ಮಾತನಾಡಿ. ಏಕೆ ಈ ರೀತಿ ಮಾಡುತ್ತಿದ್ದೀರೆಂದು ಅರ್ಥವಾಗುತ್ತಿಲ್ಲ.

ಶ್ರೀ ಅರಗ ಜ್ಞಾನೇಂದ್ರ: ನಾನು ಬೇಗನೆ ಮುಗಿಸುತ್ತೇನೆ. ನಾವು ಮಾತನಾಡುವ ಧ್ವನಿಯನ್ನೂ ಕಳೆದುಕೊಂಡಿದ್ದೇವೆ, ಮಾತನಾಡುವ ಧೈರ್ಯ ಸಹ ನಮಗೆ ಇಲ್ಲ. ಮಾತನಾಡುವದು ಸಹ ಎಷ್ಟು ರಿಸ್ಕ್ ಎಂಬುದು ಬಹುಶಃ ಇಲ್ಲಿದ್ದವರೆಗೆ ಗೊತ್ತಿಲ್ಲ. ಆದರೂ ಆ ರಿಸ್ಕ್‌ಅನ್ನು ತೆಗೆದುಕೊಂಡು ಮಾತನಾಡುತ್ತಿದ್ದೇವೆ. ಸರ್ಕಾರದವರು ನನಗೆ ಎರಡು ಜನ ಗನ್‌ಮ್ಯಾನ್‌ಗಳನ್ನು ಕಳುಹಿಸಿದ್ದರು. ಅದಕ್ಕಾಗಿ ನಮ್ಮ ಎಸ್.ಪಿ.ಯವರಿಗೆ ಧನ್ಯವಾದವನ್ನು

ಹೇಳಿ ಅವರು ನನಗೆ ಬೇಡ ಎಂದು ವಾಪಸ್ ಕಳುಹಿಸಿದೆ. ಒಂದು ದಿವಸ ನಾನು ಅಲ್ಲಿ ನನ್ನ ಹೆಂಡತಿ ಮಕ್ಕಳನ್ನು ಬಿಟ್ಟು ಬಂದಿದ್ದೇನೆ. ನಾನೂ ರಿಸ್ಕ್ ತೆಗೆದುಕೊಂಡು ಆ ಏರಿಯಾದಲ್ಲಿ ತಿರುಗಾಡಬೇಕಾಗಿದೆ. ಒಂದು ದಿವಸ ಬಹುಶಃ ನೀವೆಲ್ಲರೂ ಎದ್ದು ನಿಂತು ಜ್ಞಾನೇಂದ್ರ ಬಹಳ ಒಳ್ಳೆಯವನು ಈ ರೀತಿ ಆಗಬಾರದಿತ್ತು ಎಂದು ಒಂದು ನಿಮಿಷ ಮೌನವನ್ನು ಆಚರಿಸಿ ನಮ್ಮ ಬಗ್ಗೆ ಸಹಾನುಭೂತಿಯ ಮಾತನ್ನು ಆಡಬೇಕಾಗುತ್ತದೆ. ನಾನು ಶಾಸಕನಾಗಿ ಪ್ರಾಣ ಕೊಡಲು ತಯಾರಿದ್ದೇವೆ. ಆದರೆ, ಆ ಭಾಗದ ಜನರನ್ನು ಕೂಡ ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಇಲ್ಲಿ ಸಾಮಾಜಿಕ ಕಾರ್ಯಕರ್ತರೆಂದು ವೈಭವೀಕರಣದ ವ್ಯವಸ್ಥೆಯನ್ನು ತಾವು ಮಾಡಬೇಡಿ ಎಂದು ಕೈ ಜೋಡಿಸಿ ವಿನಂತಿ ಮಾಡುತ್ತೇನೆ. ನಿಮ್ಮ ಪಕ್ಷದವರನ್ನು ಪಕ್ಷದ ಕಾರ್ಯಕರ್ತರನ್ನು ಅಲ್ಲಿ ಹೋಗಿ ಕೇಳಿ. ನೀವು ಬಿ.ಜೆ.ಪಿ ಯವರ ಮೇಲೆ ಹೇಳುತ್ತೀರಲ್ಲಾ ಇನ್ನೂ ಅವರ ಮೇಲೆ ಅಲ್ಲಿ ಏನೂ ಆಗಿಲ್ಲ. ಶೇಷೇಗೌಡ್ರು ಯಾರು ಸರ್? ನಿಮ್ಮದೇ ಸರ್ಕಾರವಿದ್ದಾಗ ಪಿ.ಎಲ್.ಡಿ. ಬ್ಯಾಂಕಿಗೆ ನೀವೇ ಸ್ವತಃ ಧರ್ಮಸಿಂಗ್ ಎಂದು ಸಹಿ ಹಾಕಿ ನಾಮ ನಿರ್ದೇಶನ ಮಾಡಿದ್ದೀರಿ. ನೀವು ಅದನ್ನು ಹೋಗಿ ನೋಡಿಕೊಂಡು ಬಂದಿದ್ದೀರಾ? ನೀವು ಮುಖ್ಯಮಂತ್ರಿಯಾಗಿದ್ದಾಗ ಆ ಕಾರ್ಯಕರ್ತನನ್ನು ನೋಡಿದ್ಧೀರಾ? ಹೆಂಡತಿ ಮಕ್ಕಳ ಕೈ ಕಾಲು ಹಿಡಿದರೂ ಅವನನ್ನು ಕೊಚ್ಚಿ ಹಾಕಿದರಲ್ಲಾ ಅವನು ನಿಮ್ಮ ಕಾರ್ಯಕರ್ತ. ದಲಿತ ವರ್ಗದ ಅವನನ್ನು ನೀವೇ ನಾಮಿನೇಟ್ ಮಾಡಿದ್ದಿರಿ. ವೆಂಕಟೇಶ ಎಂಬುವವನು ಒಂದು ಆರ್ಡಿನರಿ ಗೂಡು ಅಂಗಡಿಯನ್ನು ಮಾಡಿಕೊಂಡಿದ್ದ ಮನುಷ್ಯ. ಅವನ ಹೆಂಡತಿ ಹೋಗಿ ಕಾಲು ಹಿಡಿದುಕೊಳ್ಳುತ್ತಾಳೆ. ಅವನ ಎರಡನೇ ಕ್ಲಾಸ್‌ಗೆ ಹೋಗುವ ಮಗ ಅವರ ಕಾಲನ್ನು ಹಿಡಿದುಕೊಂಡು ಏನಾದರೂ ಮಾಡಿ ಅವರನ್ನು ಬಿಡಿ ಎಂದು ಕೇಳಿಕೊಂಡರೂ ಬಿಟ್ಟರೆ? ಇದನ್ನು ಯಾವ ಕಾನೂನು ಹೇಳುತ್ತದೆ. ಹೋಗಲಿ ನೀವು ಅವರಿಗೆ ಒಂದೇ ಸಾರಿ ಶೂಟ್ ಮಾಡಿ ಎಂದು ಹೇಳಿ. ಅವರು ಒಂದೇ ಸಾರಿ ಸತ್ತು ಹೋಗುತ್ತಾರೆ. ಆದರೆ ಅವರು ಅವನನ್ನು ಯಥೇಚ್ಛವಾಗಿ ಕೊಚ್ಚಿ ಅನಂತರ ಶೂಟ್ ಮಾಡಿದ್ದಾರೆ. ನೀವು ಮಲೆನಾಡಿಗೆ ದಯವಿಟ್ಟು ಬನ್ನಿ, ನಮ್ಮ ವಾಟಾಳ್ ನಾಗರಾಜ್‌ರವರು ಅಲ್ಲಿಗೆ ಸದನ ಸಮಿತಿಯನ್ನು ಕಳುಹಿಸಿ ಎಂದು ಹೇಳಿದರು. ಆ ಕೆಲಸವನ್ನು ಮಾಡಿ. ಸಾಮಾಜಿಕ ಸಮಸ್ಯೆ ಇದೆಯಲ್ಲಾ? ಯಾರು ಇಷ್ಟು ವರ್ಷ ದೇಶವನ್ನು ಆಳಿದವರು? ಅವರು ಯಾರಿಂದಾಗಿ

ಬಂದರು? ಸಮಸ್ಯೆ ಇದೆಯೆಂದು ಹೇಳುವುದಾದರೆ ನೀವೇ ಅಪರಾದಿ ಸ್ಥಾನದಲ್ಲಿ ನಿಲ್ಲಬೇಕಲ್ಲಾ? ನೀವು ಏನೂ ಮಾಡಿಕೊಟ್ಟಿರಲಿಲ್ಲ. ನಾವು 1994 ರಲ್ಲಿ ಬಂದಮೇಲೆ ನಿಮ್ಮನ್ನೆಲ್ಲಾ ಕೈ ಕಾಲು ಹಿಡಿದು ಅಲ್ಲಿ ರಸ್ತೆ ಮಾಡಿಸಿದ್ದೇವೆ. ವಿದ್ಯುತ್‌ಚ್ಛಕ್ತಿ ಒದಗಿಸಿದ್ದೇವೆ, ಬಗರ್ ಹುಕುಂ ಸಾಗುವಳಿ ಮಂಜೂರಾತಿ ಮಾಡಿಸಿಕೊಟ್ಟಿದ್ದೇವೆ. ನೀವು ಫಾರೆಸ್ಟ್ ಅನ್ನು ಮಂಜೂರು ಮಾಡಬೇಕಾಗಿತ್ತು. ಅದನ್ನು ಮಾಡಲು ಬಿ.ಜೆ.ಪಿಯವರಾದ ನಾವು ಯಾರಾದರೂ ಅಡ್ಡ ತಡೆದೆವೇ? ನಾವೇ ಅಲ್ಲಿನ ಫಾರೆಸ್ಟ್ ಜಮೀನನ್ನು ಮಂಜೂರಾತಿಗೆ ಅವಕಾಶ ಮಾಡಿಕೊಡಿ ಎಂದು ಹೇಳಿದೆವಲ್ಲಾ? ಇದು ಸಾಮಾಜಿಕ ಸಮಸ್ಯೆ ಅಲ್ಲ. ಸಾಮಾಜಿಕ ಕಾರ್ಯಕರ್ತರಾಗುವುದಾದರೆ ಆ ಹೆಣ್ಣುಮಗಳನ್ನು ಕಾಲೇಜಿನಲ್ಲಿ ಓದಿಸಲು 50 ಸಾವಿರ ಹಣವನ್ನು ಇಟ್ಟುಕೊಂಡಿದ್ದ ಮನುಷ್ಯನಿಂದ ತೆಗೆದುಕೊಂಡು ಬಂದು ಬಿಟ್ಟಿರಲ್ಲಾ, ಇದು ಯಾವ ಸಾಮಾಜಿಕ ಹೋರಾಟ? ನೆನ್ನೆ ಮಾಧ್ಯಮದವರು ಅದನ್ನು ಮತ್ತೆ ಮತ್ತೆ ತೋರಿಸುತ್ತಿದ್ದರು. ನನಗೆ ಕರುಳು ಕಿತ್ತು ಬರುತ್ತಿತ್ತು. ನಾವೆಲ್ಲಾ ಮನುಷ್ಯರು! ನಮಗೂ ಹಾಗೇ ಅನ್ನಿಸುತ್ತದೆ. ಪಾಪ ಅಮಾಯಕರಾಗಿ ಆ ರಕ್ತದ ಮಡುವಿನಲ್ಲಿ ಬಿದ್ದಿರತಕ್ಕದ್ದು ಅಲ್ಲಿ ನಮ್ಮ ಯುವಕ ಯುವತಿಯರು ನಕ್ಸಲೀಯರಾಗಿ ಕೋವಿ ಹಿಡಿದುಕೊಂಡು ತಿರುಗಾಡುತ್ತಿದ್ದಾರಲ್ಲಾ, ಅವರ ಬಗ್ಗೆ ನಾನು ಏನೂ ಹೇಳುವುದಿಲ್ಲ. ಇವರನ್ನು ಕಳುಹಿಸಿದವರು ಯಾರು? ಇವತ್ತು ಸಹ ನಾಡಿನಲ್ಲಿ ಅವರ ಪರ ವಕಾಲತ್ತು ವಹಿಸುತ್ತಿದ್ದಾರಲ್ಲಾ, ಇವರು ಅವರನ್ನು recruit ಮಾಡಿ ಕಳುಹಿಸುತ್ತಿದ್ದಾರೆ. ಇವರ ಮಕ್ಕಳನ್ನು ಅಣ್ಣ ತಮ್ಮಂದಿರನ್ನು ಕಳುಹಿಸಲಿ. ಇವರ ರಕ್ತ ಇದ್ದಂಥವರು ಯಾರಾದರೂ ಸತ್ತರೆ, ಆಗ ಇವರಿಗೆ ಅರ್ಥವಾಗುತ್ತದೆ. ಅಲ್ಲಿ ಪೋಲೀಸ್‌ನವರು ಸಹ ಭಯಬೀತರಾಗಿದ್ದಾರೆ. ನಾವು ಅವರ ನೈತಿಕ ಸ್ಥೈರ್ಯವನ್ನು ಈ ಸದನದಲ್ಲಿ ಕಡಿಮೆ ಮಾಡಿದರೆ ಅವರು ಅಲ್ಲಿ ಕೆಲಸ ಮಾಡುವುದಿಲ್ಲ. ಆಗುಂಬೆಯಲ್ಲಿರುವ ಪಿ.ಎಸ್.ಐ ಅವನ ಹೆಂಡತಿ ಮಕ್ಕಳನ್ನು 30 ಕಿಲೋಮೀಟರ್ ದೂರದಲ್ಲಿರುವ ತೀರ್ಥ ಹಳ್ಳಿಯಲ್ಲಿ ಮನೆ ಮಾಡಿ ಇಟ್ಟಿದ್ದಾರೆ. ರಾತ್ರಿ ಪಾಪ ಅಲ್ಲಿ ಮಲಗುತ್ತಿದ್ದಾನೆ. ಜಯಪುರದ ಪೋಲೀಸ್ ಠಾಣೆ ಖಾಲಿಯಾಗಿದೆ. ಅವರು ಪಾಪ ಅಲ್ಲಿ ಮಲಗುವುದಿಲ್ಲ. ಅವರೂ ಮನುಷ್ಯರಲ್ಲವೇ? ಜಯಪುರ ಪೋಲೀಸ್ ಠಾಣೆ ಕಾಲಿಯಾಗಿದೆ. ಅವರು ಹೆಂಡತಿ ಮಕ್ಕಳು ಮನುಷ್ಯರಲ್ಲವೇ? ಅವರ ಹೆಂಡತಿ ಮಕ್ಕಳು ನೀವು ಪೋಲಿಸ್ ಕೆಲಸ ಬಿಡಿ, ಈ ಕೆಲಸ ಏಕೆ ಬೇಕು? ಬಿಕ್ಷೆ ಬೇಡಿಕೊಂಡು ಜೀವನ

ಮಾಡೋಣವೆಂದು ಅವರ ಕಾಲನ್ನು ಹಿಡಿದು ಕೇಳುತ್ತಿದ್ದಾರೆ. ಇವರು ನಕ್ಸಲ್ ಸ್ಕ್ವಾಡನ್ನು ಮಾಡುತ್ತಾರೆ. ಅಲ್ಲಿಗೆ ಯಾರೂ ಹೋಗುವುದಿಲ್ಲ. ಇದನ್ನು ಹೆಚ್ಚಿಗೆ ಬೆಳೆಸುತ್ತಿಲ್ಲ. ಇದರ ಬಗ್ಗೆ ಇಲ್ಲಿ ಮಾತನಾಡುಲೂ ಆಗುವುದಿಲ್ಲ. ಇಲ್ಲ ಮಾತನಾಡುವ ಪರಿಸ್ಥಿತಿಯಲ್ಲಿ ನಾವಿಲ್ಲ. ಆದರೆ ದಯವಿಟ್ಟು ಬೆಂಗಳೂರಿನಲ್ಲಿ ಶಾಸಕರುಗಳು ವೈಭವೀಕರಣ ಮಾಡಬೇಡಿ ಎಂದು ಕೈ ಮುಗಿದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಎನ್ ಜೀವರಾಜ್: ಧರ್ಮ ಸಿಂಗ್ ಸಾಹೇಬರು, ರೋಷನ್ ಬೇಗ್ ರವರು ಅದನ್ನು ವೈಭವೀಕರಿಸಿಬಿಟ್ಟಿರಿ.

ಶ್ರೀ ಎನ್ ಧರ್ಮಸಿಂಗ್: ನಾವೇನು ಡಿಫೆಂಡ್ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ: ಅದನ್ನು ಇಲ್ಲಿರುವವರು ಯಾರೂ ಬೆಂಬಲಿಸುವುದಿಲ್ಲ. ನಕ್ಸಲಿಗರು ಮಾಡುತ್ತಿರುವ ಕೆಲಸವನ್ನು ಅಮಾಯಕರನ್ನು ಕೊಲ್ಲುತ್ತಿರುವುದನ್ನು ಯಾರೂ ಸಮರ್ಥನೆ ಮಾಡುವುದಿಲ್ಲ. ಇಲ್ಲಿ ಅದನ್ನು ಯಾರಾದರೂ ಸಮರ್ಥನೆ ಮಾಡುತ್ತಿದ್ದಾರೆಯೇ? ಇಲ್ಲ, ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾದುದು ಅತ್ಯಂತ ಅವಶ್ಯಕ. ಸಮಾಜದ ಹಿತ ದೃಷ್ಟಿಯಿಂದ, ರಾಜ್ಯದ ಕಾನೂನಿನ ಸುವ್ಯಸ್ಥೆ ದೃಷ್ಟಿಯಿಂದ ಇದನ್ನು ನೋಡಬೇಕು. ನಕ್ಸಲೀಯರ ಚಟುವಟಿಕೆಯನ್ನು ಮಟ್ಟ ಹಾಕಬೇಕು,ಅದನ್ನು ಹತ್ತಿಕ್ಕಬೇಕು ಅದು ಬೆಳೆಯಲು ಬಿಡಬಾರದು, ಅದನ್ನು ಯಾರೂ ಕೂಡ ಸಮರ್ಥನೆ ಮಾಡುವುದಿಲ್ಲ.

ಶ್ರೀ ವಿ.ಸುನಿಲ್ ಕುಮಾರ್: ವಾಸ್ತವಿಕತೆ ಗೊತ್ತಾದ ಮೇಲೆ ಸುಮ್ಮನೆ ಈಗ ವಾದ ಮಾಡಲಿಲ್ಲವೆಂದು ಹೋಗಬೇಡಿ.

ಶ್ರೀ ಸಿದ್ದರಾಮಯ್ಯ: ನೆನ್ನೆ ನಡೆದ ಘಟನೆ ಇದೆಯಲ್ಲಾ ಅದು ಮೇಲು ನೋಟಕ್ಕೆ 5 ಜನ ನಿರಪರಾಧಿಗಳು ಸತ್ತಿದ್ದಾರೆ ಎಂದು ಕಂಡು ಬರುತ್ತದೆ. ಅವರ ವರದಿಯ ಪ್ರಕಾರ ಒಬ್ಬನೇ ಒಬ್ಬ ನಕ್ಸಲೀಯ ಇರತಕ್ಕದ್ದು. ಇನ್ನು 3 ಜನರು ನಿರಪರಾಧಿಗಳಿದ್ದಾರೆ.

ಶ್ರೀ ವಿ.ಸುನಿಲ್ ಕುಮಾರ್: ಅಪರಾಧಿಗಳಿಗೆ ರಕ್ಷಣೆ ಕೊಟ್ಟರೂ ಅಪರಾಧವೇ? ಅಪರಾಧಿಗಳಿಗೆ ಮನೆಯಲ್ಲಿ ರಕ್ಷಣೆ ಕೊಟ್ಟರೆ ಅದೂ ಅಪರಾಧವೇ ತಾನೇ? ಅದನ್ನು ಕಾನೂನು ಹೇಳುವುದಿಲ್ಲ.

ಶ್ರೀ ಸಿದ್ದ ರಾಮಯ್ಯ: ಅಪರಾಧಿಗಳಿಗೆ ರಕ್ಷಣೆ ಕೊಟ್ಟರೆ ಅದೂ ಅಪರಾಧವೆ. ಎವಿಡೆನ್ಸ್‌ಅನ್ನು ಸಪ್ರೆಸ್ ಮಾಡಿದರೆ ಅದೂ ಅಪರಾಧವೆ. ನಕ್ಸಲೀಯರಿಗೆ ಬೆಂಬಲ ಕೊಟ್ಟರೆ ಅದೂ ಅಪರಾಧವೆ. ಹಾಗೆಂದು ನಕ್ಸಲೀಯರು ಯಾರು ನಕ್ಸಲೀಯರ ಪರವಾಗಿರುವವರು ಯಾರು, ನಿರಪರಾಧಿಗಳು ಯಾರು? ನಿರಾಯುಧರು ಯಾರು, ಅಮಾಯಕರು ಯಾರು ಎಂಬ ಬಗ್ಗೆ ವಿವೇಚನೆ ನಮಗೆ ಇರಬೇಕೆಲ್ಲವೆ? ಅದರ ಬಗೆ ಮಾತ್ರ ಚರ್ಚೆ ಇರತಕ್ಕದ್ದು. ಇವತ್ತು ರಾಜ್ಯದ ತುಂಬ ದೊಡ್ಡ ಸುದ್ದಿಯಾಗಿದೆ. ಆ ಬಾಗದ ಜನರು ದೊಡ್ಡ ಪ್ರತಿರೋಧವನ್ನು ಮಾಡಿದ್ದಾರೆ. ಸಂಜೆಯವರೆಗೂ ಪ್ರತಿಭಟನೆ ಮಾಡಿದ್ದಾರೆ. ಹೊರಗಡೆಯಿಂದ ಜನರನ್ನು ಕರೆದುಕೊಂಡು ಬಂದು ಆ ರೀತಿ ಪ್ರತಿಭಟನೆ ಮಾಡಿಸಿದ್ದಾರೆಂದು ಜೀವರಾಜ್ ಮತ್ತು ಸುನಿಲ್‌ಕುಮಾರ್‌ರವರು ಹೇಳಿದ್ದಾರೆ. ಅಲ್ಲಿನ ಸತ್ಯಾಸತ್ಯತೆ ನಮಗೆ ಗೊತ್ತಿಲ್ಲ. ನಿಮಗೂ ಗೊತ್ತಿಲ್ಲ. ಆದರೆ ಪ್ರಶ್ನೆ ಏನೆಂದರೆ ರಾಮೇಗೌಡ ಆಗಲಿ, ಕಾವೇರಮ್ಮ ಆಗಲಿ ಸುಬ್ರಹ್ಮಣ್ಯನಾಗಲಿ, ಇವರ ಮನೆಯಲ್ಲಿ ಆಯುಧಗಳು ಇದ್ದವೇ? ಅಥವಾ ನಕ್ಸಲೀಯರಾಗಿದ್ದರೆ? ಅಥವಾ ಪೋಲೀಸ್ ವರದಿಯಲ್ಲಿ ಇವರುಗಳು ನಕ್ಸಲೀಯರಿಗೆ ಬೆಂಬಲ ಕೊಡುತ್ತಿದ್ದರು ಎಂದು ಇದೆಯೇ? ಯಾವತ್ತಾದರೂ ಇವರುಗಳು ನಕ್ಸಲೀಯರ ಪರವಾಗಿ ಇದ್ದರು, ಬೆಂಬಲ ಕೊಡುತ್ತಿದ್ದರು ಎಂಬುವುದೇನಾದರೂ ಇದೆಯೇ? ಏನೂ ಇಲ್ಲ ಎಂದು ಅಷ್ಟೇ ಹೇಳಿರುವುದು.

(ಗೊಂದಲ)

ಪ್ರಗತಿಪರವಾದ ವಿಚಾರ ಮಾಡುವವರೆಲ್ಲಾ ನಕ್ಸಲೀಯರಾಗಲು ಸಾದ್ಯವಿಲ್ಲ. ನಕ್ಸಲರಿಗೂ ಪ್ರಗತಿಪರ ದೋರಣೆಗೂ ವ್ಯತ್ಯಾಸವಿದೆ.

ಅಧ್ಯಕ್ಷರು: ಅವರು ಮಾತನಾಡಲಿ. ನೀವೇಕೆ ಮದ್ಯೆ ಮದ್ಯೆ ಮಾತನಾಡುತ್ತೀರಿ. ರಮೇಶ್ ಕುಮಾರ್‌ರವರೆ ಅವರು ಮಾತನಾಡಲಿ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಒಂದು ನಿಮಿಷ, ಮಾನ್ಯ ವಿಶ್ವೇಶ್ವರ ಹೆಗಡೆಯವರು ನನ್ನ ಬಗ್ಗೆ ಪ್ರಸ್ತಾಪ ಮಡಿದರು. ನಾನು ತಮಗೆ ಇಷ್ಟೇ ಹೇಳುತ್ತೇನೆ. ನನ್ನ ಮಾತೃಭಾಷೆ ತೆಲಗು. ನನಗೆ ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ. ನನಗೆ ಎಷ್ಟು ಕನ್ನಡ ಬರುತ್ತದೆ, ಅಷ್ಟು ಕನ್ನಡದ ಭಾಷೆಯ ಮೇಲೆ ಹಿಡಿತ ಇಟ್ಟುಕೊಂಡು ನಾನು ಏನೆಲ್ಲಾ ಮಾತನಾಡಿದ್ದೇನೆ ಪ್ರತಿಯೊಂದನ್ನು ತರಿಸಿಕೊಂಡು ನೋಡಿ. ನನ್ನ ಭಾಷಣದ ಬಗ್ಗೆ ನಿಮ್ಮ ಅಭಿಪ್ರಾಯವನ್ನೇನು ವ್ಯಕ್ತಪಡಿಸಿದ್ದೀರಿ ಅದಕ್ಕೂ ನನ್ನ ಮಾತು ಏನು ರೆಕಾರ್ಡ್ ಆಗಿದೆ, ಅದಕ್ಕೂ ಸಂಭಂಧ ಇದೆಯೇ ಎಂಬುದನ್ನು ನೀವೇ ಆಮೇಲೆ ವಿವರಣೆಯನ್ನು ಕೊಡಿ. ನಾನು ನೀವು ಹೇಳಿದಂಥ ರೀತಿಯಲ್ಲಿ ಏನನ್ನೂ ಮಾತನಾಡಿಲ್ಲ. ಕಾನ್‌ಸ್ಟೇಬಲ್ ಜೀವನದಿಂದ ಪ್ರಾರಂಭ ಮಾಡಿ ಎಲ್ಲವನ್ನೂ ಬಹಳ ಜವಾಬ್ದಾರಿಯಿಂದ ಮಾತನಾಡಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ: ಅವರು ನಿಜವಾಗಲೂ ಸಾಮಾಜಿಕವಾದ ಕೆಲಸ ಮಾಡುತ್ತಾರೆ, ಬಡವರ ಪರವಾಗಿ ಹೋರಾಟ ಮಾಡುತ್ತಾರೆ. ನಾವೆಲ್ಲ ಆ ಮಟ್ಟದಿಂದ ಬಂದಿರತಕ್ಕವರು. ನಾನು ಏಕಾ ಏಕಿ ಯಾರೋ ಟಿಕೆಟ್ ಕೊಟ್ಟರು, ಯಾರದೋ ಹೆಸರಿನಲ್ಲಿ ನಾವೆಲ್ಲಾ ಆಯ್ಕೆಯಾಗಿ ಬಂದಿರತಕ್ಕವರಲ್ಲ. ನಾವು ದಲಿತರು, ಕೂಲಿ ಕಾರ್ಮಿಕರು, ಬಗರ್‌ಹುಕುಂ ಸಾಗುವಳಿದಾರರ ಪರವಾಗಿ ಮೊದಲಿನಿಂದಲೂ ಹೋರಾಟ ಮಾಡಿಕೊಂಡು ಇವತ್ತು ಈ ಸದನದಲ್ಲಿ ಕುಳಿತಿಕೊಳ್ಳಲು ಹಾದಿಯಾಗಿದೆ. ನಾವು ನಮ್ಮ ಕ್ಷೇತ್ರಗಳಲ್ಲಿ ಆ ಜನರಿಗೆ ಎಲ್ಲೂ ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ. ನನ್ನ ಕ್ಷೇತ್ರ ಸೋಷಿಯಲಿಸ್ಟಿಕ್ ಕ್ಷೇತ್ರ ಎಂಬುದು ತಮಗೆ ಗೊತ್ತಿದೆ. ನಮ್ಮಲ್ಲಿ ಗೋಪಾಲಗೌಡರೆನ್ನುವಂಥವರಿದ್ದರು. ಇವತ್ತು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಲ್ಲಿ ಎಷ್ಟು ಚೆನ್ನಾಗಿ ಬಂದಿದೆ ಎಂದರೆ ಎಲ್ಲಾ ಭೂ ಮಾಲೀಕರು ಆ ಆಕ್ಟ್ ಬಂದ್ ತಕ್ಷಣ ಇಂಥವರು ನಮ್ಮ ಜಮೀನನ್ನು ಮಾಡುತ್ತಿದ್ದಾರೆ. ಅವರ ಹೆಸರಿಗೆ ಖಾತೆ ಮಾಡಿಕೊಡಬಹುದು ಎಂದು ಬರೆದುಕೊಟ್ಟಿಬಿಟ್ಟರು. ಅವರು ಲ್ಯಾಂಡ್ ಟ್ರಿಬ್ಯುನಲ್ ಗೆ ಬರಲೇ ಇಲ್ಲ. ಕಾಡಿನಲ್ಲಿ ಯಾರು ಇದ್ದಾರೆ? ಎಂದರೆ 2–3 ಎಕರೆ ಜಮೀನು ಇದ್ದವರು ಉಳುಮೆ ಮಾಡಿಕೊಂಡು ಅಲ್ಲಿಯೇ ಇದ್ದಾರೆ. ಕೂಲಿಕಾರರು ಮತ್ತು ಅವರ ಜೊತೆಗೆ ಒಂದು ಎಕರೆ ಅರ್ದ ಎಕರೆ ಜಮೀನು ಮಾಡುವವರು ಇದ್ದಾರೆ. ಅವರಲ್ಲಿ ಬಡವ ಮತ್ತು ಶ್ರೀಮಂತರೆಂಬ

ವ್ಯತ್ಯಾಸಗಳು ಇರಬಹುದು. ಆದರೆ ಅವರೆಲ್ಲರೂ ಬಹಳ ನೆಮ್ಮದಿಯಿಂದ ಬದುಕಿದ್ದಾರೆ. ಯಾರ ಶೋಷಣೆಗಳು ಕೂಡ ಅಲ್ಲಿ ಇಲ್ಲ. ಯಾವ ಶೋಷಣೆಗಳು ಅಲ್ಲಿ ಇಲ್ಲ. ನಾವು ಏನೇನೋ ಒಂದು ಹಬ್ಬಿಸಿ ಪ್ರಚೋದನೆ ಕೊಟ್ಟು ಅನಾವಶ್ಯಕವಾಗಿ ಅವರು ಇರಲಿಕ್ಕೋಸ್ಕರ ತಾವು ಮಾಡಿಕೊಳ್ಳಲಿಕ್ಕೋಸ್ಕರ ಈ ರೀತಿ ಮಾಡಿದರೆ ಹೇಗೆ? ನೆನ್ನೆ ಟ.ವಿ.ಯಲ್ಲಿ ತಾವು ಗಮನಿಸಿದ್ದೀರಿ ಎಂದುಕೊಳ್ಳುತ್ತೇನೆ. ಒಬ್ಬ ಹೆಣ್ಣು ಮಗಳು ಹೇಳುತ್ತಾಳೆ ನೋಡಿ ಅವರಿಗೆ ಊಟ ಹಾಕಿದರೆ ಪೋಲೀಸಿನವರು ಹೊಡೆಯುತ್ತಾರೆ. ಊಟ ಹಾಕದೇ ಹೋದರೆ ಅವರು ನಮ್ಮನ್ನು ಹೊಡೆಯುತ್ತಾರೆ. ನಾವು ಹೇಗೆ ಬದುಕಬೇಕು? ಅಲ್ಲಿ ಪರಿಸ್ಥಿತಿ ಇರುವುದು ಹೀಗೆ. ಈಗ ಚಚೆ ಮಾಡಬೇಕಾಗಿರುವುದು ಅದು. ಅಲ್ಲಿಯ ಜನರನ್ನು ಬಂಧ ವಿಮೋಚನೆ ಮಾಡಿ ಆ ಕಾಡಿನಲ್ಲಿರತಕ್ಕಂಥ ಸುಮಾರು 50–60 ಜನರನ್ನು ವಿಮೋಚನೆ ಮಾಡುವುದು ನಮ್ಮ ಇಡೀ ಸರ್ಕಾರಕ್ಕೆ ಸವಾಲೇ? ನೀವು ಹೇಳಿ ಯಾರಾದರೂ ನಕ್ಸಲೈಟ್ ಅವರನ್ನು ಹಾಗೆ ಹ್ಯಾಂಡಲ್ ಮಾಡಬೇಡಿ. ಬೇರೆ ರೀತಿಯಲ್ಲಿ ಹ್ಯಾಂಡಲ್ ಮಾಡಿ ಎಂದರೆ ತಾವು ಸಲಹೆ ಕೊಡಿ. ಅವರನ್ನು ಯಾವ ರೀತಿಯಾಗಿ ಹ್ಯಾಂಡ್ಲ್ ಮಾಡಬೇಕೆಂದು ಸಲಹೆ ಕೊಡಿ. ಇಲ್ಲಾ, ಅವರು ನಿಮಗೆ ಲಿಂಕ್ ಇದ್ದರೆ ದಯವಿಟ್ಟು ಕರೆದು ಹೇಳಿ. ಅಲ್ಲಿರಬೇಡಿ, ದಯವಿಟ್ಟು ಅವರನ್ನು ಕರೆದು ಹೇಳಿ. ಏಕೆ ಅಲ್ಲಿ ಇರುತ್ತೀಯ? ಏಕೆ ಅನಾವಶ್ಯಕವಾಗಿ ನಮ್ಮ ಪೋಲೀಸರ ಗುಂಡಿಗೆ ಆಹುತಿಯಾಗುತ್ತೀಯಾ? ನೀನು ಯಾರದೋ ಮನೆಯಲ್ಲಿರುತ್ತೀಯ, ಆದರೆ ಪಾಪ ಅಮಾಯಕರು ಅಲ್ಲಿ ಸಾಯುತ್ತಾರೆ. ಏಕೆ ಈ ರೀತಿಯಾಗುತ್ತೀಯ ಎಂದು ಅವರೆನ್ನು ಕರೆದು ಬುದ್ಧಿವಾದ ಹೇಳಿ, ಕರೆದುಕೊಂಡು ಬನ್ನಿ. ಸಾಮಾಜಿಕವಾದ ಅವರು ನಮಗಿಂತ ಚೆನ್ನಾಗಿ ಮಾಡುತ್ತಾರೆಂದರೆ ನಾವು ರಾಜೀನಾಮೆಯನ್ನು ಕೊಡೋಣ. ಅವರ ಕೈಯಲ್ಲಿ ಒಪ್ಪಿಸೋಣ. ಅವರೇ ಮುಖ್ಯಮಂತ್ರಿಗಳಾಗಲಿ, ಅವರೇ ಶಾಸಕರಾಗಲಿ, ಅವರು ಐದು ವರ್ಷ ಈ ರಾಜ್ಯವನ್ನು ಆಳಲಿ. ನಮಗಿಂತ ಚೆನ್ನಾಗಿ ಈ ರಾಜ್ಯವನ್ನು ಐದು ವರ್ಷದೊಳಗೆ ಚೆನ್ನಾಗಿ ಪರಿವರ್ತನೆ ಮಾಡುತ್ತಾರೆಂದರೆ ನಾವು ಕೊಡೋಣವೆಂದು ಹೇಳುವುದು ಬಂದೂಕು ಹಿಡಿದುಕೊಂಡು ಅವರು ಮಾಡಬೇಕೆ? ಆ ಬಂದೂಕಿಗೆ ಭಾಷೆ ಗೊತ್ತೆ? ಅದಕ್ಕೇನಾದರೂ ಕಾನೂನು ಗೊತ್ತಿದೆಯೇ? ಯಾರ ಕೈಯಲ್ಲಿರುತ್ತದೆಯೋ ಅದರ ಹಿಂದೆ ಇರತಕ್ಕಂಥ ಮನಸ್ಸು ಮತ್ತು ಹೃದಯ ಯಾವ ರೀತಿ ಇರುತ್ತದೆಯೋ ಆ ರೀತಿ ಅದು ಕೆಲಸ ಮಾಡುತ್ತದೆ.

ಜನ ನಮ್ಮ ಪರವಾಗುದ್ದಾರೆ, ಕೆಲವು ಜನ ನಮ್ಮ ವಿರುದ್ಧವಾಗಿದ್ದಾರೆ, ಅಥವಾ ಇಲ್ಲಿ ಏನೋ ನಡೆದಿದೆ ಎನ್ನತಕ್ಕ ಭಾವನೆ ಬರುತ್ತದೆ. ಅದನ್ನು ಬಿಟ್ಟು ನಾವು ಅಲ್ಲಿ ತಿಳಿ ವಾತಾವರಣ ತರುವುದಕ್ಕೆ ಕಾನೂನಿನ ವ್ಯವಸ್ಥೆಯು ಚೆನ್ನಾಗಿರುವುದಕ್ಕೆ ಏನೇನು ಮಾಡಿದಿರಿ, ಅವರು ಏನೇನು ಮಾಡಿದರು ಅದನ್ನು ಆಮೇಲೆ ನೋಡೋಣ. ಯಾರು ಏನು ಮಾಡುವುದು, ಅವರವರ ಶಕ್ತಿಯನುಸಾರ ನಡೆಯಲಿ? ನಿಮಗೆ ಶಕ್ತಿಯಿತ್ತು, ಅಲ್ಲಿ ಸೋಷಿಯಲಿಸ್ಟ್ ರೆಡ್ ಫ್ಲಾಗ್ ಅನ್ನು ಸಾಫರನ್ ಮಾಡಿದಿರಿ. ಆ ಶಕ್ತಿ ನಿಮಗೆ ಇತ್ತು ನೀವು ಮಾಡಿಕೊಳ್ಳಿ, ಅವರಿಗಿತ್ತು ಎಂದರೆ ಅವರು ಏನಾದರೂ ಮಡಿಕೊಳ್ಳಲಿ. ಅದಕ್ಕೆ ನಾವು ಹೋಗುವುದಿಲ್ಲ. ಇಲ್ಲಿ ಇರತಕ್ಕಂಥದ್ದು ಇಷ್ಟೆ, ಅಲ್ಲಿ ಕಾನೂನು ಯಾವ ರೀತಿಯಾಗಿ ಇರಬೇಕು ಬೇರೆ ನಾಗರೀಕರು ನೆಮ್ಮದಿಯಿಂದ ಹೇಗೆ ಇರಬೇಕು? ಎನ್ನತಕ್ಕಂಥದ್ದರ ಕಡೆ ಎಲ್ಲರ ಗಮನ ಇರಬೇಕೆ ಹೊರತಾಗಿ ಒಬ್ಬರ ಮೇಲೊಬ್ಬರು ಅಲಿಗೇಷನ್ ಮಾಡಿಕೊಂಡು ಇದು ಪತ್ರಿಕೆಯಲ್ಲಿ ಹೋಗಿ ಮತ್ತೆ ನಾಳೆ ಇದು ರಾದ್ಧಾಂತ ಆಗವುದು ಬೇಡ. ದಯವಿಟ್ಟು ಇದನ್ನು ಇಲ್ಲಿಗೆ ನಿಲ್ಲಿಸಿ.

ಶ್ರೀ ಅರಗ ಜ್ಞಾನೇಂದ್ರ: ತಾವು ಹಿರಿಯರು, ತಮ್ಮ ಬುದ್ದಿವಾದದ ಮಾತುಗಳನ್ನು ಕೇಳಿದ್ದೇವೆ. ತಾವು ಬೆಂಬಲಿಸುವುದಿಲ್ಲವೆಂದು ಹೇಳಿದರೆ ನಮಗೇನೂ ತೊಂದರೆ ಇಲ್ಲ. ಆದರೆ, ಇಲ್ಲಿ ಏನಾಗಿದೆ ಎಂದರೆ ಮಾನ್ಯ ಖರ್ಗೆಯವರು ಗಮನಿಸಬೇಕು. ಇಲ್ಲ ಮಾತಾಡುವಂಥ ಸಂದರ್ಭದಲ್ಲಿ ಯಾರು ಈ ಕೃತ್ಯಗಳನ್ನು ಮಾಡಿ ಮಲೆನಾಡಿನ ನೆಮ್ಮದಿಯನ್ನು ಹಾಳು ಮಾಡಲಿಕ್ಕೆ ಅಲ್ಲಿ ಬಂದು ಸೇರಿಕೊಂಡಿದ್ದಾರೆ, ಅವರ ವೈಭವೀಕರಣ ಆಗಬಾರದು ಎನ್ನುವುದೇ ನಮ್ಮ ಇಷ್ಟ. ಅವರು ಸಾಮಾಜಿಕವಾಗಿ ಹೋರಾಟ ಮಾಡಲಿ. ಖಂಡಿತವಾಗಿ ನಮ್ಮ ಜೊತೆಗೆ ಬರಲಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಲಿ.

ಅಧ್ಯಕ್ಷರು: ಜ್ಞಾನೇಂದ್ರರವರೆ, ಅಲ್ಲಿ ಇರತಕ್ಕಂಥ ಪರಿಸ್ಥಿತಿ ಹೇಳಿ. ನೀವು ಏನಾದರೂ ಹೇಳಿದರೆ ಅವರು ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ: ಆಯಿತು ಸಾರ್, ಮುಗಿಸುತ್ತೇನೆ. ಅಲ್ಲಿ ಪೋಲೀಸಿನ ಬಲವರ್ಧನೆಯಾಗಬೇಕು. ಅವರ ಇಂಟೆಲಿಜೆನ್ಸ್ ಅಲ್ಲಿ

ವೆಂಕಟೇಶ್ ಪೋಲೀಸ್ ಇನ್‌ಫರ್‌ಮ್ಯಾಂಟ್ ಎಂದು ಅವರಿಗೆ ಅನ್ನಿಸಿತು, ಅದಕ್ಕೆ ಅವರನ್ನು ಕೊಂದರು. ಶೇಷಗೌಡರು ಪೋಲೀಸ್ ಇನ್‌ಫರ್‌ಮ್ಯಾಂಟ್ ಎಂದು ಹೇಳಿದರು, ಅದಕ್ಕೆ ಏನಾದರೂ ವಿಚಾರಣೆ ಉಂಟೆ? ಅದಕ್ಕೇನಾದರೂ ವಿಟ್ನೆಸ್ ಇದೆಯೇ? ನಮ್ಮಲ್ಲಿ ಈಗ ಶುರು ಮಾಡಿದ್ದಾರೆ.

ಶ್ರೀ ಡಿ.ಎನ್ ದೇವರಾಜ್: ಅಲ್ಲಿ ಏನಾಗುತ್ತದೆಂದರೆ, ನಕ್ಸಲ್‌ರು ಹೊಡೆದಾಗ ಕೇಸ್ ಅಲ್ಲ. ಜನ ನಕ್ಸಲರಿಗೆ ಹೊಡೆದಾಗ ಕೇಸ್ ಆಗುತ್ತದೆ. ಪೋಲೀಸ್‌ನವರು ಜನರನ್ನು ಹಿಡಿದುಕೊಳ್ಳುತ್ತಾರೆ. ಇವರು ಕಾಡು ಬಿಟ್ಟು ಓಡಿಹೋಗುವುದಿಲ್ಲ. ಅದಕ್ಕೆ ಅಲ್ಲಿರುವ ಜನ ಅವರಿಗೆ ವಾಪಸ್ ಹೊಡೆಯುತ್ತಿಲ್ಲ. ಅದನ್ನು ಏನು ತಿಳಿದುಕೊಂಡಿದ್ದಾರೆಂದರೆ ಅವರ ಪರ ಜನ ಇದ್ದಾರೆಂದು ತಿಳಿದಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಈಗ ಚರ್ಚೆ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ. ನಾನು ಹೊರಗಡೆ ಕುಳಿತುಕೊಂಡು ಟಿ.ವಿ.ಯಲ್ಲಿ ಕೇಳಿದೆ ಮತ್ತು ಇಲ್ಲಿ ಬಂದು ಕೂಡ ಕೇಳಿದೆ. ಇದು ಏನಾಗುತ್ತದೆಂದರೆ ಏನೋ ಕೆಲವು ಜನ ನಕ್ಸಲೈಟ್ ಪರ ಇದ್ದಾರೆ, ಕೆಲವು ಜನ ಅವರ ವಿರುದ್ಧವಾಗಿದ್ದಾರೆ ಎನ್ನುವ ಭಾವನೆಯ ಚಿತ್ರವನ್ನು ಮೂಡಿಸತಕ್ಕಂಥದ್ದು ಸರಿಯಲ್ಲ. ನಾವು ಎಲ್ಲರೂ ಕೂಡ ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು, ಮತ್ತು ಅಲ್ಲಿ ತಿಳಿ ವಾತಾವರಣವನ್ನು ಚಿಕ್ಕಮಗಳೂರಾಗಲಿ, ಮಂಗಳೂರಾಗಲಿ, ಮಲೆನಾಡಿನ ಬೆಲ್ಟ್‌ನಲ್ಲಾಗಲೀ, ನಾಳೆ ಶಿವಮೊಗ್ಗದಲ್ಲಾಗಲಿ, ಬೇರೆ ಕಡೆಗೆ ಕೂರ್ಗ್‌ನಲ್ಲಾಗಲಿ, ಇದು ಎಲ್ಲಾಕಡೆ ಆಗಬಹುದು. ಇದನ್ನು ತಡೆಗಟ್ಟುವ ದೃಷ್ಟಿಯಿಂದ ನಾವು ಎಲ್ಲರೂ ಏನು ಮಾಡಬಹುದು ಎಂದು ಯೋಚನೆ ಮಾಡಬೇಕೇ ಹೊರತಾಗಿ ನೀವು ಹಾಗೆ ಮಾಡಿದಿರಿ, ನೀವು ಹೀಗೆ ಮಾಡಿದಿರಿ..........

ಶ್ರೀ ವಿ. ಸುನಿಲ್ ಕುಮಾರ್: ಸರಿ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಇರಿ, ನೀವು ಮಾತನಾಡುವಾಗ ನಾನು ಅಡ್ಡಿ ಮಾಡಿದೆನೆ? ಅದನ್ನು ಬೆಳೆಸಿಕೊಂಡು ಹೋದರೆ ನಿಜವಾಗಲೂ ಸಮಾಜದಲ್ಲಿ ಒಂದು ಬಾವನೆ ಬರಬಹುದು. ವಿಧಾನ ಸಭೆಯಲ್ಲಿ ಕೆಲವು

ಫೇಲಾಗಿದೆ. ಅದನ್ನು ಸರಿಪಡಿಸದ ಹೊರತು ಯಾವುದನ್ನು ಸರಿಮಾಡಲಿಕ್ಕೆ ಸಾಧ್ಯವಿಲ್ಲ. ಇದನ್ನು ಸರಿಯಾದಂಥ ರೀತಿ ಯಾವುದೇ ಸರ್ಕಾರಗಳು ಇದುವರೆಗೆ ಮಾಡಲೇ ಇಲ್ಲ. ಈಲಾದರೂ ಕೂಡ ಈಗೇನು, ನಮ್ಮ ಗೃಹ ಮಂತ್ರಿಗಳು ನೆನ್ನೆ ಹೇಳಿದ್ದಾರೆ. ಬೆಂಗಳೂರಿಗೆ ಒಂದು ಸ್ಪೆಷಲ್ ಸ್ಕ್ವ್ಯಾಡ್ ಅನ್ನು ಮಾಡುತ್ತೇನೆಂದು ಹೇಳಿದ್ದಾರೆ. ಬೆಂಗಳೂರಿಗೆ ಸ್ಕ್ವ್ಯಾಡ್ ರಚಿಸಿ ಅದಕ್ಕೆ ಯುವಕರನ್ನು ತುಂಬಿ ಅದಕ್ಕೆ ಏನೇನು ಪರಿವರ್ತನೆಗಳನ್ನು ಮಾಡಬೇಕೋ ಅದನ್ನು ಸರಿಮಾಡಬೇಕೋ ಅದನ್ನು ಮಾಡಿ. ಅವರನ್ನು ಮಾತುಕತೆಯ ಮೂಲಕ ಹೊರಕ್ಕೆ ತರುವುದಕ್ಕೆ ಸಾಧ್ಯವಾಗುವುದಾದರರೆ ಅದನ್ನು ಕೂಡ ಯಾರನ್ನಾದರೂ ಸಮಾಜ ಕಾರ್ಯಕರ್ತರನ್ನು ಉಪಯೋಗಿಸಿ ಅದನ್ನು ಮಾಡುವುದರಲ್ಲಿ ನಮ್ಮದೇನೂ ತೊಂದರೆ ಇಲ್ಲ. ಅಲ್ಲಿಗೆ ಒಂದು ಪಿಡುಗು ಮುಗಿದು ಹೋಯಿತು. ಅಲ್ಲಿ ಶಾಂತಿಯ ವಾತಾವರಣ ನಿರ್ಮಾಣವಾದರೆ ಸಾಕು. ಮಾನ್ಯ ಖರ್ಗೆಯವರು ಹೇಳಿದ ಹಾಗೆ, ದಲಿತರು, ಬಡವರು, ಒಂದು ರೀತಿಯಾಗಿ ಅವರ ಜೀವನ ಅವರು ಮಾಡಿಕೊಂಡು ನೆಮ್ಮದಿಯಿಂದ ಬದುಕುವಂಥವರಿಗೆ ಈ ರೀತಿಯಾಗಿ ಮಾಡಿದರೆ ಹೇಗೆ? ಇದು ಒಂದು ದಿನ ಎಂಡ್ ಆಗಬೇಕು. ನಮ್ಮ ವಿನಂತಿ ಇಷ್ಟೆ. ಯಾರು ಯಾರ ವಿರುದ್ಧ ಬೇಕಾದರೆ ಹೋರಾಟ ಮಾಡಲಿ, ನಾವೆಲ್ಲ ಇಲ್ಲಿಗೆ ಬರುತ್ತೇವೆಂದು ನಮಗೇನೂ ಗೊತ್ತಿರಲಿಲ್ಲ. ಮಾಡಿದೆವು ಬಂದೆವು, ನಾವು ಇಲ್ಲಿ ಶಾಶ್ವತ ಎಂದೇನಿಲ್ಲ. ಯಾರು ಬೇಕಾದರೂ ಇಲ್ಲಿಗೆ ಬರಬಹುದು. ಅದಲ್ಲ, ಆದರೆ ಬಂದೂಕು ಹಿಡಿದುಕೊಂಡು ಬಾಂಬ್ ಹಿಡಿದುಕೊಂಡು ಮಾಡುತ್ತೇವೆಂದರೆ ಹೇಗೆ? ನೆನ್ನೆ ಪೋಲೀಸ್ ನವರು ಹೋಗಿದ್ದಾರೆ, ಯಾರನ್ನು ಹೊಡೆದಿದ್ದಾರೆ, ಯಾರನ್ನು ಬಿಟ್ಟಿದ್ದಾರೆನ್ನುವ ವಿಮರ್ಶೆಗೆ ನಾನು ಹೋಗುವುದಿಲ್ಲ. ಬಂದೂಕು ಹಿಡಿದು ಕೊಂಡವರ ಎದುರುಗಡೆ ಕೋಲು ಹಿಡಿದುಕೊಂಡು ಯುದ್ಧಮಾಡಿ ಎಂದು ಇವರಿಗೆ ಹೇಳುವುದಕ್ಕೆ ಆಗುತ್ತದೆಯೇ? ಅವರು ಬಂದೂಕು ಚಲಾಯಿಸಬೇಕಾಗುತ್ತದೆ. ಅದರಿಂದ ಇದನ್ನು ದಯವಿಟ್ಟು ನಾವು ಮಾತನಾಡುವಾಗ ವಿಮರ್ಶೆ ಮಾಡುವಾಗ ಆ ಭಾಗದ ಜನರ ನೆಮ್ಮದಿ ಆ ಭಾಗದ ಜನರ ಒಳ್ಳೆಯ ಬದುಕನ್ನು ಹಾರೈಸುವಂಥ ನಿಟ್ಟಿನಲ್ಲಿ ಎಚ್ಚರಿಕೆ ಯನ್ನು ಅವರಿಗೆ ಕೊಡಬೇಕೆಂದು ಸದನದ ಮೂಲಕ ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ಬಹುಶಃ ಅದು ಬಹಳ ಸೂಕ್ಷ್ಮವಾಗಿರುವಂಥ ವಿಚಾರವಾಗಿರುವುದರಿಂದ ನಾವು ಹೆಚ್ಚಿಗೆ ಆಳಕ್ಕೆ ಹೋಗಲಿಕ್ಕೆ

ಸಾಧ್ಯವಾಗುವುದಿಲ್ಲ. ಇನ್ನು ಮಾತನಾಡುವುದಾದರೆ ಸಾಕಷ್ಟು ಮಾತುಗಳು Eª É £Áª À ª ÀÄvÀÁqÀª À¢ ®è KPÉAzÀgÉ EEzÀ law and order situation ಗೆ ಮತ್ತು ಬೇರೆ ಬೇರೆ ಸಂದರ್ಭಕ್ಕೆ ಸಂಭಂಧ ಪಟ್ಟಿರತಕ್ಕಂಥದ್ದು ಆಗಿರುವುದರಿಂದ ನಾವು ಮಾತನಾಡುವುದಿಲ್ಲ. ಅವಕಾಶಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ನಾನು ಒಂದು ಸಲಹೆ ಕೊಡುವುದಕ್ಕೆ ಇಚ್ಛೇಸುತ್ತೇನೆ. ಏನೆಂದರೆ ಆ ಭಾಗದಲ್ಲಿ ನಕ್ಸಲೈಟ್ ಚಟುವಟಿಕೆಗಳಿ ಬೆಳೆಯಬಾರದು ಎಂದು ಹಿಂದೆ 2002 ರಲ್ಲಿ ವಿ.ಕೆ.ಗೋರೆ ಅವರ ನೇತೃತ್ವದಲ್ಲಿ ಮತ್ತು ಚಿರಂಜೀವಿ ಸಿಂಗ್‌ರವರು ಮತ್ತು planning department ನ ಮೆಂಬರ್ ಒಳಗೊಂಢಂಥ 3–4 ಜನರಿರುವ ಕಮಿಟಿಯನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಬಹುಶಃ ಅದರಲ್ಲಿ ಬಳಿಗಾರ್‌ರವರು ಇದ್ದ ಹಾಗೆ ಕಾಣುತ್ತದೆ. ಅಭಿವೃದ್ಧಿ ಕಾರ್ಯಕ್ಕಾಗಿ ಅಲ್ಲಿ ಏನು ಆಗಬೇಕು ಸ್ಕೂಲ್ ರಸ್ತೆ, ಕುಡಿಯುವುದಕ್ಕೆ ನೀರು, ವಿದ್ಯುತ್ ಇದರ ಬಗ್ಗೆ ಗಂಭೀರವಾದಂಥ ಆಲೋಚನೆ ಮಾಡಿ ವರದಿಯನ್ನು ಮಾಡಿ ಕೊಡಿ ಎಂದು ಆ ಕಮಿಟಿಯನ್ನು ಅಲ್ಲಿಗೆ ಕಳುಹಿಸಲಾಗಿತ್ತು. ಅದರ ಆಧಾರದ ಮೇಲೆ ಗೋರೆಯವರು ಮತ್ತು ಚಿರಂಜೀವಿ ಸಿಂಗ್ ರವರು ಒಂದು ವರದಿ ಕೊಟ್ಟರು. ಸುಮಾರು 67 ಕೋಟಿ ರೂಪಾಯಿ ಯೋಜನೆಯನ್ನು ತಂದಿದ್ದರು. ಅದನ್ನು ಅನುಷ್ಠಾನದಲ್ಲಿ ತರಬೇಕೆಂದು ಪ್ರಾರಂಭದಲ್ಲಿ 5–10 ಕೋಟಿಯನ್ನು ಬಿಡುಗಡೆ ಮಾಡತಕ್ಕಂಥ ಕೆಲಸ ಆಯಿತು. ಆದರೆ, ಅದು ಅಲ್ಲಿಗೆ ನಿಂತು ಹೋಯಿತು. ಈಗ ಇನ್ನು ಸಮಸ್ಯೆ ಹೆಚ್ಚಿನ ರೀತಿಯಲ್ಲಿ ಆಗಿರುವುದರಿಂದ ನ್ಯಾಚುರಲ್ಲಿ ಆಗ 67 ಕೋಟಿ ರೂಪಾಯಿ ಅಂದರೆ ಈಗ ಅದು ಸುಮಾರು 100–200 ಕೋಟಿ ರೂಪಾಯಿಗಳಿಗೆ ಬರಬಹುದು. ಅದಕ್ಕೆ ಆ ಸಮಿತಿಯು ವರದಿಯ ಆಧಾರದ ಮೇಲೆ ಎಲ್ಲೆಲ್ಲಿ ಈ ಸಮಸ್ಯೆಗಳು ಇವೆ, ಆ ಸಮಸ್ಯೆಯನ್ನು ಕೂಡ ಬಗೆಹರಿಸತಕ್ಕಂಥದ್ದು ಮತ್ತು ಅವರಿಗೆ ಸಮಸ್ಯೆಗೆ ಸ್ಪಂದಿಸತಕ್ಕಂಥ ದೃಷ್ಟಿಯಿಂದ ಆ ಕಮಿಟಿಯ ರಿಪೋರ್ಟ್ ಅನ್ನು ಅನುಷ್ಠಾನಕ್ಕೆ ತರುವಂತೆ ಮಾಡಬೇಕು. ಇಲ್ಲಾಂದ್ರೆ ಇನ್ನೊಮ್ಮೆ ಯಾರಿಗಾದರೂ 3–4 ಜನ experts ಕಳುಹಿಸಿ ನಿಜವಾದಂಥ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, development ದೃಷ್ಟಿಯಿಂದ ನಾವು development ಮಾಡಿದಮೇಲೂ ಕೆಲವು ಜನ ತಮಗೆ ಬೇಕಾದಂಥ

ತತ್ವಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಬೇರೆ ಬೇರೆ ಮಾರ್ಗಗಳನ್ನು ಹುಡುಕಿಕೊಂಡರೆ ಅದಕ್ಕೆ ಸರ್ಕಾರ ಇದೆ, ಜನರು ಇದ್ದಾರೆ, ಬೆಂಬಲವನ್ನು ಯಾವುದಕ್ಕೆ ಕೊಡಬೇಕು ಕೊಡಬಾರದು ಎನ್ನುವುದರ ಬಗ್ಗೆ ಜನರು ನಿರ್ಧರಿಸುತ್ತಾರೆ. ಆದರೆ ಅಭಿವೃದ್ಧಿಯ ಕೆಲಸಕ್ಕೆ ನಾವು ಆ ಬಾಗದಲ್ಲಿ ªÀÄÆ®ÀvÀ ÉPÀ ÉqÀ ÀÉ º ÉÃz ÀÉ R ArvÀ ÀV D grievances ಅನ್ನು ಯಾರು ಬೇರೆಯವರು ಎತ್ತಿಕೊಳ್ಳುತ್ತಾರೋ ಅವರ ಜೊತೆಯಲ್ಲಿ ಹೋಗುತ್ತಾರೆ. ಯಾರ್‍ಯಾರು ಅವರ ಸಮಸ್ಯೆಗಳನ್ನು ಲೀಡ್ ಮಾಡುತ್ತಾರೋ ಅವರ ಜೊತೆಯಲ್ಲಿ ಹೋಗುತ್ತಾರೆ. ಅವರ ನಕ್ಸಲೈಟ್ ಅಥವಾ ಮಾವೋವಾದಿಯೇ ಇರಬಹುದು. ಇನ್ನೊಂದು ವಾದಿಯೇ ಇರಬಹದು ಅಥವಾ extreme views ಇರತಕ್ಕಂಥ ಜನರೇ ಇರಬಹುದು. ಇದನ್ನು ತಡೆಗಟ್ಟಬೇಕಾದರೆ ಖಂಡಿತವಾಗಿ ಇದರ ಬಗ್ಗೆಯೂ ಯೋಚಿಸಿ ತಕ್ಷಣ ಕಾರ್ಯೋನ್ಮುಖರಾಗಿ ಅಲ್ಲಿಗೆ ಕಳುಹಿಸಿ ಇದರ ಬಗ್ಗೆ ಕೂಡ ತಾವು ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕರು ಇದರ ಬಗ್ಗೆ ಮಾತನಾಡಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಾನು ಈ ವಿಷಯುದ ಬಗ್ಗೆ ಮಾತನಾಡುವುದಕ್ಕೋಸ್ಕರ ಬೆಳಿಗ್ಗೆ ಪತ್ರ ಕೊಟ್ಟಿದ್ದೇನೆ. ಸದರಿ ಚರ್ಚೆಯನ್ನು ಈಗ ಮುಂದುವರೆಸುತ್ತೀರಾ ಅಥವಾ ಬ್ರೇಕ್ ಮಾಡಿ ಆ ನಂತರ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಈ ವಿಷಯವನ್ನು ಬೇಗನೇ ಮುಕ್ತಾಯ ಮಾಡೋಣ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಈ ವಿಷಯವನ್ನು ಪ್ರಸ್ತಾಪ ಮಡಬೇಕೆಮದು ಬೆಳಿಗ್ಗೆ ಬಂದು ನಾನು ನಿಮಗೆ ಪತ್ರ ಕೊಟಿದ್ಧೇನೆ. ನಾನು ಮಾತನಾಡುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ನಿಮಗೂ ಸಹ ಅವಕಾಶ ಕೊಡುತ್ತೇನೆ. ಮೊದಲು ಅವರು ಏನು ಹೇಳುತ್ತಾರದೆಂಬುದನ್ನು ಕೇಳೋಣ.

ಶ್ರೀ ಎಂ.ಪಿ.ಪ್ರಕಾಶ್: ಬಹಳ ಸೂಕ್ಷ್ಮವಾದ ವಿಚಾರಗಳು ಇದಾಗಿವೆ. ಆದ್ದರಿಂದ ಎರಡೂ ಕಡೆಯಿಂದಲೂ ಇದರ ಬಗ್ಗೆ ಯೋಚನೆ ಮಾಡಬೇಕಾಗಿರುವ ಕಾರಣದಿಂದ ಇದನ್ನು ಮುಕ್ತಾಯಗೊಳಿಸಿ ಎಂದು ಅನೇಕ ಹಿರಿಯರು ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಮಾನ್ಯ ಶ್ರೀ ರಾಮ ರೆಡ್ಡಿಯವರು ಮಾತನಾಡುವುದರ ಬಗ್ಗೆ ನಮ್ಮದ್ಯಾರದ್ದೂ ಆಕ್ಷೇಪಣೆ ಇಲ್ಲ. ಆದರೆ, ಇಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಕ್ಸಲ್‌ಬರಿ ಹೋರಾಟದಲ್ಲಿ ಚಾರು ಮುಜಂದಾರ್ ಮತ್ತು ಕರಣ್‌ಸರಾಯ್‌ರವರು ಪ್ರಾರಂಭ ಮಾಡಿರತಕ್ಕಂಥದ್ದು. ಅವರ ಇಡೀ ಐಡಿಯಾಲಜಿ ಬಗ್ಗೆ ಏನು ಪ್ರಸ್ತಾಪ ಆಯಿತು, ಅವರ ತಾತ್ವಿಕ ಚಿಂತನೆಗಳು ಯಾವ ರೀತಿಯದಾಗಿದ್ದವೆಂದರೆ, ಸಾಂಕೇತಿಕವಾಗಿ ಪೋಲಿಸರು ಸರ್ಕಾರದ ಪ್ರತಿನಿಧಿಗಳು, ಆ ಕಾರಣಕ್ಕಾಗಿ ವ್ಯಕ್ತಿಗತವಾಗಿ ಅವರನ್ನು ಕೊಲ್ಲುವುದರ ಮೂಲಕ ಈ ಒಂದು ಸರ್ಕಾರಕ್ಕೆ ಧಿಕ್ಕಾರ ಮಾಡುತ್ತೇವೆಂಬ ಮಾತು ಇತ್ತು. ಆಗ ಇದ್ದಂಥ ಕಮ್ಯುನಿಸ್ಟ್ ಪಕ್ಷ ಇವತ್ತೂ ಕೂಡ ಅಧಿಕಾರದಲ್ಲಿದೆ. ಮಾನ್ಯ ಜ್ಯೋತಿ ಬಸುರವರು ಮುಖ್ಯ ಮಂತ್ರಿಗಳಾಗಿದ್ದರು. ಈಗ ಮಾನ್ಯ ಬುದ್ದದೇವ ಬಟ್ಟಾಚಾರ್ಯರು ಇದ್ದಾರೆ. ಆ ಸನ್ನಿವೇಶದಲ್ಲಿ ವ್ಯಕ್ತಿಗಳನ್ನು ಹರಣ ಮಾಡುವುದರ ಮೂಲಕ ನೀವು ಏನನ್ನು ಸಾಧಿಸುವ ಸಾದ್ಯತೆ ಇಲ್ಲ ಎನ್ನುವಂಥ ಮಾತು ಬಂದಿದೆ.

ಶ್ರೀ ಕೆ.ಆರ್ ರಮೇಶ್ ಕುಮಾರ್: ತಾವು ತಪ್ಪು ಹೇಳುತ್ತಿದ್ದೀರಿ.

ಶ್ರೀ ಎಂ. ಪಿ.ಪ್ರಕಾಶ್: no sir, I will come back to you .

ಶ್ರೀ ಕೆ.ಆರ್ ರಮೇಶ್‌ಕುಮಾರ್: ಇದು ಪ್ರಾರಂಭವಾಗಿದ್ದು 1970 ರಲ್ಲಿ.

ಶ್ರೀ ಎಂ. ಪಿ.ಪ್ರಕಾಶ್: ಹೌದು

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: 1970 ರಲ್ಲಿ ಪ್ರಾರಂಭವಾಗಿಲ್ಲ. ಇದು 1967 ರಲ್ಲಿ ಪ್ರಾರಂಭವಾಯಿತು.

(ಗೊಂದಲ)

ಶ್ರೀ ಕೆ.ಆರ್ ರಮೇಶ್‌ಕುಮಾರ್: ಮಾನ್ಯ ಜ್ಯೋತಿ ಬಸುರವರು 1977 ರಲ್ಲಿ ಮುಖ್ಯಮಂತ್ರಿಗಳಾಗಿದ್ದರು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಾನು ಮಾತನಾಡುವುದಕ್ಕೆ ತಾವು ಅವಕಾಶ ಕೊಡುತ್ತೀರಾ?

ಅಧ್ಯಕ್ಷರು: ಅವರೇನು ಹೇಳುತ್ತಾರೆಂಬುದನ್ನು ಕೇಳಿ. ಅನಂತರ ತಮಗೂ ಸಹ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಈ ರೀತಿಯಾದರೆ ಹೇಗೆ? ನೀವು ಎದ್ದೇಳುತ್ತಿದ್ದರೆ ಕುಳಿತುಕೊಳ್ಳಿ ಎಂದು ಅವರು ಹೇಳುತ್ತಿದ್ದಾರೆ.

ಅಧ್ಯಕ್ಷರು: ಅವರು ಏನೋ ಹೇಳುತ್ತಿದ್ದಾರೆ ಅದನ್ನು ಕೇಳಿ. ಆ ನಂತರ ತಮಗೂ ಸಹ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನೀವು ಸದನವನ್ನು ಮುಂದೂಡಬೇಕೆಂದು ಎದ್ದೇಳುವಾಗ ಒಂದು ನಿಮಿಷ ಕುಳಿತುಕೊಳ್ಳಿ ಎಂದು ಅವರು ಹೇಳಿದರೆ ತಾವು ಕುಳಿತುಕೊಳ್ಳುತ್ತೀರಿ. ನಾವು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದರೆ ಕೊಡುತ್ತಿಲ್ಲ.

ಅದ್ಯಕ್ಷರು: ಶ್ರೀರಾಮ ರೆಡ್ಡಿಯವರೆ, ನಿಮ್ಮದು ಅತಿಯಾಯಿತು. ಆ ಭಾಗದ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಕ್ಕೆ ನಾನು ಅವರುಗಳಿಗೆ ಅವಕಾಶ ಕೊಟ್ಟಿದ್ದೇನೆ. ಈಗ ಮಾನ್ಯ ಕಾನೂನು ಇಲಾಖೆಯ ಸಚಿವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ಧೇನೆ. ಅವರು ಹೇಳುವುದಕ್ಕೆ ತಾವು ಮೊದಲು ಕೇಳಿ. ಆನಂತರ ತಮಗೂ ಸಹ ಅವಕಾಶ ಕೊಡುತ್ತೇನೆ. are you dictating?

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಏನಿದು?

ಅದ್ಯಕ್ಷರು: ನಿಮ್ಮದು ಅತಿಯಾಯಿತು.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಿಮ್ಮದು ಜಾಸ್ತಿ

(ಗೊಂದಲ)

ಅದ್ಯಕ್ಷರು: ಸುಮ್ಮನೆ ಕುಳಿತುಕೊಳ್ಳಿರಿ ನನಗೆ ಗೊತ್ತಿದೆ

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಸದನ ಮುಂದೂಡಲಿಕ್ಕೆ ತಾವು ಎದ್ದೇಳುತ್ತಿರುವಾಗ ಅವರು ಕುಳಿತುಕೊಳ್ಳಿ ಎಂದು ಹೇಳಿದಾಗ ತಾವು ಕುಳಿತುಕೊಳ್ಳುತ್ತೀರಿ.

ಅದ್ಯಕ್ಷರು: ಕುಳಿತುಕೊಳ್ಳಿ ಎಂದು ಹೇಳದ ಎದ್ದು ಓಡಾಡಿ ಎಂದು ಹೇಳುವುದಕ್ಕೆ ಆಗುತ್ತದೆಯೇ? (ಗೊಂದಲ) ಮಾತನಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ ಈಗ ಕುಳಿತುಕೊಳ್ಳಿ ಎಂದು ಹೇಳಿದರೂ ಕೂಡ ಈ ರೀತಿಯಾಗಿ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಹಾಗಾದರೆ ಇದು ಘನತೆ ತರತಕ್ಕಂತ ವಿಚಾರವೇ?

ಅದ್ಯಕ್ಷರು: ಈಗ ಕುಳಿತುಕೊಳ್ಳಿ, ಅವರು ಮತನಾಡಿದ ನಂತರ ತಮಗೂ ಅವಕಾಶ ಕೊಡುತ್ತೇನೆ. ಎಲ್ಲದಕ್ಕೂ ಒಂದು ಮಿತಿ ಇದೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಾವೂ ಕೂಡ ಈ ಸದನಕ್ಕೆ ಆಯ್ಕೆಯಾಗಿ ಬಂದಿದ್ದೇವೆ. ನಿವು ಆ ರೀತಿಯಾಗಿ ಮಾತನಾಡುವುದು ಸರಿಯಲ್ಲ.

ಅದ್ಯಕ್ಷರು: ನೀವು ಸದಸ್ಯರು ಮತ್ತು 224 ಜನರೂ ಸಹ ಈ ಮನೆಯ ಸದಸ್ಯರು.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಎಲ್ಲರು ಬಂದಿರುವಂತೆ ನಾನೂ ಕೂಡ ಬಂದಿದ್ದೇನೆ.

(ಗೊಂದಲ)

ಅದ್ಯಕ್ಷರು: ನೀವು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ. ಮತ್ತೆ ಬೆರೆಯವರು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆಂಬುದರ ಬಗ್ಗೆ ನಿಮಗೆ ಪರಿಜ್ಞಾನ ಇದೆಯೇ? (ಗೊಂದಲ) ಸುಮ್ಮನೆ ಕುಳಿತುಕೊಳ್ಳಿ. ನನಗೆ ಎಲ್ಲವೂ ಗೊತ್ತಿದೆ. (ಗೊಂದಲ) ಎಲ್ಲದಕ್ಕೂ ಒಂದು ಮಿತಿ ಇಟ್ಟುಕೊಂಡು ತಾವು ಹಿರಿಯ ಸದಸ್ಯರೆಂದು ನಾವು ಗೌರವ ಕೊಡುತ್ತಾ ಬರುತ್ತಿದ್ದರೆ ತಾವು ಈ ರಿತಿ ಮಾತನಾಡುತ್ತಿದ್ದೀರಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಾನು ಮಾತನಾಡಬೇಕೆಂದು ನಿಮಗೆ ಪತ್ರ ಕೊಟ್ಟಿಲ್ಲವೇ?

ಅದ್ಯಕ್ಷರು: ನಿಮಗೂ ಅವಕಾಶ ಕೊಡುತ್ತೇನೆ. ಆದರೆ ಅವಕಾಶ ಕೊಡತಕ್ಕಂಥದ್ದು ನನಗೆ ಬಿಟ್ಟ ವಿಷಯ. ಅವಕಾಶ ಕೊಡುತ್ತೇನೆ ಕುಳಿತುಕೊಳ್ಳಿ

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಮಾತನಾಡುವುದಕ್ಕೋಸ್ಕರ ನಿಮ್ಮ ಅನುಮತಿಗಾಗಿ ನಿಮಗೆ ಪತ್ರ ಕೊಟ್ಟಿಲ್ಲವೇ?

ಅದ್ಯಕ್ಷರು: ಕೊಟ್ಟಿದ್ದಿರಿ, ಸಮಯ ಕೊಡುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಪತ್ರ ಕೊಟ್ಟಿರುವುದಕ್ಕೋಸ್ಕರ ನನಗೆ ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

ಅದ್ಯಕ್ಷರು: ಕೊಟ್ಟಿದ್ದೀರಿ, ಈಗ ಕುಳಿತುಕೊಳ್ಳಿ ಆನಂತರ ಕೊಡುತ್ತೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನೀವು ಎದ್ದೇಳುತ್ತಿದ್ದವರು ಕುಳಿತು ಕೊಳುತ್ತೀರಿ.

ಅದ್ಯಕ್ಷರು: ಕಾನೂನು ಸಚಿವರು ಮಾತನಾಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ. ಆದ್ದರಿಂದ ಅವರು ಏನು ಹೇಳುತ್ತಾರೆ ಕೇಳೋಣ. ಆ ನಂತರ ಕೊಡುತ್ತೇನೆಂದು ಹೇಳುತ್ತಿದ್ದೇನೆ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ಈಗ ರಿಪ್ಲೈ ಕೊಡುತ್ತಿದ್ದಾರೆ.

ಅದ್ಯಕ್ಷರು: that is not the reply

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ಈಗ ರಿಪ್ಲೈ ಕೊಡುವುದಕ್ಕೆ ಎದ್ದು ನಿಂತುಕೊಂಡಿದ್ದಾರೆ.

ಅದ್ಯಕ್ಷರು: ಅವರು ರಿಪ್ಲೈ ಕೊಡುತ್ತಿಲ್ಲ. ರಿಪ್ಲೈ ಮಾಡುವುದಕ್ಕೆ ನಾನು ಅವರನ್ನು ಕರೆದಿಲ್ಲ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ರಿಪ್ಲೈ ಮಾಡುವುದಕ್ಕೆ ಎದ್ದಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು. ಅವರು ರಿಪ್ಲೈ ಮಾಡದಿದ್ದರೆ ನಾನು ಕೇಳುತ್ತಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅವರು ಉತ್ತರ ಕೊಡುವುದಕ್ಕಿಂಥ ಮುಂಚೆ ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ಉತ್ತರ ಕೊಡುವುದಕ್ಕೆ ಎದ್ದಿದ್ದಾರೆ. ಆದ್ದರಿಂದ ಮೊದಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನಷ್ಟೆ.

ಅಧ್ಯಕ್ಷರು: ತಾವು ಈಗ ಉತ್ತರ ಕೊಡುತ್ತೀರಾ?

ಶ್ರೀ ಎಂ.ಪಿ.ಪ್ರಕಾಶ್: ಹೌದು. ಈಗ ಸದನವನ್ನು ಮುಂದೂಡಿ, ಊಟವಾದ ನಂತರ ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ಉತ್ತರ ಕೊಡುವುದಕ್ಕೆ ಎದ್ದಿದ್ದಕ್ಕೆ ನಾನು ಎದ್ದು ಕೇಳುತ್ತಿರುವುದು.

ಶ್ರೀ ಎಂ.ಪಿ.ಪ್ರಕಾಶ್: ನಾನು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ ತಕ್ಷಣ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಏನೂ ಇಲ್ಲ. ಏಕೆಂದರೆ ಪ್ರತಿಯೊಬ್ಬರೂ ಮಾತನಾಡುತ್ತೇವೆಂದು ಹೇಳುವಾಗ ಸಮಯವನ್ನು ನಿಗದಿ ಮಾಡಬೇಕಾಗುತ್ತದೆ. ಆ ಭಾಗದಿಂದ ಬಂದಿರತಕ್ಕಂಥ ಶಾಸಕರಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿರತಕ್ಕಂಥದ್ದು ಕೂಡ ಇದೆ. ಮಾನ್ಯ ಶ್ರೀ ರಾಮರೆಡ್ಡಿಯವರು ಮಾತನಾಡುವುದಕ್ಕೆ ಯಾರದೂ ಆಕ್ಷೇಪಣ ಇಲ್ಲ, ಆದರೆ ನಾವು ಹೇಳಿದ್ದೇವೆಂದು ವಾದ ವಿವಾದಕ್ಕೆ ಹೋಗಬಾರದು. ಸ್ಪೀಕರ್ ಸ್ಥಾನಕ್ಕೂ ಒಂದು ಘನತೆ ಇದೆ. ಆದ್ದರಿಂದ, ತಾವು ದಯವಿಟ್ಟು ಕುಳಿತುಕೊಳ್ಳಿ. ತಾವು ಮಾತನಾಡಬೇಕಾದರೆ ಅವರ ಮನವೊಲಿಸಿ ಮಾತನಾಡುವುದಕ್ಕೆ ಅವಕಾಶ ಕೇಳಿ.

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ನಾನು ಅದನ್ನೆ ಕೇಳುತ್ತಿರುವುದು. ತಾವು ಉತ್ತರ ಕೊಡುತ್ತಿದ್ದೀರಿ. ನಾವು ಮಾತನಾಡಿದ ನಂತರ ತಾವು ಉತ್ತರ ಕೊಡಬೇಕು. ನೀವು ಉತ್ತರ ಕೊಟ್ಟ ನಂತರ ನಾನು ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಪಕ್ಕದಲ್ಲಿಯೇ ಇದ್ದೀರಿ. ಅವರನ್ನು ಕುಳ್ಳಿರಿಸಿ.

(ಗೊಂದಲ)

ಅಧ್ಯಕ್ಷರು: ಈಗ ಒಂದು ಕೆಲಸ ಮಾಡೋಣ. ಈಗ ಸದನವನ್ನು ಅಡ್ಜರ್ನ್ ಮಾಡೋಣ. ಅವರು ಮಾತನಾಡಿದ ನಂತರ ತಾವು ಉತ್ತರ ಕೊಡಿ. ಅವರಿಗೂ ಒಂದು ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮ ರೆಡ್ಡಿ: ಅವರು ಉತ್ತರ ಕೊಟ್ಟ ನಂತರ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮೊದಲು ಇವರು ಮಾತನಾಡಲಿ. ಆನಂತರ ಅವರು ಉತ್ತರ ಕೊಡಲಿ.

ಅಧ್ಯಕ್ಷರು: ಆಯಿತು, ಅದಕ್ಕೆ ನಾನು ಒಪ್ಪಿಕೊಂಡಿದ್ಧೇನೆ.

ಶ್ರೀ ಕೆ. ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಮಾತನಾಡಬೇಕಾಗಿದೆ. ಈಗ ದಯವಿಟ್ಟು ಊಟಕ್ಕೆ ಬನ್ನಿ, ಮತ್ತೆ ಸೇರಿದಾಗ ಎಲ್ಲರೂ ಕೂಡ ಮಾತನಾಡೋಣ.

ಶ್ರೀ ಎಂ.ಪಿ.ಪ್ರಕಾಶ್:ಎಲ್ಲರೂ ಮಾತನಾಡುವುದಕ್ಕೆ ಆಗುವುದಿಲ್ಲ. ಆ ರೀತಿಯಾದರೆ ಸದನ ನಡೆಸುವುದಕ್ಕೆ ಸಾದ್ಯವಿಲ್ಲ. ಮಾನ್ಯ ಶ್ರೀರಾಮರೆಡ್ಡಿ ಯವರೊಬ್ಬರು ಮಾತನಾಡಲಿ. ಆನಂತರ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಈಗ ನಾನು ಅಡ್ಜರ್ನ್ ಮಾಡುತ್ತೇನೆ. ಅವರು ಮಾತನಾಡಿದ ನಂತರ ತಾವು ಉತ್ತರ ಕೊಡಿ.

ಶ್ರೀ ಎಂ.ಪಿ.ಪ್ರಕಾಶ್: ಆಯಿತು. ತಾವು ಯಾವ ರೀತಿ ಹೇಳುತ್ತೀರೋ

ಮಾತನಾಡುವುದಕ್ಕೆ ಯಾರಿಗೆ ಅವಕಾಶ ಕೊಡುತ್ತೀರೋ ಅವರುಗಳು ಮಾತನಾಡಿದ ನಂತರ ಸರ್ಕಾರ ಉತ್ತರ ಕೊಡುತ್ತದೆ. ಅವರ ಬಗ್ಗೆ ನಮ್ಮ ದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು: ಈಗ ಸದನವನ್ನು 3.15 ಕ್ಕೆ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮದ್ಯಾಹ್ನ 2.16 ಗಂಟೆಗೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.15 ಗಂಟೆಗೆ ಸೇರಲು ನಿಶ್ಚಯಿಸಿತು)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಸದನವು ಪುನಃ ಮದ್ಯಾಹ್ನ 3 ಗಂಟೆ 40 ನಿಮಿಷಕ್ಕೆ ಆರಂಭಗೊಂಡಿತು.

ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು

ವಿಷಯ: ತಿಪಟೂರು ಡಿವಿಜನ್ ಬೆಸ್ಕಾಂ ಟೆಂಡರ್ ಕುರಿತು

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ): ಮಾನ್ಯ ಅಧ್ಯಕ್ಷರೆ, ಬೆಸ್ಕಾಂ ಸಂಸ್ಥೆಯವರು ಫೆಭ್ರುವರಿ ತಿಂಗಳಿನಲ್ಲಿ ನನ್ನ ತಿಪಟೂರು ಡಿವಿಜನ್ ಗೆ ಬೆಸ್ಕಾಂಗೆ ಒಂದು ಟೆಂಡರ್ ಕರೆದು, ಆ ಟೆಂಡರ್ ಫಾರಂ ನಲ್ಲಿ pre qualification ನಿಗದಿ ಗೊಳಿಸಬೇಕಾದರೆ, ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಕೆಲಸ ಮಾಡಿರಬೇಕು. ಇದರಲ್ಲಿ ಏನಾಗಿದೆಯೆಂದರೆ ಅವರಿಗೆ ಎರಡು ವರ್ಷ ಪ್ಯಾಕೇಜ್ ಅನ್ನು ಮಾಡಿಕೊಡುತ್ತಿದ್ದಾರೆ. ಅದನ್ನು 5 ವರ್ಷಗಳಿಗೆ ರಿನ್ಯೂ ಮಾಡಬಹುದೆಂದು ಅಗ್ರೀಮೆಂಟ್‌ನಲ್ಲಿ ಅದನ್ನು ಸೇರಿಸಿಕೊಂಡಿದ್ದಾರೆ. ಅಗ್ರೀಮೆಂಟ್ ಪ್ರಕಾರ ಒಂದು ಕಂಬ ಮುರಿದರೂ ಕೂಡ ಅವರೇ ಸರಿ ಮಾಡಬೇಕಾಗುತ್ತದೆ. ಒಂದು ತಂತಿ ಕಿತ್ತು ಹೋದರೂ